ಮಂಗಳವಾರ, ಜೂನ್ 8, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 159 | ಪುಟ 10

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ

ಉತ್ತಮ ರೋಗನಿರೋಧಕ ವ್ಯವಸ್ಥೆಗೆ ಪೌಷ್ಟಿಕಾಂಶಗಳು ಅತ್ಯಗತ್ಯ. ಆದರೆ ಕೃತಕವಾಗಿ ತಯಾರಾದ ಪೌಷ್ಟಿಕಾಂಶಗಳ ಅತಿಯಾದ ಬಳಕೆಯೂ ಒಳ್ಳೆಯದಲ್ಲ

ಪಶ್ಚಿಮ ಬಂಗಾಳ: ಸಿಡಿಲಿಗೆ 20 ಮಂದಿ ಸಾವು 8

ಆಳ-ಅಗಲ | ತೈಲ ಕೋಲಾಹಲ

ಕಾಶ್ಮೀರದಲ್ಲಿ ಸೇನೆ ಚಲನವಲನ: ಜನರಲ್ಲಿ ಸಂಚಲನ 9

ಸೆನ್ಸೆಕ್ಸ್	ನಿಫ್ಟಿ	₹/$
52,328 ▲	15,751 ▲	72.80 ▲

ಹಳ್ಳಿಗಳಲ್ಲಿ ಇಳಿಯದ ಸೋಂಕು: ತ್ರಿಸೂತ್ರ ಪ್ರಯೋಗ

• ರಾಜೇಶ್ ರೈ ಚಟ್ಲ

ಪ್ರಜಾವಾಣಿ ವಿಶೇಷ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಪ್ರಕರಣಗಳ ಸರಾಸರಿ ದೃಢ ಪ್ರಮಾಣ ಇಳಿಕೆಯಾದರೂ, ಗ್ರಾಮೀಣ ಪ್ರದೇಶಗಳಲ್ಲಿ ಸೋಂಕು ನಿರೀಕ್ಷಿತ ಮಟ್ಟದಲ್ಲಿ ಕಡಿಮೆಯಾಗಿಲ್ಲ.

ಹತ್ತಕ್ಕೂ ಹೆಚ್ಚು ಜಿಲ್ಲೆಗಳಲ್ಲಿ ತಲಾ 20 ಸಾವಿರಕ್ಕೂ ಹೆಚ್ಚು ಕೋವಿಡ್ ಪ್ರಕರಣಗಳು ಗ್ರಾಮೀಣ ಪ್ರದೇಶಗಳಲ್ಲೇ ಈವರೆಗೆ ದೃಢಪಟ್ಟಿವೆ. ಈ ಜಿಲ್ಲೆಗಳ ಬಹುತೇಕ ಹಳ್ಳಿಗಳಿಗೆ ಸೋಂಕು ವ್ಯಾಪಿಸಿದೆ.

ಇಲಾಖೆಯ ಮಾಹಿತಿ ಪ್ರಕಾರ ಕೋವಿಡ್ ಎರಡನೇ ಅಲೆ ಒಟ್ಟು 29,762 ಕಂದಾಯ ಗ್ರಾಮಗಳ ಪೈಕಿ 20,175 ಗ್ರಾಮಗಳಿಗೆ ಹರಡಿದೆ. 9,587 ಗ್ರಾಮಗಳು ಮಾತ್ರ ಸೋಂಕುಮುಕ್ತವಾಗಿವೆ. ಬಾಗಲಕೋಟೆ, ದಕ್ಷಿಣ ಕನ್ನಡ, ಉಡುಪಿ, ವಿಜಯಪುರ, ಧಾರವಾಡ, ಹಾವೇರಿ, ಕೊಪ್ಪಳ, ರಾಯಚೂರು ಜಿಲ್ಲೆಗಳ ಬಹುತೇಕ ಹಳ್ಳಿಗಳಿಗೆ ಸೋಂಕು ಹರಡಿದೆ.

ಗ್ರಾಮೀಣ ಪ್ರದೇಶಗಳಲ್ಲಿ 18 ವರ್ಷಕ್ಕಿಂತ ಕೆಳಗಿನ 60,376 ಜನರು ಈವರೆಗೆ ಸೋಂಕಿತರಾಗಿದ್ದಾರೆ. 18 ಮತ್ತು ಅದಕ್ಕಿಂತ ಹೆಚ್ಚು ವಯೋಮಾನದ 5,60,696 ಮಂದಿ ಸೋಂಕಿತರಾಗಿದ್ದಾರೆ. 18 ವರ್ಷಕ್ಕಿಂತ ಕೆಳಗಿನ 19 ಮಂದಿ ಹಾಗೂ 18 ವರ್ಷ ದಾಟಿದ 4,948 ಮಂದಿ ಸಾವಿಗೀಡಾಗಿದ್ದಾರೆ. ಸೋಂಕಿತರಿಗಾಗಿ ಗ್ರಾಮ ಪಂಚಾಯಿತಿಮಟ್ಟದಲ್ಲಿ 14,379 ಕೋವಿಡ್ ಆರೈಕೆ ಕೇಂದ್ರಗಳನ್ನು ತೆರೆಯಲಾಗಿದೆ.

'ಸೋಂಕು ನಿಯಂತ್ರಿಸಲು ಆರಂಭದಲ್ಲಿ ಗ್ರಾಮ ಪಂಚಾಯಿತಿ ಮತ್ತು ಗ್ರಾಮಮಟ್ಟದಲ್ಲಿ ಮಾತ್ರ ಎರಡು ಹಂತದಲ್ಲಿ ಕಾರ್ಯಪಡೆ ರಚಿಸಲಾಗಿತ್ತು. ಬಳ್ಳಾರಿ ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿ ಕೋವಿಡ್ ನಿಯಂತ್ರಿಸಲು ಅಲ್ಲಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಕುಟುಂಬ ಆರೋಗ್ಯ ಸಂರಕ್ಷಣಾ ಪಡೆ ರಚಿಸಿ ವಿನೂತನ ಪ್ರಯೋಗ ಮಾಡಿ ಯಶಸ್ವಿಯಾಗಿದ್ದರು.

9ನೇ ಪುಟ ನೋಡಿ

ಗ್ರಾ.ಪಂ: ಊಟ ಯಾರಿಗೆ?

ಕೋವಿಡ್ ವ್ಯಾಪಕವಾಗಿ ಹರಡುತ್ತಿರುವುದರಿಂದ ಗ್ರಾಮ ಪಂಚಾಯಿತಿಗಳ ಲಭ್ಯ ಅನುದಾನದಲ್ಲಿ ಹಳ್ಳಿಗಳಲ್ಲಿ ಊಟ ವಿತರಿಸುವಂತೆ ಸೂಚಿಸಲಾಗಿದೆ. ಪಡಿತರ ಚೀಟಿ ಹೊಂದಿಲ್ಲದವರು ಮತ್ತು ಕುಟುಂಬಕ್ಕೆ ಆದಾಯ ತರುವ ವ್ಯಕ್ತಿ ಕೋವಿಡ್‌ನಿಂದ ಮೃತಪಟ್ಟಿದ್ದರೆ ಅಂಥ ಕುಟುಂಬಗಳ ಸದಸ್ಯರಿಗೆ ಮಾತ್ರ ಊಟ ವಿತರಿಸಬೇಕು ಎಂದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಪಂಚಾಯತ್‌ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ ಸೂಚಿಸಿದ್ದಾರೆ.

ಹಳ್ಳಿಗಳಲ್ಲಿ ಮೂರು ಹಂತದ ಕಾರ್ಯಪಡೆ ಸಕ್ರಿಯವಾಗಿದೆ. ಪ್ರತಿಯೊಬ್ಬರ ಮೇಲೂ ನಿಗಾ ವಹಿಸುವುದರಿಂದ ಶೀಘ್ರದಲ್ಲಿಯೇ ಶೇ 100ರಷ್ಟು ಸೋಂಕು ನಿಯಂತ್ರಣಕ್ಕೆ ಬರುವ ವಿಶ್ವಾಸವಿದೆ

ಕೆ.ಎಸ್. ಈಶ್ವರಪ್ಪ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ

ಪ್ರಜಾವಾಣಿ DH DECCAN HERALD

ಡಿಎಚ್–ಪಿವಿ ಕೋವಿಡ್–19 ಪರಿಹಾರ ಟ್ರಸ್ಟ್

ಲಾಭದ ಉದ್ದೇಶವಿಲ್ಲದ ಸಂಸ್ಥೆಗಳಲ್ಲಿ ಮನವಿ

ಕೋವಿಡ್ ಸಾಂಕ್ರಾಮಿಕದಿಂದ ಮುರಿದ ಬದುಕನ್ನು ಮತ್ತೆ ಕಟ್ಟಬೇಕಾಗಿರುವ ಕಾಲಘಟ್ಟ ಇದು. 'ಡೆಕ್ಕನ್ ಹೆರಾಲ್ಡ್–ಪ್ರಜಾವಾಣಿ ಪರಿಹಾರ ಟ್ರಸ್ಟ್' ಸಹ ಈ ನಿಟ್ಟಿನಲ್ಲಿ ನಮ್ಮ ಗೌರವಾನ್ವಿತ ಓದುಗರಿಂದ ದೇಣಿಗೆ ಸಂಗ್ರಹಿಸಿದೆ. ಈ ದೇಣಿಗೆಯನ್ನು ಪರಿಣಾಮಕಾರಿಯಾಗಿ ಬಳಕೆ ಮಾಡಲು, ಕೋವಿಡ್–19 ಪರಿಹಾರ ಕಾರ್ಯಗಳಲ್ಲಿ ತೊಡಗಿಸಿಕೊಂಡಿರುವ, ಅಸಹಾಯಕರಿಗೆ ಜೀವನೋಪಾಯದ ದಾರಿ ತೋರುವ ಕೆಲಸದಲ್ಲಿ ನಿರತವಾಗಿರುವ ಹಾಗೂ ಲಾಭದ ಉದ್ದೇಶವಿಲ್ಲದಂತಹ ಸಂಸ್ಥೆಗಳು ಮುಂದೆ ಬರಬೇಕು ಎಂದು ಮನವಿ ಮಾಡುತ್ತಿದ್ದೇವೆ. ಅಗತ್ಯ ಇರುವವರಿಗೆ ಹಣಕಾಸಿನ ಸಹಾಯ ನೀಡುವುದು, ನೆರವಿನಹಸ್ತವನ್ನು ಚಾಚುವುದು ಮತ್ತು/ಅಥವಾ ಕೋವಿಡ್‌ನಿಂದಾಗಿ ತೊಂದರೆಗೆ ಒಳಗಾದವರಿಗೆ ಆಸ್ಪತ್ರೆ, ತುರ್ತು ಶಿಬಿರ ಸ್ಥಾಪಿಸುವುದು ಇಲ್ಲವೆ ಆರೋಗ್ಯ ಸೇವೆಯನ್ನು ಒದಗಿಸುವುದು – ಇಂತಹ ಉದ್ದೇಶಗಳನ್ನು ಈ ಸಂಸ್ಥೆಗಳು ಹೊಂದಿರಬೇಕು. ಅಲ್ಲದೆ, ಆದಾಯ ತೆರಿಗೆ ಕಾಯ್ದೆ–1961ರ ಸೆಕ್ಷನ್ 80 ಜಿ ಅಡಿಯಲ್ಲಿ ಮಾನ್ಯತೆಯನ್ನೂ ಪಡೆದಿರಬೇಕು.

ನಿಮ್ಮ ಸಂಸ್ಥೆಯು ಈ ಬಗೆಯದಾಗಿದ್ದರೆ, ***raghavendra.patil@printersmysore.co.in*** ಈ ಇ–ಮೇಲ್ ವಿಳಾಸವನ್ನು ಸಂಪರ್ಕಿಸಬಹುದು. ಸಂಸ್ಥೆಯ ಉದ್ದೇಶ ಪರಿಶೀಲಿಸಲು ಹಾಗೂ ನಮ್ಮ ಗೌರವಾನ್ವಿತ ಓದುಗರಿಂದ ಸಂಗ್ರಹಿಸಲಾಗಿರುವ ಹಣವನ್ನು ವರ್ಗಾವಣೆ ಮಾಡಲು ಅನುವಾಗಲು, 80 ಜಿ ಅಡಿಯಲ್ಲಿ ನಿಮ್ಮ ಸಂಸ್ಥೆಗೆ ಇರುವ ವಿನಾಯಿತಿಗೆ ಸಂಬಂಧಿಸಿದ ದಾಖಲೆ, ಟ್ರಸ್ಟ್ ಡೀಡ್/ಎಂಒಎ ಪ್ರತಿಗಳನ್ನು ಮೇಲ್ ಜೊತೆ ಕಳುಹಿಸಲು ಮನವಿ.

ಕೋವಿಡ್–19 ಪರಿಹಾರ ಹಾಗೂ ಜೀವನೋಪಾಯ ಕಟ್ಟಿಕೊಡಲು ಕೆಲಸ ಮಾಡುವ ಸಂಸ್ಥೆಗಳಿಗೆ ಹಣ ನೀಡುವ ವಿಚಾರದಲ್ಲಿ 'ಡೆಕ್ಕನ್ ಹೆರಾಲ್ಡ್–ಪ್ರಜಾವಾಣಿ ಪರಿಹಾರ ಟ್ರಸ್ಟ್'ನ ತೀರ್ಮಾನವೇ ಅಂತಿಮ.

ಶೇ 75ರಷ್ಟು ಡೋಸ್ ಲಸಿಕೆ ಕೇಂದ್ರದಿಂದಲೇ ಖರೀದಿ: ಪ್ರಧಾನಿ ಮೋದಿ ಘೋಷಣೆ

ಕೋವಿಡ್ ಲಸಿಕೆ ಎಲ್ಲರಿಗೂ ಉಚಿತ

ನವದೆಹಲಿ (ಪಿಟಿಐ): ಕೋವಿಡ್–19ರ ಲಸಿಕೆ ನೀತಿಯಲ್ಲಿನ ಗೊಂದಲ ಪರಿಹರಿಸುವ ದಿಸೆಯಲ್ಲಿ ಕೇಂದ್ರ ಸರ್ಕಾರ ಹೆಜ್ಜೆ ಇರಿಸಿದೆ. 18 ವರ್ಷಕ್ಕಿಂತ ಮೇಲಿನ ಎಲ್ಲರಿಗೂ ಕೋವಿಡ್ ಲಸಿಕೆಯನ್ನು ಉಚಿತವಾಗಿ ನೀಡಲಾಗುವುದು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಸೋಮವಾರ ಘೋಷಿಸಿದ್ದಾರೆ. ಈ ಲಸಿಕೆಗಳನ್ನು ರಾಜ್ಯಗಳಿಗೆ ಕೇಂದ್ರವು ಪೂರೈಸಲಿದೆ. ಜೂನ್ 21ರಿಂದ ಇದು ಜಾರಿಗೆ ಬರಲಿದೆ.

ಭಾರತದಲ್ಲಿ ಲಸಿಕೆ ತಯಾರಿಸುತ್ತಿರುವ ಕಂಪನಿಗಳಿಂದ ಶೇ 75ರಷ್ಟು ಡೋಸ್ ಲಸಿಕೆಗಳನ್ನು ಕೇಂದ್ರ ಸರ್ಕಾರವು ಖರೀದಿಸಲಿದೆ. ರಾಜ್ಯ ಸರ್ಕಾರಗಳಿಗೆ ನಿಗದಿ ಮಾಡಲಾಗಿದ್ದ ಶೇ 25ರಷ್ಟು ಡೋಸ್ ಲಸಿಕೆಗಳು ಇದರಲ್ಲಿ ಸೇರಿವೆ. ಉಳಿದ ಶೇ 25ರಷ್ಟು ಡೋಸ್ ಲಸಿಕೆಗಳು ಖಾಸಗಿ ಆಸ್ಪತ್ರೆಗಳಿಗೆ ಈಗಿನಂತೆಯೇ ಲಭ್ಯವಾಗಲಿವೆ ಎಂದು ಪ್ರಧಾನಿಯವರು ದೇಶವನ್ನು ಉದ್ದೇಶಿಸಿ ಮಾಡಿದ ಭಾಷಣದಲ್ಲಿ ತಿಳಿಸಿದ್ದಾರೆ.

ಲಸಿಕೆಯ ನಿಗದಿತ ದರದ ಜತೆಗೆ, ಗರಿಷ್ಠ ₹150 ಸೇವಾ ಶುಲ್ಕವನ್ನು ಖಾಸಗಿ ಆಸ್ಪತ್ರೆಗಳು ಪಡೆಯಬಹುದು.

ಏಳು ಸಂಸ್ಥೆಗಳು ಕೋವಿಡ್ ವಿರುದ್ಧದ ಲಸಿಕೆಯನ್ನು ದೇಶದಲ್ಲಿ ತಯಾರಿಸುತ್ತಿವೆ. ಮೂರು ಲಸಿಕೆಗಳ ಪ್ರಯೋಗವು ಅಂತಿಮ ಹಂತಕ್ಕೆ ಬಂದಿವೆ. ಬೇರೆ ದೇಶಗಳಿಂದ ಲಸಿಕೆ ಖರೀದಿಸುವ ಪ್ರಕ್ರಿಯೆಗೆ ವೇಗ ತುಂಬಲಾಗಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಈ ಹಿಂದೆ ಇದ್ದ ಲಸಿಕೆ ನೀತಿಯ ಪ್ರಕಾರ, ಕಂಪನಿಗಳು ತಯಾರಿಸುವ ಲಸಿಕೆಗಳ ಪೈಕಿ ಶೇ 25ರಷ್ಟನ್ನು ರಾಜ್ಯ ಸರ್ಕಾರಗಳು ನೇರವಾಗಿ ಖರೀದಿ ಮಾಡಬೇಕಿತ್ತು. 18–44ರ ವಯೋಮಾನದವರಿಗೆ ಹಾಕಲು ಈ ಲಸಿಕೆಗಳನ್ನು ಬಳಸಬೇಕಿತ್ತು. ಆದರೆ, ಜಾಗತಿಕ ಟೆಂಡರ್ ಕರೆದರೂ ಲಸಿಕೆ ಖರೀದಿ ಸಾಧ್ಯವಾಗುತ್ತಿಲ್ಲ. ಹಾಗಾಗಿ, ಕೇಂದ್ರವೇ ಲಸಿಕೆಗಳನ್ನು ಪೂರೈಸಬೇಕು ಎಂದು ಹಲವು ರಾಜ್ಯಗಳ ಮುಖ್ಯಮಂತ್ರಿಗಳು ಪ್ರಧಾನಿಗೆ ಪತ್ರ ಬರೆದಿದ್ದರು. ಕೇಂದ್ರವು ತನ್ನ ಹೊಣೆಗಾರಿಕೆಯಿಂದ ನುಣುಚಿಕೊಳ್ಳುತ್ತಿದೆ ಎಂದು ವಿರೋಧ ಪಕ್ಷಗಳು ಆರೋಪಿಸಿದ್ದವು.

ಬಿಜೆಪಿ–ವಿಪಕ್ಷ ಜಟಾಪಟಿ

ಜನವರಿ 16ರಿಂದ ಏಪ್ರಿಲ್ 30ರವರೆಗೆ ತಯಾರಾದ ಎಲ್ಲ ಲಸಿಕೆಗಳನ್ನೂ ಕೇಂದ್ರವೇ ಖರೀದಿಸಿತ್ತು. ಲಸಿಕೆ ಖರೀದಿಯನ್ನು ವಿಕೇಂದ್ರೀಕರಿಸಬೇಕು ಎಂದು ರಾಜ್ಯಗಳು ಬೇಡಿಕೆ ಇಟ್ಟ ಕಾರಣಕ್ಕೆ ಶೇ 25ರಷ್ಟು ಡೋಸ್ ಲಸಿಕೆ ಖರೀದಿಗೆ ರಾಜ್ಯಗಳಿಗೆ ಅವಕಾಶ ಕೊಡಲಾಯಿತು ಎಂದು ಪ್ರಧಾನಿ ಹೇಳಿದ್ದಾರೆ. ಆದರೆ, ವಿರೋಧ ಪಕ್ಷಗಳು ಈ ವಾದವನ್ನು ತಿರಸ್ಕರಿಸಿವೆ. ಈಗಿನ ಗೊಂದಲಮಯ ಸ್ಥಿತಿಗೆ ಕೇಂದ್ರವೇ ಹೊಣೆ ಎಂದಿವೆ.

'ಲಸಿಕೆಯನ್ನು ಕೇಂದ್ರೀಕೃತವಾಗಿ ಖರೀದಿ ಮಾಡಬೇಕು ಮತ್ತು 18–44ರ ವಯೋಮಾನದವರಿಗೆ ಉಚಿತವಾಗಿ ಹಾಕಿಸಬೇಕು ಎಂಬ ವಿರೋಧ ಪಕ್ಷಗಳ ಬೇಡಿಕೆಯನ್ನು ಒಪ್ಪುವ ಮುನ್ನ ಪ್ರಧಾನಿಯವರು ದೇಶದ ಜನರ ಮೇಲೆ ಭಾರಿ ಹೊರೆ ಹೊರಿಸಿದ್ದಾರೆ. ಪ್ರಧಾನಿಯ ನಿರಂತರ ಸುಳ್ಳುಗಳಿಗೆ ಲಸಿಕೆಯೇ ಇಲ್ಲ' ಎಂದು ಕಾಂಗ್ರೆಸ್ ಮುಖಂಡ ಜೈರಾಮ್ ರಮೇಶ್ ಹೇಳಿದ್ದಾರೆ.

ಪ್ರಧಾನಿಯವರು ತಮ್ಮ ಗೊಂದಲಮಯ ಮತ್ತು ತಾರತಮ್ಯದಿಂದ ಕೂಡಿದ ಲಸಿಕೆ ನೀತಿಯನ್ನು ಸಮರ್ಥಿಸಿಕೊಳ್ಳಲು ಯತ್ನಿಸುತ್ತಿದ್ದಾರೆ ಮತ್ತು ಬಿಜೆಪಿಯೇತರ ಪಕ್ಷಗಳ ಸರ್ಕಾರ ಇರುವ ರಾಜ್ಯಗಳ ಮೇಲೆ ಆರೋಪ ಹೊರಿಸುತ್ತಿದ್ದಾರೆ ಎಂದು ಸಿಪಿಎಂ ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿ ಹೇಳಿದ್ದಾರೆ.

ಇದನ್ನು ಸರ್ಕಾರ ಮೊದಲೇ ಮಾಡಬಹುದಾಗಿತ್ತು. ಸುಪ್ರೀಂ ಕೋರ್ಟ್ ಮಧ್ಯ ಪ್ರವೇಶದಿಂದಾಗಿಯೇ ಎಲ್ಲರಿಗೂ ಉಚಿತ ಲಸಿಕೆ ಸಿಗುವಂತಾಯಿತು ಎಂದು ದೆಹಲಿ ಉಪಮುಖ್ಯಮಂತ್ರಿ ಮನೀಶ್ ಸಿಸೋಡಿಯಾ ಹೇಳಿದ್ದಾರೆ.

ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ಪ್ರಧಾನಿಯ ಕ್ರಮವನ್ನು ಶ್ಲಾಘಿಸಿದ್ದಾರೆ. ಬಿಕ್ಕಟ್ಟುಗಳು ಕಾಣಿಸಿಕೊಂಡಾಗಲೆಲ್ಲ ಮೋದಿ ಅವರು ಮುಂಚೂಣಿಯಲ್ಲಿ ನಿಂತಿದ್ದಾರೆ ಎಂದಿದ್ದಾರೆ.

ದೀಪಾವಳಿವರೆಗೂ ಉಚಿತ ಪಡಿತರ ವಿಸ್ತರಣೆ

ಕೋವಿಡ್-19 ಸಂಕಷ್ಟದಲ್ಲಿ ದೇಶದ ಬಡವರಿಗೆ ಉಚಿತ ಪಡಿತರ ನೀಡುವ ಯೋಜನೆಯನ್ನು ನವೆಂಬರ್‌ವರೆಗೂ ವಿಸ್ತರಿಸಿದ್ದೇವೆ ಎಂದು ಮೋದಿ ಅವರು ಪ್ರಕಟಿಸಿದ್ದಾರೆ.

'ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ ಅಡಿ ನಿಗದಿ ಮಾಡಲಾದ ಪಡಿತರದ ಜತೆಗೆ, ಪ್ರತಿ ವ್ಯಕ್ತಿಗೆ ತಿಂಗಳಿಗೆ 5 ಕೆ.ಜಿ. ಆಹಾರ ಧಾನ್ಯವನ್ನು ಉಚಿತವಾಗಿ ನೀಡುವ ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ್ ಅನ್ನ ಯೋಜನೆಯನ್ನು ದೀಪಾವಳಿವರೆಗೆ ವಿಸ್ತರಿಸಿದ್ದೇವೆ' ಎಂದು ಮೋದಿ ಘೋಷಿಸಿದ್ದಾರೆ.

2020ರ ಮಾರ್ಚ್‌ನಲ್ಲಿ ಕೋವಿಡ್ ಲಾಕ್‌ಡೌನ್ ಘೋಷಿಸಿದ ನಂತರ ಮೂರು ತಿಂಗಳ ಅವಧಿಗಾಗಿ ಈ ಯೋಜನೆಯನ್ನು ಆರಂಭಿಸಲಾಗಿತ್ತು. ಆದರೆ ನಂತರ ಯೋಜನೆಯನ್ನು ನವೆಂಬರ್‌ವರೆಗೂ ವಿಸ್ತರಿಸಲಾಗಿತ್ತು. ಈಗ ದೇಶದಾದ್ಯಂತ ಕೋವಿಡ್‌ನ ಎರಡನೇ ಅಲೆಯಲ್ಲಿ ಭಾಗಶಃ ಲಾಕ್‌ಡೌನ್ ಜಾರಿಯಲ್ಲಿರುವ ಕಾರಣ ಮೇ ಮತ್ತು ಜೂನ್ ತಿಂಗಳಿಗಾಗಿ ಈ ಯೋಜನೆಯನ್ನು ಪುನಃ ಆರಂಭಿಸಲಾಗಿತ್ತು.

ಪುಣೆ: ಕಾರ್ಖಾನೆಯಲ್ಲಿ ಬೆಂಕಿ ದುರಂತ: 18 ಮಂದಿ ಸಾವು

ಪುಣೆ: ಇಲ್ಲಿನ ಮುಲ್ಶಿ ಕೈಗಾರಿಕಾ ಪ್ರದೇಶದ ರಾಸಾಯನಿಕ ಕಾರ್ಖಾನೆಯೊಂದರಲ್ಲಿ ಸೋಮವಾರ ಸಂಭವಿಸಿದ ಅಗ್ನಿ ಅವಘಡದಲ್ಲಿ 15 ಮಂದಿ ಮಹಿಳೆಯರು ಸೇರಿ 18 ಜನರು ಮೃತಪಟ್ಟಿದ್ದಾರೆ. 8

ಬಿಎಸ್‌ವೈ ರಾಜೀನಾಮೆ ಹೇಳಿಕೆ: ಮತ್ತೊಂದು ರಾಜಕೀಯ ಪರ್ವ

ಸಹಿ ಸಂಗ್ರಹ: ಪರ–ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಖ್ಯಮಂತ್ರಿಯಾಗಿ ಬಿ.ಎಸ್.ಯಡಿಯೂರಪ್ಪ ಅವರೇ ಮುಂದುವರಿಯಬೇಕು' ಎಂದು ಪಕ್ಷದ ವರಿಷ್ಠರನ್ನು ಒತ್ತಾಯಿಸಲು ಸಹಿ ಸಂಗ್ರಹ ಆರಂಭಿಸಿರುವುದಾಗಿ ಶಾಸಕ ಎಂ.ಪಿ.ರೇಣುಕಾಚಾರ್ಯ ಹೇಳಿರುವ ಬೆನ್ನಲ್ಲೇ, ಹಿರಿಯ ಸಚಿವರಾದ ಆರ್. ಅಶೋಕ ಮತ್ತು ಕೆ.ಎಸ್.ಈಶ್ವರಪ್ಪ ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

'ವರಿಷ್ಠರು ಹೇಳಿದರೆ ರಾಜೀನಾಮೆ ಕೊಡಲು ಸಿದ್ಧ' ಎಂಬ ಯಡಿಯೂರಪ್ಪ ಹೇಳಿಕೆ ರಾಜಕೀಯ ವಲಯದಲ್ಲಿ ಸಂಚಲನಕ್ಕೆ ಕಾರಣವಾಗಿತ್ತು. ಸಂಪುಟದ ಬಹುತೇಕ ಸಚಿವರು ಮತ್ತು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರು ಯಡಿಯೂರಪ್ಪ ಅವರೇ ಮುಖ್ಯಮಂತ್ರಿಯಾಗಿ ಮುಂದುವರಿಯುತ್ತಾರೆ ಎಂದು ಸಮಜಾಯಿಷಿ ನೀಡಿದ್ದರು. 'ಯಡಿಯೂರಪ್ಪ ಅವರ ನಾಯಕತ್ವದಲ್ಲೇ ಸರ್ಕಾರ ರಚಿಸಿದ್ದೇವೆ, ಹೈಕಮಾಂಡ್ ವಿಶ್ವಾಸ ಅವರ ಮೇಲಿದೆ' ಎಂದು ಸಚಿವರು ಪ್ರತಿಪಾದಿಸಿದ್ದರು.

ಇಷ್ಟೆಲ್ಲ ಆದ ಮೇಲೂ ಸಹಿ ಸಂಗ್ರಹ ಆರಂಭಿಸುವುದಾಗಿ ರೇಣುಕಾಚಾರ್ಯ ನೀಡಿದ ಹೇಳಿಕೆಗೆ ಮುಖ್ಯಮಂತ್ರಿಯಾದಿಯಾಗಿ ಹಲವು ನಾಯಕರು ಪ್ರತಿಕ್ರಿಯಿಸಿದ್ದಾರೆ.

'ಬಿಜೆಪಿಯಲ್ಲಿ ಅಂತಹ ಚಟುವಟಿಕೆಗೆ ಅವಕಾಶವೇ ಇಲ್ಲ, ಅದನ್ನು ಒಪ್ಪಲಾಗದು' ಎಂದು ಸಚಿವರು ಪ್ರತಿಪಾದಿಸಿದ್ದಾರೆ.

ರೇಣುಕಾಚಾರ್ಯ ಹೇಳಿದ್ದೇನು: 'ನನ್ನ ಬಳಿ 65 ಕ್ಕೂ ಹೆಚ್ಚು ಶಾಸಕರ ಸಹಿ ಸಂಗ್ರಹದ ಪತ್ರವಿದೆ. ಕೋವಿಡ್ ಸಂಕಷ್ಟ ಮುಗಿದ ಬಳಿಕ ಆ ಪತ್ರವನ್ನು ವರಿಷ್ಠರಿಗೆ ನೀಡಲಾಗುವುದು' ಎಂದು ರೇಣುಕಾಚಾರ್ಯ ಹೇಳಿದರು.

'ಯಡಿಯೂರಪ್ಪ ಅವರ ವಿರುದ್ಧ ಮಾತನಾಡುವವರಿಂದ ಪಕ್ಷ ಮತ್ತು ಸರ್ಕಾರದ ವರ್ಚಸ್ಸಿಗೆ ಧಕ್ಕೆ ಆಗುತ್ತಿದೆ. ಆ ರೀತಿ ಹಾನಿ ಮಾಡುವವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಎಂಬುದು ನಮ್ಮ ಆಗ್ರಹ. ಯಡಿಯೂರಪ್ಪ ನಾಯಕತ್ವದ ಪರ ಸಹಿ ಹಾಕಿರುವ ಪತ್ರದಲ್ಲಿ ಈ ಬೇಡಿಕೆಯೂ ಇದೆ. ಈ ಸಹಿ ಸಂಗ್ರಹದ ಹಿಂದೆ ವಿಜಯೇಂದ್ರ ಅವರು ಇದ್ದಾರೆ ಎಂಬ ಮಾತುಗಳಲ್ಲಿ ಹುರುಳಿಲ್ಲ. ವಿಜಯೇಂದ್ರ ಮಾತು ಕೇಳಿ ಮಾಡುವಂತಹದ್ದು ನನಗೇನಿದೆ' ಎಂದು ಅವರು ಪ್ರಶ್ನಿಸಿದರು.

'ಶಾಸಕ ಬಸನಗೌಡ ಪಾಟೀಲ ಯತ್ನಾಳ ನಿತ್ಯವೂ ಹುಚ್ಚು ಹುಚ್ಚಾಗಿ ಮಾತನಾಡುತ್ತಾರೆ. ಪ್ರತಿಪಕ್ಷಗಳು ಇದನ್ನು ಅಸ್ತ್ರವಾಗಿ ಬಳಸಿಕೊಳ್ಳುತ್ತಿವೆ. ಕೆಲವು ನಾಯಕರು ಪಕ್ಕದ ಕ್ಷೇತ್ರವನ್ನು ಗೆಲ್ಲಿಸಿಕೊಳ್ಳುವ ಸಾಮರ್ಥ್ಯ ಇಲ್ಲದೇ ಇದ್ದರೂ, ಯಡಿಯೂರಪ್ಪ ಬಗ್ಗೆ ಮಾತನಾಡುತ್ತಾರೆ. ನಾವು ಯಡಿಯೂರಪ್ಪ ಅವರ ಜತೆಗಿದ್ದೇವೆ. ಅವರು ರಾಜೀನಾಮೆ ನೀಡಬೇಕಾಗಿಲ್ಲ' ಎಂದು ರೇಣುಕಾಚಾರ್ಯ ತಿಳಿಸಿದರು.

ಸಹಿ ಸಂಗ್ರಹ ಬೇಡ: ಮುಖ್ಯಮಂತ್ರಿ



ಪ್ರತಿಯೊಬ್ಬ ಬಿಜೆಪಿ ಶಾಸಕರು ತಮ್ಮ ತಮ್ಮ ವಿಧಾನಸಭಾ ಕ್ಷೇತ್ರಗಳಲ್ಲಿ ಕೋವಿಡ್ ನಿಯಂತ್ರಣ ಕಾರ್ಯಗಳಿಗೆ ಆದ್ಯತೆ ನೀಡಬೇಕು. ಯಾರೂ ಸಹಿ ಸಂಗ್ರಹಿಸಬಾರದು ಮತ್ತು ರಾಜಕೀಯ ಹೇಳಿಕೆ ನೀಡಬಾರದು. ಸಂಕಷ್ಟದಲ್ಲಿರುವ ಜನರಿಗೆ ನೆರವಾಗಬೇಕು ಎಂದು ಮುಖ್ಯಮಂತ್ರಿ ಯಡಿಯೂರಪ್ಪ ಟ್ವೀಟ್ ಮಾಡಿದ್ದಾರೆ.

ಸಹಿ ಸಂಗ್ರಹ ಸಲ್ಲದು: ಅಶೋಕ

ಪಕ್ಷದಲ್ಲಿ ಯಾರೂ ಪರ– ವಿರೋಧದ ಹೇಳಿಕೆಗಳನ್ನು ನೀಡಬಾರದು. ಸಹಿ ಸಂಗ್ರಹವನ್ನೂ ಮಾಡಬಾರದು. ಮುಖ್ಯಮಂತ್ರಿಯವರ ಬಗ್ಗೆ ಹೇಳಿಕೆ ನೀಡುವುದರಿಂದ ಅನಗತ್ಯ ಗೊಂದಲ ಸೃಷ್ಟಿಯಾಗುತ್ತದೆ ಎಂದು ಕಂದಾಯ ಸಚಿವ ಆರ್.ಅಶೋಕ ಹೇಳಿದರು.

ಸಹಿ ಸಂಗ್ರಹಿಸುವ ವ್ಯವಸ್ಥೆ ಇಲ್ಲ: ಈಶ್ವರಪ್ಪ

'ನಾಯಕತ್ವದ ಬಗ್ಗೆ ಶಾಸಕರಿಂದ ಸಹಿ ಸಂಗ್ರಹಿಸುವ ವ್ಯವಸ್ಥೆ ಬಿಜೆಪಿಯೊಳಗೆ ಇಲ್ಲ. ಶಾಸಕ ರೇಣುಕಾಚಾರ್ಯ ಅವರಿಗೆ ಸಹಿ ಸಂಗ್ರಹದ ಕುರಿತು ಯಾರೂ ಹೇಳಿಲ್ಲ. ಅವರು ಹೇಳಿದ್ದನ್ನೇ ಮತ್ತೆ ಮತ್ತೆ ಹೇಳುತ್ತಾರೆ' ಎಂದು ಪಂಚಾಯತ್ ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ತಿಳಿಸಿದರು.

ಹಳೇ ಪತ್ರ ಬಳಕೆ: ಬೆಲ್ಲದ್

'ಮುಖ್ಯಮಂತ್ರಿ ಪರ ಅಥವಾ ವಿರುದ್ಧ ಸಹಿ ಸಂಗ್ರಹ ನಡೆದಿಲ್ಲ. ಹಿಂದೊಮ್ಮೆ ವಿಧಾನಮಂಡಲ ಅಧಿವೇಶನ ನಡೆಯುವಾಗ ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ ಅನುದಾನ ಬಿಡುಗಡೆ ಮಾಡುವಂತೆ ಕೋರಿ 65 ಶಾಸಕರು ಸಹಿ ಹಾಕಿದ್ದ ಪತ್ರವನ್ನು ಸಚಿವರಿಗೆ ನೀಡಲಾಗಿತ್ತು. ಅದನ್ನೇ ಬಳಸಿರಬಹುದು' ಎಂದು ಶಾಸಕ ಅರವಿಂದ ಬೆಲ್ಲದ್ ಹೇಳಿದ್ದಾರೆ.

ಸಹಿ ಸಂಗ್ರಹಕ್ಕೆ ಪಕ್ಷದಲ್ಲಿ ಆಸ್ಪದ ಇಲ್ಲ. ಅಂತಹ ಪ್ರಯತ್ನಕ್ಕೆ ಯಾರಾದರೂ ಮುಂದಾದರೆ ಕರೆದು ಮಾತನಾಡಿಸುತ್ತೇನೆ

ನಳಿನ್ ಕುಮಾರ್ ಕಟೀಲ್

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

ರೋಹಿಣಿ ಸೂಚನೆಯಂತೆಯೇ ಈಜುಕೊಳ ನಿರ್ಮಾಣ: ಅಧಿಕಾರಿಗಳ ಸ್ಪಷ್ಟನೆ

ಅನುಮತಿ ಪಡೆದಿಲ್ಲ; ನಿಯಮ ಉಲ್ಲಂಘನೆ

ಪ್ರಜಾವಾಣಿ ವಾರ್ತೆ

ಮೈಸೂರು: ಪಾರಂಪರಿಕ ಕಟ್ಟಡವಾದ ಮೈಸೂರು ಜಿಲ್ಲಾಧಿಕಾರಿ ನಿವಾಸ 'ಜಲಸನ್ನಿಧಿ'ಯ ಆವರಣದಲ್ಲಿ ಈಜುಕೊಳ ನಿರ್ಮಿಸಿಕೊಂಡಿದ್ದ ಈ ಹಿಂದಿನ ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ, ಇದಕ್ಕೆ ಸಂಬಂಧಿಸಿದಂತೆ ಕೆಲ ವಿಷಯಗಳಲ್ಲಿ ಅನುಮತಿಯನ್ನೇ ಪಡೆದಿಲ್ಲ. ಪಾಲಿಸಬೇಕಿದ್ದ ಬಹುತೇಕ ನಿಯಮಾವಳಿಗಳನ್ನು ಉಲ್ಲಂಘಿಸಿದ್ದಾರೆ ಎಂದು ತಿಳಿದುಬಂದಿದೆ.

ಈಜುಕೊಳ ನಿರ್ಮಾಣಕ್ಕೆ ಸಂಬಂಧಿಸಿದಂತೆ ಸರ್ಕಾರದ ಸೂಚನೆಯಂತೆ ತನಿಖೆ ನಡೆಸುತ್ತಿರುವ ಪ್ರಾದೇಶಿಕ ಆಯುಕ್ತ ಜಿ.ಸಿ.ಪ್ರಕಾಶ್ ಅವರಿಗೆ ಎರಡು ಪುಟದ ಪತ್ರ ಬರೆದಿದ್ದ ರೋಹಿಣಿ ಸಿಂಧೂರಿ, 'ನಿಯಮ ಉಲ್ಲಂಘಿಸಿಲ್ಲ. ಪಾರಂಪರಿಕ ಕಟ್ಟಡಕ್ಕೆ ಧಕ್ಕೆಯಾಗಿಲ್ಲ' ಎಂದು ಸ್ಪಷ್ಟಪಡಿಸಿದ್ದರು.

ಆದರೆ, ಈ ವಿಷಯವಾಗಿ ನಿಯಮ ಪಾಲನೆಯೇ ಆಗಿಲ್ಲ ಎನ್ನುತ್ತಾರೆ, ಹೆಸರು ಬಹಿರಂಗ ಪಡಿಸಲು ಬಯಸದ ಕೆಲವು ಅಧಿಕಾರಿಗಳು.

'ರೋಹಿಣಿ ಸಿಂಧೂರಿ ಸೂಚನೆಯಂತೆಯೇ ಜಲಸನ್ನಿಧಿ ಆವರಣದಲ್ಲಿ ₹ 28.72 ಲಕ್ಷ ವೆಚ್ಚದಲ್ಲಿ, 650 ಚದರ ಅಡಿ ಜಾಗದಲ್ಲಿ, 60 ಸಾವಿರ ಲೀಟರ್ ನೀರಿನ ಸಾಮರ್ಥ್ಯದ ಈಜುಕೊಳ ನಿರ್ಮಿಸಿದ್ದೇವೆ. ಅತ್ಯಾಧುನಿಕ ಓಜೋನೈಸೇಷನ್ ತಂತ್ರಜ್ಞಾನ ಅಳವಡಿಸಿದ್ದೇವೆ. ಇದರಿಂದ ಪದೇ ಪದೇ ನೀರು ಬದಲಿಸುವ ಅಗತ್ಯವಿಲ್ಲ. ರೀ ಸೈಕ್ಲಿಂಗ್ ಆಗಲಿದೆ. ಕ್ಲೋರಿನೈಸೇಷನ್ ಸಹ ಮಾಡುವಂತಿಲ್ಲ' ಎಂದು ಜಿಲ್ಲಾಡಳಿತದ ಅಧಿಕಾರಿಯೊಬ್ಬರು ತಿಳಿಸಿದರು.

ಮೈಸೂರು ಜಿಲ್ಲಾಧಿಕಾರಿ ನಿವಾಸದ ಆವರಣದಲ್ಲಿ ನಿರ್ಮಿಸಿರುವ ಈಜುಕೊಳ

'ಮೇಲ್ಛಾವಣಿ ಇರುವುದರಿಂದ ನೀರು ಆವಿಯೂ ಆಗಲ್ಲ. ನಿರ್ಮಿತಿ ಕೇಂದ್ರದ ಆಡಳಿತಾತ್ಮಕ ವೆಚ್ಚದಲ್ಲಿ ಉಳಿತಾಯವಾಗಿದ್ದ ಅನುದಾನವನ್ನೇ ಈಜುಕೊಳ ನಿರ್ಮಾಣಕ್ಕೆ ಬಳಸಿಕೊಂಡಿದ್ದೇವೆ. ಜಿಲ್ಲಾಧಿಕಾರಿ ನಿವಾಸಕ್ಕೆ ಪೂರೈಕೆಯಾಗುವ ನೀರನ್ನೇ ಈಜುಕೊಳಕ್ಕೂ ತುಂಬಿಸಲಾಗಿದೆ' ಎಂದು ಕೇಂದ್ರದ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಅನುಮತಿ ಪಡೆದಿಲ್ಲ: 'ಜಿಲ್ಲಾಧಿಕಾರಿ ನಿವಾಸ ಪಾರಂಪರಿಕ ಕಟ್ಟಡದ ಪಟ್ಟಿಯಲ್ಲಿದೆ. ಈಜುಕೊಳ ನಿರ್ಮಾಣಕ್ಕೆ ಸಂಬಂಧಿಸಿದಂತೆ ಅನುಮತಿಗಾಗಿ ನಮಗೆ ಯಾವ ಕೋರಿಕೆಯೂ ಬಂದಿಲ್ಲ' ಎಂದು ಪಾಲಿಕೆಯ ಯೋಜನಾ ವಿಭಾಗದ ಅಧಿಕಾರಿಯೊಬ್ಬರು ತಿಳಿಸಿದರು.

ನ್ಯಾಯಾಂಗ ತನಿಖೆ ನಡೆಸಿ: ಕಾಂಗ್ರೆಸ್

'ಭೂ ಮಾಫಿಯಾ, ಮೆಡಿಕಲ್ ಮಾಫಿಯಾದಿಂದಲೇ ತಮ್ಮ ವರ್ಗಾವಣೆಯಾಗಿದ್ದಾಗಿ ರೋಹಿಣಿ ಸಿಂಧೂರಿ ಹೇಳಿದರೆ, 'ಯಾರ ಮನೆಯಲ್ಲಿ ರಿಯಲ್ ಎಸ್ಟೇಟ್ ಡೀಲರ್ಸ್ ಮತ್ತು ಬ್ರೋಕರ್ಸ್ ಇದ್ದಾರೆ ಎಂಬುದು ತಮಗೆ ಗೊತ್ತಿರುವುದಾಗಿ' ಶಿಲ್ಪಾನಾಗ್ ಹೇಳಿದ್ದಾರೆ. ತಮ್ಮ ಪ್ರತಿಭಟನೆ ಸಾರ್ಥಕವಾಯಿತು ಎಂದೂ ಹೇಳಿದ್ದಾರೆ. ಎತ್ತಂಗಡಿಯಾದ ಈ ಐಎಎಸ್ ಅಧಿಕಾರಿಗಳಿಬ್ಬರೂ ಪರಸ್ಪರ ಗಂಭೀರ ಆರೋಪಗಳನ್ನೇ ಮಾಡಿದ್ದು, ಇಡೀ ಪ್ರಕರಣವನ್ನು ನ್ಯಾಯಾಂಗ ತನಿಖೆಗೆ ಒಳಪಡಿಸಬೇಕು' ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಪತ್ರಿಕಾಗೋಷ್ಠಿಯಲ್ಲಿ ಆಗ್ರಹಿಸಿದರು.

8ನೇ ಪುಟ ನೋಡಿ

ಸಿಇಟಿ ದಿಕ್ಸೂಚಿ

ಪ್ರಿಯ ವಿದ್ಯಾರ್ಥಿಗಳೇ, ಈ ವರ್ಷದ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ)ಗೆ ಸಿದ್ಧತೆ ನಡೆಸಿದ್ದೀರಾ? ಹಾಗಿದ್ದರೆ ಪ್ರಜಾವಾಣಿಯ ವಿಶೇಷ ಪುಟದಲ್ಲಿ ಇಂದಿನಿಂದ ಪ್ರಕಟವಾಗುವ ಸಿಇಟಿ ದಿಕ್ಸೂಚಿಯಲ್ಲಿ ಅನುಭವಿ ಶಿಕ್ಷಕರು ನೀಡುವ ಮಾರ್ಗದರ್ಶನದ ಪ್ರಯೋಜನ ಪಡೆಯಬಹುದು. 5

ರಾಜ್ಯ ಕೋವಿಡ್ ಅಂಕಿ–ಅಂಶ

27,07,481 ▲	ಒಟ್ಟು ಸೋಂಕಿತರು (26,95,523 ನಿನ್ನೆಯ ವಿವರ)
2,38,824 ▼	ಸಕ್ರಿಯ ಪ್ರಕರಣಗಳು
24,36,716 ▲	ಗುಣಮುಖರಾದವರು
31,920 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	11,958	▼
ಗುಣಮುಖ	27,299	▲
ಸಾವು	340	▲

ಆಧಾರ: ರಾಜ್ಯ ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್

ಇಂದಿನ ಪಾಡ್‌ಕಾಸ್ಟ್ ವಿಶೇಷ

ಸುದ್ದಿ ಸ್ವಾರಸ್ಯ

ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ

Prajavani.net/podcast

ಚಿನಕುರಳಿ

ಪ್ರಕಾಶ್ ಶೆಟ್ಟಿ

ರಾಜಧಾನಿ ಸೆರಗಿನ ಹಳ್ಳಿಗರ ಆರೋಗ್ಯಕ್ಕೆ ಮಹಾನಗರವೇ ಆಸರೆ

ಆಸ್ಪತ್ರೆ ಸುಸಜ್ಜಿತ; ಕೋವಿಡ್ ಚಿಕಿತ್ಸೆ ಗೋತಾ

• ಜಿ.ಶಿವಕುಮಾರ

ಬೆಂಗಳೂರು: 'ಅಪ್ಪ, ಅಮ್ಮ ಕಣ್ಣ ಮುಂದೆ ಆರಾಮವಾಗಿ ಓಡಾಡಿಕೊಂಡಿದ್ದರು. ಕೋವಿಡ್ ಲಸಿಕೆ ಪಡೆದ ನಾಲ್ಕನೇ ದಿನಕ್ಕೆ ತೀವ್ರ ಜ್ವರ ಕಾಣಿಸಿಕೊಂಡಿತು. ವೈದ್ಯರನ್ನು ವಿಚಾರಿಸಿದಾಗ ಮಾತ್ರೆ ಕೊಟ್ಟರೆ ಹುಷಾರಾಗುತ್ತಾರೆ ಎಂದರು. ನಾವೂ ಸುಮ್ಮನಾದೆವು. ಆದರೆ, ಜ್ವರ ಏರುತ್ತಲೇ ಹೋಯಿತು. ಭಯಗೊಂಡು ಕೋವಿಡ್ ಆರೈಕೆ ಕೇಂದ್ರಕ್ಕೆ ದಾಖಲಿಸಿದೆವು. ಅಲ್ಲಿಗೆ ಹೋಗಿ ಐದೇ ದಿನಗಳಲ್ಲಿ ಅಪ್ಪ ತೀರಿಕೊಂಡರು. ಅದಕ್ಕೂ ಮುನ್ನ ಅಮ್ಮ ಮೃತಪಟ್ಟಿದ್ದರು. ಅವರಿಬ್ಬರೂ ಈಗ ನಮ್ಮ ಜೊತೆಯಲ್ಲಿಲ್ಲ ಎಂಬುದನ್ನು ನಂಬಲಾಗುತ್ತಿಲ್ಲ ...'

ಹೀಗೆ ಹೇಳುವಾಗ ಸಂತೋಷ್ ಅವರ ಕಣ್ಣುಗಳು ಹನಿಗೂಡಿದವು. ಸಂತೋಷ್, ಬೆಂಗಳೂರು ಉತ್ತರ ತಾಲ್ಲೂಕಿನ ಬೆಟ್ಟ ಹಲಸೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸುಗ್ಗಟ್ಟ ನಿವಾಸಿ. ಅಪ್ಪ ರಮೇಶ್ ಹಾಗೂ ಅಮ್ಮ ಜಾನಕಮ್ಮ ಅಗಲಿಕೆಯಿಂದ ಅವರು ಮಾನಸಿಕವಾಗಿ ಕುಗ್ಗಿಹೋಗಿರುವುದನ್ನು ಅವರ ಮಾತುಗಳೇ ಧ್ವನಿಸುತ್ತಿದ್ದವು.

'ಅಪ್ಪ, ಅಮ್ಮ ಕೋವಿಡ್‌ನಿಂದ ಮೃತಪಟ್ಟಿದ್ದಾರೆ ಎಂಬ ಕಾರಣಕ್ಕೆ ಗ್ರಾಮದ ಯಾರೊಬ್ಬರೂ ಮನೆಗೆ ಬರುತ್ತಿಲ್ಲ. ಎದುರಿಗೆ ಸಿಕ್ಕರೂ ಮಾತನಾಡಿಸುತ್ತಿಲ್ಲ. ಇಂತಹ ಪರಿಸ್ಥಿತಿ ಶತ್ರುಗಳಿಗೂ ಬಾರದಿರಲಿ' ಎಂದು ಹೇಳುತ್ತಾ ಕಣ್ಣೀರು ಒರೆಸಿಕೊಂಡರು.

ಬೆಂಗಳೂರು ನಗರ ಜಿಲ್ಲೆಯ ಹಳ್ಳಿಗಳಲ್ಲಿ ಸಂಚರಿಸಿದರೆ ಇಂತಹ ಹಲವು ಕರುಣಾಜನಕ ಕಥೆಗಳು ಕಿವಿಗಪ್ಪಳಿಸುತ್ತವೆ. ಕಣ್ಣುಗಳನ್ನೂ ತೇವಗೊಳಿಸುತ್ತವೆ.

17 ಹೋಬಳಿ ಹಾಗೂ ಸುಮಾರು 668 ಹಳ್ಳಿಗಳನ್ನು ಹೊಂದಿರುವ ಈ ಜಿಲ್ಲೆಯಲ್ಲಿ ಗ್ರಾಮೀಣ ಭಾಗದಲ್ಲೇ ಸುಮಾರು 10 ಲಕ್ಷ ಜನ ವಾಸಿಸುತ್ತಿದ್ದಾರೆ. ಮೂರು ಅಥವಾ ಐದು ಗ್ರಾಮ ಪಂಚಾಯಿತಿಗೆ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರಗಳೂ ಇವೆ. ಎಲ್ಲವೂ ಸುಸಜ್ಜಿತ ಕಟ್ಟಡಗಳೇ. ಹೀಗಿದ್ದರೂ ತುರ್ತು ಚಿಕಿತ್ಸೆಗಾಗಿ ಹಳ್ಳಿಗರೆಲ್ಲಾ ನಗರ ಭಾಗದ ಆಸ್ಪತ್ರೆಗಳಿಗೆ ಎಡತಾಕುವುದು ತಪ್ಪಿಲ್ಲ. ಕೋವಿಡ್ ಕಾಣಿಸಿಕೊಂಡ ಬಳಿಕ ಜನರ ಪರದಾಟ ಹೆಚ್ಚಾಗಿದೆ.

9ನೇ ಪುಟ ನೋಡಿ

ಗ್ರಾಮಾರೋಗ್ಯ ಆಗಲಿ ಇನ್ನಷ್ಟು ಯೋಗ್ಯ

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ಮಹಾಂತಲಿಂಗಪುರದಲ್ಲಿ ಕೋವಿಡ್ ಪರೀಕ್ಷೆಯಲ್ಲಿ ನಿರತವಾಗಿದ್ದ ಸಿಬ್ಬಂದಿಗೆ ಸರಿಯಾದ ಪಿಪಿಇ ಕಿಟ್ ಇರಲಿಲ್ಲ –ಪ್ರಜಾವಾಣಿ ಚಿತ್ರ/ ಇರ್ಷಾದ್ ಮಹಮ್ಮದ್

'ಪರೀಕ್ಷೆಗೆ ಹೋದರೆ ಜನ ಬೈತಾರೆ'

'ಕೋವಿಡ್ ಪರೀಕ್ಷೆ ಮಾಡಲು ನಾವು ಹಳ್ಳಿ ಹಳ್ಳಿಗೆ ಭೇಟಿ ನೀಡುತ್ತೇವೆ. ಮನೆಗಳಿಗೆ ಹೋಗಿ ಕರೆದರೆ ಬೈದು ಕಳಿಸುತ್ತಾರೆ. ಕೋವಿಡ್ ಭೀಕರತೆ ಬಗ್ಗೆ ತಿಳಿಸಿ ಹೇಳಿದರೂ ಪ್ರಯೋಜನವಿಲ್ಲ. ಕೋವಿಡ್ ಪರೀಕ್ಷೆ ಮಾಡಿಸಿಕೊಂಡವರ ವರದಿ 'ನೆಗೆಟಿವ್' ಬಂದರೆ ನಾವು ಬಚಾವ್. ಒಂದೊಮ್ಮೆ 'ಪಾಸಿಟಿವ್' ಬಂದರೆ ಜನ ನಮ್ಮ ಮೇಲೆ ಜಗಳಕ್ಕೆ ಬಂದು ಬಿಡುತ್ತಾರೆ. ಹೀಗಾದರೆ ನಾವು ಹೇಗೆ ಕೆಲಸ ಮಾಡಬೇಕು' ಎಂದು ಚಿಕ್ಕಬಾಣಾವರ ಆರೋಗ್ಯ ಕೇಂದ್ರದಲ್ಲಿದ್ದ ಇಬ್ಬರು ಆಶಾ ಕಾರ್ಯಕರ್ತೆಯರು ಅಳಲು ತೋಡಿಕೊಂಡರು.

ಮೈಸೂರು ವಿ.ವಿ: ಕೋವಿಡ್ ಪರೀಕ್ಷೆ ಕಿಟ್ ಅಭಿವೃದ್ಧಿ

ಪ್ರಜಾವಾಣಿ ವಾರ್ತೆ

ಮೈಸೂರು: ಮನೆಯಲ್ಲೇ ಕೋವಿಡ್–19 ಪರೀಕ್ಷೆ ಮಾಡಿಕೊಳ್ಳಲು ಸಹಾಯವಾಗುವ ರೀತಿಯಲ್ಲಿ ಮೈಸೂರು ವಿಶ್ವವಿದ್ಯಾಲಯದಿಂದ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್. ರಂಗಪ್ಪ ನೇತೃತ್ವದಲ್ಲಿ ರ‍್ಯಾಪಿಡ್ ಡಿಟೆಕ್ಷನ್ ಟೆಸ್ಟ್ ಕಿಟ್ ಅಭಿವೃದ್ಧಿಪಡಿಸಲಾಗಿದೆ.



ಪ್ರೊ.ಕೆ.ಎಸ್. ರಂಗಪ್ಪ

'ಈಗಾಗಲೇ ನೂರಾರು ಮಂದಿ ಮೇಲೆ ಪ್ರಯೋಗ ನಡೆಸಿದ್ದು, ಕೊರೊನಾ ಸೋಂಕು ಪತ್ತೆ ಹಚ್ಚುವಲ್ಲಿ ಶೇ 90ರಷ್ಟು ಯಶಸ್ಸು ಲಭಿಸಿದೆ. ಇದನ್ನು ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿಗೆ (ಐಸಿಎಂಆರ್) ಕಳುಹಿಸುತ್ತಿದ್ದು, ಅನುಮೋದನೆ ಸಿಕ್ಕಿದ ತಕ್ಷಣ ಮಾರುಕಟ್ಟೆಗೆ ಬಿಡಲಾಗುವುದು. ಇದು ₹ 100 ದರದಲ್ಲಿ ಸಿಗುವಂತೆ ನೋಡಿಕೊಳ್ಳಲಾಗುವುದು' ಎಂದು ಪ್ರೊ.ರಂಗಪ್ಪ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಹೈದರಾಬಾದ್‌ನ ಲಾರ್ವೆನ್ ಬಯೋಲಾಜಿಕ್ಸ್ ಕಂಪನಿ ಸಹಯೋಗದಲ್ಲಿ ವಿಶ್ವವಿದ್ಯಾಲಯದ ಮೂವರು ವಿಜ್ಞಾನಿಗಳು ಅಭಿವೃದ್ಧಿಪಡಿಸಿದ್ದೇವೆ. ವಿಜ್ಞಾನ ಭವನದ ಸಂಚಾಲಕ ಪ್ರೊ. ಎಸ್.ಚಂದ್ರ ನಾಯಕ್ ಹಾಗೂ ಅಣುಜೀವವಿಜ್ಞಾನ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ.ಸಿ.ಡಿ.ಮೋಹನ್ ನೇತೃತ್ವದಲ್ಲಿ ಈ ಸಂಶೋಧನೆ ನಡೆಸಲಾಗಿದೆ. ಈ ಸಂಶೋಧನೆಗೆ ಕುಲಪತಿ ಪ್ರೊ.ಜಿ. ಹೇಮಂತಕುಮಾರ್ ಅವರು ಹಣಕಾಸು ನೆರವು ಸೇರಿದಂತೆ ಎಲ್ಲಾ ರೀತಿಯ ಸಹಕಾರ ನೀಡಿದ್ದಾರೆ' ಎಂದರು.

ಔಷಧಿ ಅಭಿವೃದ್ಧಿ

'ಹೈದರಾಬಾದ್‌ನ ಭಾರತೀಯ ರಾಸಾಯನಿಕ ತಂತ್ರಜ್ಞಾನ ಸಂಸ್ಥೆ ಹಾಗೂ ಲಖನೌದ ಕೇಂದ್ರೀಯ ಔಷಧ ಸಂಶೋಧನಾ ಸಂಸ್ಥೆಯ ಜೊತೆಗೂಡಿ ಕೋವಿಡ್‌ಗೆ ಔಷಧಿ ಕೂಡ ಅಭಿವೃದ್ಧಿಪಡಿಸುತ್ತಿದ್ದೇವೆ. ಕ್ಲಿನಿಕಲ್ ಟ್ರಯಲ್ ನಡೆಯಬೇಕಿದೆ. ಹಣ ನೀಡಿದರೆ ಕೋವಿಡ್ ಲಸಿಕೆ ಅಭಿವೃದ್ಧಿಪಡಿಸಲೂ ಸಿದ್ಧ' ಎಂದು ಪ್ರೊ.ರಂಗಪ್ಪ ತಿಳಿಸಿದರು.

‘ಎಸ್ಸೆಸ್ಸೆಲ್ಸಿ ಪರೀಕ್ಷೆ ನಡೆಸುವುದು ಮಕ್ಕಳ ಮೇಲಿನ ಹಲ್ಲೆ’

ಬೆಂಗಳೂರು: ‘ರಾಜ್ಯ ಸರ್ಕಾರ ಎಸ್ಸೆಸ್ಸೆಲ್ಸಿ ಪರೀಕ್ಷೆ ನಡೆಸಿದರೆ ಆನ್‌ಲೈನ್ ಶಿಕ್ಷಣದಿಂದ ವಂಚಿತರಾಗಿದ್ದ ಶೇ 80ರಷ್ಟು ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಕಷ್ಟವಾಗಲಿದೆ’ ಎಂದು ರಾಜ್ಯಸಭೆ ಕಾಂಗ್ರೆಸ್ ಸದಸ್ಯ ಎಲ್. ಹನುಮಂತಯ್ಯ ಅಭಿಪ್ರಾಯಪಟ್ಟರು.

ವಿಧಾನಪರಿಷತ್ ಸದಸ್ಯ ಪಿ.ಆರ್. ರಮೇಶ್ ಜತೆ ಜಂಟಿ ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, ‘ಉನ್ನತ ಶಿಕ್ಷಣಕ್ಕೆ ಕಾಲಿರಿಸುವ ಪಿಯುಸಿ ಮಕ್ಕಳ ಪರೀಕ್ಷೆ ರದ್ದುಪಡಿಸಿರುವ ಸರ್ಕಾರ, ಎಸ್ಸೆಸ್ಸೆಲ್ಸಿ ಪರೀಕ್ಷೆ ಮಾತ್ರ ನಡೆಸಲು ಸಜ್ಜಾಗಿದೆ. ಮಕ್ಕಳ ಮೇಲೊತ್ತಡ ಹೇರುವುದು ಅಕ್ಷಮ್ಯ ಅಪರಾಧ’ ಎಂದರು.

‘ತಜ್ಞರು ಪರೀಕ್ಷೆ ನಡೆಸುವುದು ಸರಿಯಲ್ಲ ಎನ್ನುವಾಗ ಅಧಿಕಾರಿಗಳ ಮಾತು ಕೇಳಿ ಶಿಕ್ಷಣ ಸಚಿವ ಸುರೇಶ್ ಕುಮಾರ್ ಪರೀಕ್ಷೆ ನಡೆಸಲು ಮುಂದಾಗಿರುವುದು ಸರಿಯಲ್ಲ. ಈ ಪರೀಕ್ಷೆ ಮಕ್ಕಳ ಮೇಲಿನ ಹಲ್ಲೆ’ ಎಂದೂ ಹೇಳಿದರು.

‘ಶಿಕ್ಷಣ ಸಚಿವರು ತಕ್ಷಣ ಶಿಕ್ಷಣ ತಜ್ಞರು, ಸರ್ವಪಕ್ಷ ಸದಸ್ಯರ ಸಭೆ ಕರೆಯಬೇಕು. ಶೈಕ್ಷಣಿಕ ವರ್ಷವನ್ನು 2 ತಿಂಗಳು ಮುಂದೂಡಬೇಕು. ಮಕ್ಕಳಿಗೆ ಲಸಿಕೆ ಹಾಕಿಸಬೇಕು. ಪ್ರತಿ ಶಾಸಕರು ಪ್ರದೇಶ ಅಭಿವೃದ್ಧಿ ನಿಧಿಯಿಂದ ತಮ್ಮ ವ್ಯಾಪ್ತಿಯಲ್ಲಿರುವ ಮಕ್ಕಳಿಗೆ ಮೊಬೈಲ್ ಕೊಡಿಸಬೇಕು’ ಎಂದರು.

ಪಿ.ಆರ್. ರಮೇಶ್ ಮಾತನಾಡಿ, ‘ರಾಜ್ಯದಲ್ಲಿ ಕೋವಿಡ್ ಸಾವಿನ ಪ್ರಮಾಣ ಹೆಚ್ಚಲು ಮಾಲಿನ್ಯ ಮಟ್ಟ ನಿಯಂತ್ರಣ ಆಗದಿರುವುದೇ ಕಾರಣ’ ಎಂದರು.

ನಿವೃತ್ತಿಯ ದಿನವೇ ಕಾರಣ ಕೇಳಿ ನೋಟಿಸ್ • ನಿವೃತ್ತಿ ಸೌಲಭ್ಯ ತಡೆಹಿಡಿಯಿರಿ– ಬಿಬಿಎಂಪಿಗೆ ಪತ್ರ

ಸಿದ್ದೇಗೌಡಗೆ ಬಡ್ತಿ ನೀಡಿದ್ದಕ್ಕೆ ಆಕ್ಷೇಪ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- 2008– 2012ರ ನಡುವೆ ಅನುಷ್ಠಾನಗೊಳಿಸಲಾದ ಕಾಮಗಾರಿಗಳಲ್ಲಿ ಭ್ರಷ್ಟಾಚಾರ
- ಹಿಂಬಡ್ತಿ ನೀಡುವಂತೆ ಸಮಿತಿ ಶಿಫಾರಸು ಮಾಡಿದರೂ ತಪ್ಪಿತಸ್ಥ ಅಧಿಕಾರಿಗಳಿಗೆ ಬಡ್ತಿ

ಬೆಂಗಳೂರು: ಗಾಂಧಿನಗರ ಉಪವಿಭಾಗದಲ್ಲಿ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಆಗಿದ್ದ ವೇಳೆ ನಿಯಮಬಾಹಿರವಾಗಿ ಕಾಮಗಾರಿಗಳಿಗೆ ಅನುಮೋದನೆ ನೀಡಿ ಕರ್ತವ್ಯಲೋಪ ಎಸಗಿದ್ದಕ್ಕೆ ಬಿಬಿಎಂಪಿಯ ಪ್ರಧಾನ ಎಂಜಿನಿಯರ್ ಆಗಿದ್ದ ಕೆ.ಸಿದ್ದೇಗೌಡ ಅವರಿಗೆ ಕಾರಣ ಕೇಳಿ ನಗರಾಭಿವೃದ್ಧಿ ಇಲಾಖೆ ನೋಟಿಸ್ ಜಾರಿಮಾಡಿದೆ.

ಈ ನೋಟಿಸ್ ಜಾರಿಯಾಗಿರುವುದು ಅವರು ಸರ್ಕಾರಿ ಸೇವೆಯಿಂದ ನಿವೃತ್ತರಾದ 2021ರ ಮೇ 31ರಂದು!

ಗಾಂಧಿನಗರ ಉಪವಿಭಾಗದಲ್ಲಿ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಆಗಿದ್ದಾಗ ಸಿದ್ದೇಗೌಡ ಅವರು ಕಾಮಗಾರಿಗಳ ಟೆಂಡರ್ ಕರೆಯುವಾಗ ಅಕ್ರಮ ನಡೆಸಿದ ಗುರುತರ ಆರೋಪ ಹೊತ್ತಿದ್ದರು. ಗಾಂಧಿನಗರ, ಆರ್.ಆರ್.ನಗರ ಹಾಗೂ ಮಲ್ಲೇಶ್ವರ ಉಪವಿಭಾಗಗಳಲ್ಲಿ ಅನುಷ್ಠಾನವಾಗಿದ್ದ ಕಾಮಗಾರಿಗಳ ಅಕ್ರಮದ ಬಗ್ಗೆ ತನಿಖೆ ನಡೆಸಿದ್ದ ನ್ಯಾ.ಎಚ್.ಎನ್. ನಾಗಮೋಹನದಾಸ್ ನೇತೃತ್ವದ ತನಿಖಾ ಸಮಿತಿ ವಿಚಾರಣೆಯಲ್ಲೂ ಅವರು ನಡೆಸಿದ್ದ ಅಕ್ರಮಗಳು ಸಾಬೀತಾಗಿದ್ದವು. ಅವರನ್ನು ತಪ್ಪಿತಸ್ಥರೆಂದು ಗುರುತಿಸಿದ್ದ ಸಮಿತಿಯು ಹಿಂಬಡ್ತಿ ನೀಡುವಂತೆಯೂ ಶಿಫಾರಸು ಮಾಡಿತ್ತು. ಆದರೆ, ಬಿಬಿಎಂಪಿ ಅವರಿಗೆ ಹಿಂಬಡ್ತಿ ನೀಡಿರಲಿಲ್ಲ. ಅದರ ಬದಲು ಪ್ರಧಾನ ಎಂಜಿನಿಯರ್ ಹುದ್ದೆಗೆ ಬಡ್ತಿ ನೀಡಲಾಗಿತ್ತು.

ಇದನ್ನು ಪ್ರಶ್ನಿಸಿ ವಿಜಯನಗರದ ಮಾಹಿತಿ ಹಕ್ಕು ಅಧ್ಯಯನ ಕೇಂದ್ರದ ಎಸ್.ಅಮರೇಶ್ ಅವರು 2021ರ ಮೇ 17ರಂದು ನಗರಾಭಿವೃದ್ಧಿ ಇಲಾಖೆಗೆ ದೂರು ನೀಡಿದ್ದರು. ಬಳಿಕ ನಗರಾಭಿವೃದ್ಧಿ ಇಲಾಖೆಯು ಅವರ ವಿರುದ್ಧ ಆರೋಪಪಟ್ಟಿ ಸಿದ್ಧಪಡಿಸಿದೆ.

ಸಿದ್ದೇಗೌಡ ಅವರಿಗೆ ಬಡ್ತಿ ನೀಡಿರುವ ಬಗ್ಗೆ ಹಾಗೂ ಅವರ ವಿರುದ್ಧ ಆರೋಪಪಟ್ಟಿ ಸಲ್ಲಿಸದ ಬಗ್ಗೆ ನಗರಾಭಿವೃದ್ಧಿ ಇಲಾಖೆಯು ಬಿಬಿಎಂಪಿ ವಿರುದ್ಧವೂ ಅಸಮಾಧಾನ ವ್ಯಕ್ತಪಡಿಸಿದೆ. ಈ ಬಗ್ಗೆ ಬಿಬಿಎಂಪಿ ಮುಖ್ಯ ಆಯುಕ್ತರಿಗೆ ಜೂನ್ 5ರಂದು ಪತ್ರ ಬರೆದಿರುವ ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರು, ‘ಸಿದ್ದೇಗೌಡ ಅವರಿಗೆ ಕಾರಣ ಕೇಳಿ ನೋಟಿಸ್ ನೀಡಬೇಕು ಹಾಗೂ ಅವರ ವಿರುದ್ಧ ಸಿದ್ಧಪಡಿಸಲಾದ ಆರೋಪಪಟ್ಟಿಯನ್ನು ಜಾರಿ ಮಾಡಬೇಕು’ ಎಂದು ಸೂಚಿಸಿದ್ದಾರೆ.

ಅಷ್ಟೇ ಅಲ್ಲ, ಸಿದ್ದೇಗೌಡ ವಿರುದ್ಧ ಇಲಾಖಾ ವಿಚಾರಣೆ ಪ್ರಾರಂಭವಾಗಿರುವುದರಿಂದ ಅವರಿಗೆ ಪೂರ್ಣಪ್ರಮಾಣದ ನಿವೃತ್ತಿ ವೇತನ ಮತ್ತು ಇತರ ನಿವೃತ್ತಿ ಸೌಲಭ್ಯಗಳನ್ನು ಮಂಜೂರು ಮಾಡಲು ಸಾಧ್ಯವಿಲ್ಲ. ಅವರಿಗೆ ತಾತ್ಕಾಲಿಕ ನೆಲೆಯಲ್ಲಿ ಭಾಗಶಃ ಪಿಂಚಣಿ ನೀಡುವ ಬಗ್ಗೆಯೂ ಕೆಸಿಎಸ್‌ಆರ್ ನಿಯಮ ಹಾಗೂ 1958ರ ಕರ್ನಾಟಕ ಆರ್ಥಿಕ ಸಂಹಿತೆ ಆಧರಿಸಿ ಕ್ರಮ ಕೈಗೊಳ್ಳಬೇಕು ಎಂದು ನಿರ್ದೇಶನ ನೀಡಿದ್ದಾರೆ.

‘ಈ ನೋಟಿಸ್ ಜಾರಿಯಾದ 15 ದಿನಗಳ ಒಳಗೆ ನೀವು ಬರಹದ ರೂಪದಲ್ಲಿ ಅಥವಾ ಮೌಖಿಕವಾಗಿ ಹೇಳಿಕೆ ನೀಡಬಹುದು. ನೀವು ಒಪ್ಪಿಕೊಳ್ಳದೇ ಇರುವ ಆರೋಪಗಳ ಬಗ್ಗೆ ಮಾತ್ರ ಇಲಾಖೆ ವಿಚಾರಣೆ ನಡೆಸಲಾಗುತ್ತದೆ. ಹಾಗಾಗಿ ಪ್ರತಿಯೊಂದು ಆರೋಪವನ್ನು ಸ್ಪಷ್ಟವಾಗಿ ಒಪ್ಪಿಕೊಳ್ಳಬೇಕು ಅಥವಾ ತಿರಸ್ಕರಿಸಬೇಕು. ನಿಗದಿತ ಅವಧಿಯ ಒಳಗೆ ಉತ್ತರಿಸದಿದ್ದಲ್ಲಿ 1957ರ ಕರ್ನಾಟಕ ನಾಗರಿಸ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ ಪ್ರಕಾರ ಮುಂದಿನ ಕ್ರಮ ಕೈಗೊಳ್ಳಲಾಗುತ್ತದೆ’ ಎಂದು ಕಾರಣ ಕೇಳಿ ಸಿದ್ದೇಗೌಡ ಅವರಿಗೆ ಜಾರಿಮಾಡಲಾದ ನೋಟಿಸ್‌ನಲ್ಲಿ ತಿಳಿಸಲಾಗಿದೆ.

ಬಿಬಿಎಂಪಿಯ ರಾಜರಾಜೇಶ್ವರಿನಗರ, ಮಲ್ಲೇಶ್ವರ ಹಾಗೂ ಗಾಂಧಿನಗರ ವಿಭಾಗಗಳಲ್ಲಿ 2008ರಿಂದ 2012ರ ನಡುವೆ ಅನುಷ್ಠಾನಗೊಳಿಸಿದ್ದ ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿಗಳಲ್ಲಿ ನಡೆದ ಅಕ್ರಮಗಳ ಬಗ್ಗೆ ‘ಪ್ರಜಾವಾಣಿ’ 2019ರ ಸೆಪ್ಟೆಂಬರ್‌ನಲ್ಲಿ ‘ಬ್ರಹ್ಮಾಂಡ ಭ್ರಷ್ಟಾಚಾರ’ ಎಂಬ ವಿಶೇಷ ವರದಿಗಳ ಸರಣಿಯನ್ನು ಪ್ರಕಟಿಸಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಸುದ್ದಿ 2 ನಿಮಿಷ

ಸಿಂಧೂರಿ ನೇಮಕ ಪ್ರಶ್ನಿಸಿದ್ದ ಅರ್ಜಿ: ಹೈಕೋರ್ಟ್ ನೋಟಿಸ್

ಬೆಂಗಳೂರು: ಮೈಸೂರು ಜಿಲ್ಲಾಧಿಕಾರಿ ಹುದ್ದೆಗೆ ರೋಹಿಣಿ ಸಿಂಧೂರಿ ನೇಮಕ ಮಾಡಿದ್ದ ಅರ್ಜಿ ಮರು ಪರಿಶೀಲಿಸಲು ಕೇಂದ್ರ ಆಡಳಿತಾತ್ಮಕ ನ್ಯಾಯಮಂಡಳಿ (ಸಿಎಟಿ) ನೀಡಿದ್ದ ಆದೇಶ ಪ್ರಶ್ನಿಸಿ ಸರ್ಕಾರ ಸಲ್ಲಿಸಿದ್ದ ಅರ್ಜಿ ಆಧರಿಸಿ ಐಎಎಸ್ ಅಧಿಕಾರಿ ಬಿ.ಶರತ್ ಅವರಿಗೆ ನೋಟಿಸ್ ಜಾರಿ ಮಾಡಲು ಹೈಕೋರ್ಟ್ ಆದೇಶಿಸಿದೆ.

‘ರೋಹಿಣಿ ಸಿಂಧೂರಿ ಅವರನ್ನು ಬೇರೆ ಹುದ್ದೆಗೆ ಈಗಾಗಲೇ ವರ್ಗಾವಣೆ ಮಾಡಲಾಗಿದೆ’ ಎಂದು ಸರ್ಕಾರದ ಪರ ವಕೀಲರು ನ್ಯಾಯಮೂರ್ತಿ ಅರವಿಂದ ಕುಮಾರ್ ಅವರ ನೇತೃತ್ವದ ವಿಭಾಗೀಯ ಪೀಠದ ಗಮನಕ್ಕೆ ತಂದರು.

ಇದನ್ನು ಪರಿಗಣಿಸಿದ ಪೀಠ, ಅರ್ಜಿಯಲ್ಲಿ ಪ್ರತಿವಾದಿ ಆಗಿರುವ ಬಿ.ಶರತ್ ಅವರಿಗೆ ನೋಟಿಸ್ ಜಾರಿ ಮಾಡಲು ತಿಳಿಸಿ ವಿಚಾರಣೆಯನ್ನು ಜೂ.14ಕ್ಕೆ ಮುಂದೂಡಿತು. ಸಿಎಟಿ ಆದೇಶ ಪ್ರಶ್ನಿಸಿ ಶರತ್ ಅವರು ಕೂಡ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದು, ಈ ಎರಡು ಅರ್ಜಿಗಳನ್ನು ಪೀಠ ಒಟ್ಟಿಗೆ ವಿಚಾರಣೆ ನಡೆಸುತ್ತಿದೆ.

‘ಬಿಎಸ್‌ವೈ ಸಿ.ಎಂ ಆಗಲು ನನ್ನ ಅಳಿಲು ಸೇವೆ ಇದೆ’

ಬೆಂಗಳೂರು: ಬಿ.ಎಸ್.ಯಡಿಯೂರಪ್ಪ ಮುಖ್ಯಮಂತ್ರಿ ಆಗುವುದರಲ್ಲಿ ನನ್ನದೂ ಅಳಿಲು ಸೇವೆ ಇದೆ ಎಂದು ಪ್ರವಾಸೋದ್ಯಮ ಸಚಿವ ಸಿ.ಪಿ.ಯೋಗೇಶ್ವರ್ ಹೇಳಿದ್ದಾರೆ.

ವಿಧಾನಸೌಧದಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಯಡಿಯೂರಪ್ಪ ನಮ್ಮ ನಾಯಕರು ಎನ್ನುವುದರಲ್ಲಿ ಎರಡು ಮಾತಿಲ್ಲ. ಅವರು ಇನ್ನೂ ಎರಡು ವರ್ಷ ಮುಖ್ಯಮಂತ್ರಿಯಾಗಿ ಮುಂದುವರಿಯಬೇಕು ಎಂಬುದು ನನ್ನ ಇಚ್ಛೆ’ ಎಂದು ಅವರು ಹೇಳಿದರು.

ಜೆಡಿಎಸ್ ಮತ್ತು ಕಾಂಗ್ರೆಸ್ ಮೈತ್ರಿ ಸರ್ಕಾರ ರಾಜ್ಯದ ಅಭಿವೃದ್ಧಿ ಕಾರ್ಯದಲ್ಲಿ ತೊಡಗಿಸಿಕೊಳ್ಳದೇ ಸ್ವಹಿತಾಸಕ್ತಿಯಲ್ಲಿ ಮುಳುಗಿತ್ತು. ಆದ್ದರಿಂದ ಎಚ್.ಡಿ.ಕುಮಾರಸ್ವಾಮಿ ಮತ್ತು ಡಿ.ಕೆ.ಶಿವಕುಮಾರ್ ಅವರ ಸ್ನೇಹವನ್ನು ಕಡಿದು ಹಾಕಿ, ಸರ್ಕಾರವನ್ನು ಕಿತ್ತೊಗೆದು ಬಿಜೆಪಿ ಅಧಿಕಾರಕ್ಕೆ ಬಂದಿತು. ಇದರಲ್ಲಿ ನನ್ನ ಅಳಿಲು ಸೇವೆ ಇದೆ ಎಂದು ಅವರು ಹೇಳಿದರು.

ನಮ್ಮ ಸರ್ಕಾರ, ನಮ್ಮ ಪಕ್ಷದ ಬಗ್ಗೆ ನಾವು ಹೇಳಿಕೊಳ್ಳುತ್ತೇವೆ. ಅದರಲ್ಲಿ ತಪ್ಪೇನಿದೆ. ಸಂಪುಟ ಸಹೋದ್ಯೋಗಿಗಳು, ನಮ್ಮೆಲ್ಲ ಶಾಸಕರು ನನ್ನ ಸ್ನೇಹಿತರು. ಅವರು ಏನೇ ಹೇಳಿ ಪ್ರತಿಕ್ರಿಯಿಸುವುದಿಲ್ಲ ಎಂದರು.

ಡಿ.ಕೆ.ಶಿವಕುಮಾರ್ ಅವರು ತಮ್ಮ ಪಕ್ಷದ ಕಾರ್ಯವನ್ನು ಜವಾಬ್ದಾರಿಯಿಂದ ಮಾಡಲಿ. ಅದನ್ನು ಬಿಟ್ಟು ನಮ್ಮ ಪಕ್ಷದ ವಿದ್ಯಮಾನಗಳಲ್ಲಿ ಮೂಗು ತೂರಿಸುವುದು ಸರಿಯಲ್ಲ. ಬೇಕಿದ್ದರೆ ಬಿಜೆಪಿ ಸಾಮಾನ್ಯ ಸದಸ್ಯತ್ವ ಪಡೆದು ಬಂದು ಪಕ್ಷದ ಕೆಲಸ ಮಾಡಲಿ ಎಂದು ವ್ಯಂಗ್ಯವಾಡಿದರು.

‘ಹಳ್ಳಿಗರ ಆರೋಗ್ಯ ರಕ್ಷಣೆಗೆ ಕ್ರಮ ಏನು’

ಪ್ರಜಾವಾಣಿ ವಾರ್ತೆ

ಹೈಕೋರ್ಟ್ ಸುದ್ದಿ

ಬೆಂಗಳೂರು: ‘ರಾಜ್ಯದ ಗ್ರಾಮೀಣ ಜನರ ಆರೋಗ್ಯ ಕಾಪಾಡಲು ಯಾವ ರೀತಿಯಲ್ಲಿ ನೀತಿ ರೂಪಿಸಿದೆ ಅಥವಾ ನಿರ್ಧಾರಗಳನ್ನು ಸರ್ಕಾರ ತೆಗೆದುಕೊಂಡಿದೆ. ಯಾವುದಾದರೂ ನೀತಿ ರೂಪಿಸಿದ್ದರೆ ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಸಲ್ಲಿಸಬೇಕು’ ಎಂದು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಪ್ರತಿ ಗ್ರಾಮ ಪಂಚಾಯಿತಿ ವ್ಯಾಪ್ತಿಗೊಂದು ಸರ್ಕಾರಿ ಆಸ್ಪತ್ರೆ ತೆರೆಯಬೇಕೆಂದು ಸರ್ಕಾರಕ್ಕೆ ನಿರ್ದೇಶನ ನೀಡಲು ಕೋರಿ ಸಲ್ಲಿಕೆಯಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, ರಾಜ್ಯ ಸರ್ಕಾರಕ್ಕೆ ನೋಟಿಸ್ ನೀಡಲು ಆದೇಶಿಸಿತು.

‘ಪ್ರತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲೂ ಆಸ್ಪತ್ರೆ ತೆರೆಯಬೇಕು ಎಂಬ ಆದೇಶ ನೀಡಿದರೂ. ಅದು ಸಾಧ್ಯವಾಗಲು ಬಹಳಷ್ಟು ದಿನಗಳು ಬೇಕಾಗಬಹುದು. ಆದರೂ, ಗ್ರಾಮೀಣ ಜನರ ಆರೋಗ್ಯದ ಹಕ್ಕು ಕಲ್ಪಿಸುವ ಸರ್ಕಾರದ ಜವಾಬ್ದಾರಿ ನೆನಪಿಸುವ ವಿಷಯ ಈ ಅರ್ಜಿಯಲ್ಲಿ ಎದ್ದಿದೆ. ಸಂವಿಧಾನದ 21ನೇ ಪರಿಚ್ಛೇದದ ಅಡಿಯಲ್ಲಿ ಆರೋಗ್ಯವೂ ಮೂಲಭೂತ ಹಕ್ಕು’ ಎಂದು ಪೀಠ ಹೇಳಿತು.

ಗ್ರಾಮೀಣ ಪ್ರದೇಶಗಳಿಗೂ ಕೋವಿಡ್ ಹರಡುತ್ತಿರುವ ಸಂದರ್ಭದಲ್ಲಿ ಈ ಅರ್ಜಿ ಪ್ರಸ್ತುತವಾಗಿದೆ. ಈ ಸಂಬಂಧ ನೀತಿ ಅಥವಾ ನಿರ್ಧಾರ ಕೈಗೊಂಡಿದ್ದರೆ ಸರ್ಕಾರ ಒಂದು ತಿಂಗಳಲ್ಲಿ ಸಲ್ಲಿಸಬೇಕು ಎಂದು ತಿಳಿಸಿದ ಪೀಠ, ವಿಚಾರಣೆಯನ್ನು ಜುಲೈ 12ಕ್ಕೆ ಮುಂದೂಡಿತು.

ಜಿಂದಾಲ್‌ಗೆ ಜಮೀನು: ದಾಖಲೆ ಮಂಡಿಸಲು ಸೂಚನೆ

ಜೆಎಸ್‌ಡಬ್ಲ್ಯು ಸ್ಟೀಲ್ಸ್ ಕಂಪನಿಗೆ ಬಳ್ಳಾರಿ ಜಿಲ್ಲೆಯಲ್ಲಿ 3,667 ಎಕರೆ ಜಮೀನನ್ನು ಕ್ರಯಪತ್ರದ ಮೂಲಕ ಹಸ್ತಾಂತರಿಸುವ ನಿರ್ಧಾರಕ್ಕೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ಸಲ್ಲಿಸುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಈ ಸಂಬಂಧ ಸಲ್ಲಿಕೆಯಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, ಸರ್ಕಾರಕ್ಕೆ ನೋಟಿಸ್ ನೀಡಲು ಆದೇಶಿಸಿತು.

‘ಸರ್ಕಾರಿ ಭೂಮಿಯನ್ನು ಅತ್ಯಂತ ಕಡಿಮೆ ಬೆಲೆಗೆ ಜೆಎಸ್‌ಡಬ್ಲ್ಯು ಕಂಪನಿಗೆ ಮಾರಾಟ ಮಾಡಲಾಗಿದೆ. ಇದಕ್ಕೆ ಕೆಲ ಸಚಿವರು ವಿರೋಧ ವ್ಯಕ್ತಪಡಿಸಿದರೂ ಸಂಪುಟ ಸಭೆಯಲ್ಲಿ ಪರಿಗಣಿಸಿರಲಿಲ್ಲ’ ಎಂದು ಅರ್ಜಿದಾರರ ಪರ ವಕೀಲ ಎಸ್. ದೊರೈರಾಜು ವಾದಿಸಿದರು.

ಫ್ಲಿಪ್‌ಕಾರ್ಟ್: ಕ್ಯೂಆರ್ ಕೋಡ್ ಆಧಾರಿತ ಪಾವತಿ ಸೌಲಭ್ಯ

ನವದೆಹಲಿ (ಪಿಟಿಐ): ಫ್ಲಿಪ್‌ಕಾರ್ಟ್ ಕಂಪನಿಯು ಕ್ಯೂಆರ್ ಕೋಡ್ ಆಧಾರಿತ ಪಾವತಿ ಸೌಲಭ್ಯವನ್ನು ಜಾರಿಗೆ ತಂದಿದೆ. ಉತ್ಪನ್ನಗಳನ್ನು ಪಡೆದುಕೊಂಡ ನಂತರ ಹಣ ಪಾವತಿಸುವವರಿಗೆ ಇದು ಪ್ರಯೋಜನಕಾರಿ ಆಗಲಿದೆ.

ಉತ್ಪನ್ನವು ಕೈಗೆ ಸಿಕ್ಕಿದ ನಂತರ ಹಣ ಪಾವತಿಸುವ ಆಯ್ಕೆಯನ್ನು (ಕ್ಯಾಶ್ ಆನ್ ಡೆಲಿವರಿ) ಪಡೆದವರು ಈ ಸೌಲಭ್ಯವನ್ನು ಬಳಸಿಕೊಳ್ಳಬಹುದು. ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ಯುಪಿಐ ಸೌಲಭ್ಯ ಇರುವ ಯಾವುದೇ ಆ್ಯಪ್ ಮೂಲಕ ಹಣ ಪಾವತಿ ಮಾಡಬಹುದು ಎಂದು ಕಂಪನಿಯ ಪ್ರಕಟಣೆ ತಿಳಿಸಿದೆ.

ವ್ಯಕ್ತಿಗಳ ನಡುವೆ ಅಂತರ ಕಾಪಾಡಿಕೊಳ್ಳಲು ಬಯಸುವ ಸಂದರ್ಭದಲ್ಲಿ ಈ ಬಗೆಯ ಪಾವತಿ ವ್ಯವಸ್ಥೆಯು ಹೆಚ್ಚಿನ ಸುರಕ್ಷತೆಯನ್ನು ಖಾತರಿಪಡಿಸುತ್ತದೆ ಎಂದು ಕಂಪನಿ ಹೇಳಿದೆ.

ನೈರುತ್ಯ ರೈಲ್ವೆ

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ.	ಕಾಮಗಾರಿಗಳ ಹೆಸರು	ಅಂದಾಜು ಮೌಲ್ಯ
1.	E-Tender Notice No.: CAO/CN/BNC/16/2021 dt: 03.06.2021 ಕಾಮಗಾರಿಯ ವಿವರ: ಅಮ್ಮಸಂದ್ರ ಬಳಿ ಕಿ.ಮೀ 113 / 200–300ರಲ್ಲಿ ಎಲ್‌ಸಿ ಸಂ.66 ರ ಸ್ಥಾನದಲ್ಲಿ ವಿದ್ಯುತ್ ಓವರ್‌ಹೆಡ್ ಲೈನ್‌ಗಳ ಶಿಫ್ಟಿಂಗ್ / ಮಾರ್ಪಾಡು ಮಾಡುವ ಬಾಕಿ ಇರುವ ಕೆಲಸ, ತುಮಕೂರು–ಅರಸಿಕೆರೆ ದ್ವಿಪಥೀಕರಣ ವಿಭಾಗದ ನಡುವಿನ ವಿಭಾಗದಲ್ಲಿ ಸಮಾನಾಂತರ ಅತಿಕ್ರಮಣವನ್ನು ತೆಗೆದುಹಾಕುವುದು ಮತ್ತು ವಿದ್ಯುತ್ ಸರಬರಾಜು ವ್ಯವಸ್ಥೆಗಳು.	Rs. 49,82,077/-
2.	E-Tender Notice No.: CAO/CN/BNC/17/2021 dt: 03.06.2021. ಕಾಮಗಾರಿಯ ವಿವರ: ಮೈಸೂರಿನಲ್ಲಿ (ಹಂತ–2) ಇಂಟರ್‌ಮೀಡಿಯೇಟ್ ಓವರ್‌ಹಾಲಿಂಗ್ ನಿರ್ವಹಣೆ ಶೆಡ್‌ಗಾಗಿ ಕೋಚಿಂಗ್ ಸೌಲಭ್ಯಗಳ ವಿದ್ಯುದೀಕರಣ ಮತ್ತು ವರ್ಧನೆ.	Rs. 1,26,39,195/-
3.	E-Tender Notice No.: CAO/CN/BNC/18/2021 dt: 03.06.2021. ಕಾಮಗಾರಿಯ ವಿವರ: ಯಶವಂತಪುರ – ಚನ್ನಸಂದ್ರ ವಿಭಾಗದ ನಡುವೆ ಎಲ್‌ಸಿ – 148, 150 ಮತ್ತು 152 ಗಳ ಸ್ಥಾನದಲ್ಲಿ ಮತ್ತು ಯಲಹಂಕ – ಚನ್ನಸಂದ್ರ ವಿಭಾಗದಲ್ಲಿ ಎಲ್‌ಸಿ–6 ಸ್ಥಾನದಲ್ಲಿ ಉದ್ದೇಶಿತ ಆರ್‌ಯುಬಿ ನಿರ್ಮಾಣಕ್ಕಾಗಿ ಬೆಳಕಿನ ವ್ಯವಸ್ಥೆಯ ಜೊತೆಗೆ ಅಸ್ತಿತ್ವದಲ್ಲಿರುವ ಎಚ್‌ಟಿ / ಎಲ್‌ಟಿ ಪವರ್ ಲೈನ್ ಜೋಡಣೆಯ ಮಾರ್ಪಾಡು / ವರ್ಗಾವಣೆ.	Rs. 48,17,293/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 25–06–2021

ಮಾಹಿತಿಗಾಗಿ www.ireps.gov.in ಗೆ ಲಾಗಾನ್ ಆಗಿ

ಉಪ ಮುಖ್ಯ ಎಲೆಕ್ಟ್ರಿಕಲ್ ಇಂಜಿನಿಯರ್ (ನಿರ್ಮಾಣ) ಬೆಂಗಳೂರು

PUB/26/AASP/PRB/SBC/2021-22

ಮದುವೆಯಾಗಿ ನಾಲ್ಕೇ ತಿಂಗಳಿಗೆ ಆತ್ಮಹತ್ಯೆ; ಪತಿ ಸೆರೆ

ಬೆಂಗಳೂರು: 4 ತಿಂಗಳ ಹಿಂದಷ್ಟೇ ಮದುವೆಯಾಗಿದ್ದ ಶ್ವೇತಾ (28) ಎಂಬುವವರು ಆತ್ಮಹತ್ಯೆ ಮಾಡಿಕೊಂಡಿದ್ದು, ಈ ಸಂಬಂಧ ಪತಿ ಕೃಷ್ಣಮೂರ್ತಿ (32) ಎಂಬಾತನನ್ನು ಬಾಗಲಗುಂಟೆ ಪೊಲೀಸರು ಬಂಧಿಸಿದ್ದಾರೆ.

‘ಕೃಷ್ಣಮೂರ್ತಿ ವರದಕ್ಷಿಣೆಗೆ ಪೀಡಿಸುತ್ತಿದ್ದ. ಶ್ವೇತಾ, ತಾಯಿಗೆ ಕರೆ ಮಾಡಿ ಅಳಲು ತೋಡಿಕೊಂಡಿದ್ದರು’ ಎಂದು ಪೊಲೀಸರು ಹೇಳಿದರು.

ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಗೋಪಾಲಪುರ ಗ್ರಾಮದ ವಾತ್ಸಲ್ಯ ಮಹಿಳಾ ಸೇವಾ ಸಂಸ್ಥೆಯು ಚಿಣ್ಣರಿಗೆ ಸಸಿಗಳನ್ನು ವಿತರಿಸಿತು. ಸಂಸ್ಥೆಯ ಅಧ್ಯಕ್ಷೆ ವೀಣಾ ರಮೇಶ್, ಗೋಪಾಲಪುರ ಗ್ರಾಮ ಪಂಚಾಯಿತಿ ಸದಸ್ಯರಾದ ಲತಾ ಮತ್ತು ಕೃಷ್ಣಪ್ಪ ಇದ್ದರು

ಬ್ಯಾಗ್‌ಗಳಲ್ಲಿ ₹ 25 ಲಕ್ಷ ಮೌಲ್ಯದ ಡ್ರಗ್ಸ್

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಲ್ಯಾಪ್‌ಟಾಪ್ ಬ್ಯಾಗ್‌ಗಳಲ್ಲಿ ಬಚ್ಚಿಟ್ಟು ಸಾಗಿಸುತ್ತಿದ್ದ ₹ 25 ಲಕ್ಷ ಮೌಲ್ಯದ ಮಾದಕ ವಸ್ತುವನ್ನು (ಡ್ರಗ್ಸ್) ರಾಷ್ಟ್ರೀಯ ಮಾದಕ ವಸ್ತು ನಿಯಂತ್ರಣ ಘಟಕ (ಎನ್‌ಸಿಬಿ) ಅಧಿಕಾರಿಗಳು ಜಪ್ತಿ ಮಾಡಿದ್ದಾರೆ.

‘ಕೇರಳದಿಂದ ದೋಹಾಕ್ಕೆ ಪಾರ್ಸೆಲ್ ಮೂಲಕ ಡ್ರಗ್ಸ್ ಸಾಗಿಸುತ್ತಿದ್ದ ಮಾಹಿತಿ ಬಂದಿತ್ತು. ಜೂನ್ 4ರಂದು ಕಾರ್ಯಾಚರಣೆ ನಡೆಸಿ, ಅಂತರರಾಷ್ಟ್ರೀಯ ಕೊರಿಯರ್ ಘಟಕದಲ್ಲಿ ಪಾರ್ಸೆಲ್ ಬಾಕ್ಸ್ ಪತ್ತೆ ಮಾಡಲಾಯಿತು. ಅದರಲ್ಲಿದ್ದ 70 ಬ್ಯಾಗ್‌ಗಳ ಪೈಕಿ 13 ಬ್ಯಾಗ್‌ಗಳಲ್ಲಿ 3 ಕೆ.ಜಿ 800 ಗ್ರಾಂ ಚರಸ್ ಇತ್ತು’ ಎಂದು ಎನ್‌ಸಿಬಿ ಬೆಂಗಳೂರು ವಲಯದ ನಿರ್ದೇಶಕ ಅಮಿತ್ ಗಾವಟೆ ‘ಪ್ರಜಾವಾಣಿ’ಗೆ ತಿಳಿಸಿದರು.

‘ಪಾರ್ಸೆಲ್ ವಿಳಾಸದ ಆಧಾರದಲ್ಲಿ ಆರ್. ಖಾನ್ ಹಾಗೂ ಆತನ ಸಹಚರ ಎಸ್. ಹುಸೈನ್‌ನನ್ನು ಬೆಂಗಳೂರಿನಲ್ಲಿ ಭಾನುವಾರ ಬಂಧಿಸಲಾಗಿದೆ’ ಎಂದೂ ಹೇಳಿದರು.

ಕಾಸರಗೋಡಿನ ಪೆಡ್ಲರ್‌ಗಳು: ‘ಕಾಸರಗೋಡಿಯಲ್ಲಿರುವ ಪೆಡ್ಲರ್‌ಗಳು ಪಾರ್ಸೆಲ್ ಮೂಲಕ ದೋಹಾಕ್ಕೆ ಡ್ರಗ್ಸ್ ಕಳುಹಿಸುತ್ತಿದ್ದರು. ಈ ಜಾಲದ ಇಬ್ಬರು ಮಾತ್ರ ಸದ್ಯ ಸಿಕ್ಕಿಬಿದ್ದಿದ್ದು, ಉಳಿದವರ ಪತ್ತೆಗೂ ತನಿಖೆ ಮುಂದುವರಿಸಲಾಗಿದೆ’ ಎಂದೂ ತಿಳಿಸಿದರು.

ಸರ್ಕಾರಿ ಆಸ್ಪತ್ರೆ: ಅರ್ಧ ಡೋಸ್ ಲಸಿಕೆ– ಇನ್ನರ್ಧ ಮಾರಾಟ

ಬೆಂಗಳೂರು: ಅನ್ನಪೂರ್ಣೇಶ್ವರಿ ನಗರ ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ಕೋವಿಡ್ ಲಸಿಕೆ ಮಾರುತ್ತಿದ್ದ ಆರೋಪದಡಿ ಬಂಧಿಸಲಾಗಿರುವ ವೈದ್ಯೆ ಡಾ. ಪುಷ್ಪಿತಾ, ಸರ್ಕಾರಿ ಆಸ್ಪತ್ರೆಗೆ ಬರುವವರಿಗೆ ಡೋಸ್‌ನ ಅರ್ಧ ಲಸಿಕೆಯನ್ನು ಮಾತ್ರ ನೀಡಿ ಇನ್ನರ್ಧ ಡೋಸ್ ಲಸಿಕೆಯನ್ನು ಮಾರಾಟ ಮಾಡುತ್ತಿದ್ದರು ಎಂಬ ಸಂಗತಿ ತನಿಖೆಯಿಂದ ಹೊರಬಿದ್ದಿದೆ.



ಡಾ. ಪುಷ್ಪಿತಾ

ಬಸವೇಶ್ವರನಗರ ಬಳಿಯ ಮಂಜುನಾಥ್ ನಗರದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕೆಲಸ ಮಾಡುತ್ತಿದ್ದ ಡಾ. ಪುಷ್ಪಿತಾ ಹಾಗೂ ಅವರ ಸ್ನೇಹಿತೆ ಪ್ರೇಮಾ ಅವರನ್ನು ಇತ್ತೀಚೆಗೆ ಬಂಧಿಸಲಾಗಿತ್ತು.

‘ಉಚಿತವಾಗಿ ನೀಡಲು ಆಸ್ಪತ್ರೆಗೆ ಬರುತ್ತಿದ್ದ ಲಸಿಕೆಗಳನ್ನೇ ಡಾ. ಪುಷ್ಪಿತಾ, ಪ್ರೇಮಾ ಮನೆಗೆ ತೆಗೆದುಕೊಂಡು ಹೋಗುತ್ತಿದ್ದರು. ಅಲ್ಲಿಯೇ ತಲಾ ₹ 400 ಪಡೆದು ಜನರಿಗೆ ಲಸಿಕೆ ಹಾಕುತ್ತಿದ್ದರು. 400ಕ್ಕೂ ಹೆಚ್ಚು ಜನರಿಗೆ ಲಸಿಕೆ ಹಾಕಿರುವುದು ಪತ್ತೆಯಾಗಿತ್ತು’ ಎಂದು ಪೊಲೀಸರು ಹೇಳಿದರು.

ಭದ್ರತಾ ಕೆಲಸಕ್ಕೆ ಬಂದು ಕಳವು: ಬಂಧನ

ಬೆಂಗಳೂರು: ಭದ್ರತಾ ಕೆಲಸಕ್ಕಾಗಿ ನಗರಕ್ಕೆ ಬಂದು ತಮ್ಮದೇ ಗ್ಯಾಂಗ್ ಕಟ್ಟಿಕೊಂಡು ಮನೆಗಳಲ್ಲಿ ಕಳವು ಮಾಡುತ್ತಿದ್ದ ಆರೋಪದಡಿ ನೇಪಾಳದ ಆರು ಮಂದಿಯನ್ನು ರಾಮಮೂರ್ತಿನಗರ ಪೊಲೀಸರು ಬಂಧಿಸಿದ್ದಾರೆ.

‘ಬಂಧಿತರಿಂದ ₹ 17 ಲಕ್ಷ ಮೌಲ್ಯದ ಚಿನ್ನಾಭರಣ ಹಾಗೂ ಬೆಳ್ಳಿ ಸಾಮಗ್ರಿ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಏಕರೂಪದ ತಂತ್ರಾಂಶದಿಂದ ಪಾರದರ್ಶಕತೆ’

ಸಹಕಾರ ಬ್ಯಾಂಕ್: 30 ಲಕ್ಷ ರೈತರಿಗೆ ₹20,810 ಕೋಟಿ ಬೆಳೆ ಸಾಲ ವಿತರಣೆ ಗುರಿ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿ ನಗರ: ‘ರಾಜ್ಯದಲ್ಲಿರುವ 21 ಡಿಸಿಸಿ ಬ್ಯಾಂಕ್ ಹಾಗೂ 5,400 ಕೃಷಿ ಪತ್ತಿನ ಸಹಕಾರ ಬ್ಯಾಂಕ್‌ಗಳಿಗೆ ಏಕರೂಪದ ತಂತ್ರಾಂಶ ರೂಪಿಸುವ ಕಾರ್ಯ ಪ್ರಗತಿಯಲ್ಲಿದ್ದು, ಇದರಿಂದ ಪಾರದರ್ಶಕ ವ್ಯವಸ್ಥೆ ಇನ್ನೂ ಹೆಚ್ಚಿನ ಮಟ್ಟದಲ್ಲಿ ಅನುಷ್ಠಾನಗೊಳಿಸಲು ಸಾಧ್ಯವಾಗಲಿದೆ’ ಎಂದು ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಹೇಳಿದರು.

ಸಚಿವ ಎಸ್‌ಟಿ. ಸೋಮಶೇಖರ್ ಅವರು ರೈತರು ಮತ್ತು ಹಲವು ಸ್ತ್ರೀಶಕ್ತಿ ಸಂಘಗಳಿಗೆ ಸಾಲದ ಚೆಕ್ ವಿತರಿಸಿದರು

ರಾಮೋಹಳ್ಳಿಯಲ್ಲಿ ಬಿಡಿಸಿಸಿ ಬ್ಯಾಂಕ್ ಮತ್ತು ರೈತಪತ್ತಿನ ಸಹಕಾರ ಸಂಘ ನಿಯಮಿತ ವತಿಯಿಂದ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ರೈತರಿಗೆ ₹1.75 ಕೋಟಿ ಬಡ್ಡಿರಹಿತ ಸಾಲ ಮತ್ತು ಹಲವು ಸ್ತ್ರೀಶಕ್ತಿ ಸಂಘಗಳಿಗೆ ತಲಾ ₹5 ಲಕ್ಷ ಸಾಲ ವಿತರಿಸಿ ಮಾತನಾಡಿದರು.

‘ಏಕರೂಪದ ತಂತ್ರಾಂಶ ರೂಪಿಸಲು ಸರ್ಕಾರವು ₹90 ಕೋಟಿ ಮೀಸಲಿಟ್ಟಿದೆ. ಇದು ಅನುಷ್ಠಾನಗೊಂಡರೆ ರಾಜ್ಯದಾದ್ಯಂತ ರೈತರಿಗೆ ಎಷ್ಟು ಸಾಲ ನೀಡಲಾಗಿದೆ? ಅರ್ಹರಿಗೆ ಸರಿಯಾಗಿ ಸಾಲ ಲಭಿಸುತ್ತಿದೆಯೇ? ವಿತರಣೆ ಹೇಗೆ ಆಗುತ್ತಿದೆ ಎಂಬುದನ್ನು ಬೆಂಗಳೂರಿನಲ್ಲೇ ಕುಳಿತು ಮಾಹಿತಿಯನ್ನು ಪಡೆದುಕೊಳ್ಳಬಹುದಾಗಿದೆ’ ಎಂದು ಸಚಿವರು ತಿಳಿಸಿದರು.

‘ಹೆಚ್ಚುವರಿ ಅನುದಾನ ನೀಡುವಂತೆ ನಬಾರ್ಡ್‌ಗೂ ಕೇಳಿಕೊಳ್ಳಾಗಿದೆ. ಎಪಿಎಂಸಿಗಳಿಗೆ ಸುಮಾರು ₹302ಕೋಟಿ ನೀಡುವಂತೆ ಮನವಿ ಮಾಡಲಾಗಿದೆ’ ಎಂದರು.

‘ಯಾವುದೇ ರೈತರಿಗೂ ಸಾಲ ಇಲ್ಲ ಎನ್ನುವುದಕ್ಕೆ ಆಸ್ಪದ ಇರಬಾರದು. ಎಲ್ಲರಿಗೂ ಸಾಲ ದೊರೆಯಬೇಕು ಎಂಬುದು ನಮ್ಮ ಉದ್ದೇಶ. ರೈತರಿಗೆ ಸಾಲ ನೀಡಿದರೆಶೇಕಡಾ 90 ರಷ್ಟು ಸಾಲವು ಬೇಗನೇ ಮರುಪಾವತಿಯಾಗುತ್ತವೆ. ಇನ್ನು ಸ್ತ್ರೀ ಶಕ್ತಿ ಸಂಘಗಳು, ಸ್ವಸಹಾಯ ಸಂಘಗಳಿಗೆ ಸಾಲ ನೀಡಿದರೆ ಶೇ.100 ಮರುಪಾವತಿಯಾಗುತ್ತಿದೆ’ ಎಂದು ಸಚಿವರು ಮಾಹಿತಿ ನೀಡಿದರು.

ಬಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಡಿ.ಹನುಮಂತಯ್ಯ, ‘ಮಳೆಗಾಲ ಪ್ರಾರಂಭವಾಗಿದ್ದು, ರೈತರು ಕೊರೊನಾ ಸೇರಿದಂತೆ ಇನ್ನಿತರ ತೊಂದರೆಗೆ ಒಳಗಾಗಿದ್ದಾರೆ. ಕೃಷಿ ಚಟುವಟಿಕೆಗೆ ಈಗಾಗಲೇ ₹80 ಕೋಟಿ ಬೆಳೆ ಸಾಲ ನೀಡಲಾಗಿದ್ದು, ಈ ತಿಂಗಳ 20 ರ ಒಳಗಾಗಿ ₹25 ಕೋಟಿ ಸಾಲವನ್ನು ಬೆಂಗಳೂರು ನಗರ, ಗ್ರಾಮಾಂತರ ಹಾಗೂ ರಾಮನಗರ ಜಿಲ್ಲಾ ವ್ಯಾಪ್ತಿಯ ರೈತರಿಗೆ ವಿತರಿಸಲಾಗುವುದು’ ಎಂದರು.

ರಾಮೋಹಳ್ಳಿ ರೈತ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ವಿ.ವೇಣುಗೋಪಾಲ್ ಮತ್ತು ಎಸ್.ಚೇತನ್ ಅವರು 1,500 ಕುಟುಂಬಗಳಿಗೆ ದಿನಸಿ ಕಿಟ್‌ಗಳನ್ನು ವಿತರಿಸಿದರು.

ನಿಧನ ವಾರ್ತೆ

ವಿ.ಕೆ. ಗೋಪಾಲ್



ಬೆಂಗಳೂರು: ಜೆಡಿಎಸ್ ಪದ್ಮನಾಭನಗರ ವಿಧಾನಸಭಾ ಕ್ಷೇತ್ರ ಘಟಕದ ಅಧ್ಯಕ್ಷ ವಿ.ಕೆ. ಗೋಪಾಲ್ (56) ಅವರು ಸೋಮವಾರ ಬೆಳಿಗ್ಗೆ ಹೃದಯಾಘಾತದಿಂದ ನಿಧನರಾದರು.

ಅವರಿಗೆ ಪತ್ನಿ, ಪುತ್ರ, ಪುತ್ರಿ ಇದ್ದಾರೆ.

ಬಿಡಿಎ ಗುತ್ತಿಗೆದಾರರ ಸಂಘದ ಅಧ್ಯಕ್ಷರೂ ಆಗಿದ್ದ ವಿ.ಕೆ. ಗೋಪಾಲ್, ಕಳೆದ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಿದ್ದರು.

ಅಂಕ ನೋಂದಣಿ: ಲೋಪ ಎಸಗಿದರೆ ಮಾನ್ಯತೆಯೇ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದ್ವಿತೀಯ ಪಿಯುಸಿ ವಿದ್ಯಾರ್ಥಿಗಳನ್ನು ತೇರ್ಗಡೆ ಮಾಡುವ ಉದ್ದೇಶದಿಂದ ಪ್ರಥಮ ಪಿಯುಸಿ ಮತ್ತು ಎಸ್ಸೆಸ್ಸೆಲ್ಸಿ ಅಂಕಗಳನ್ನು ವಿದ್ಯಾರ್ಥಿಗಳ ಸಾಧನೆ ಟ್ರ್ಯಾಕಿಂಗ್ ವ್ಯವಸ್ಥೆ (ಎಸ್‌ಎಟಿಎಸ್) ಪೋರ್ಟಲ್‌ನಲ್ಲಿ ನಮೂದಿಸಬೇಕಿದ್ದು, ಈ ವೇಳೆ ಲೋಪವಾದರೆ ಪ್ರಾಚಾರ್ಯರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು’ ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆ ಎಚ್ಚರಿಕೆ ನೀಡಿದೆ.

ಅನುದಾನಿತ ಹಾಗೂ ಅನುದಾನ ರಹಿತ ಕಾಲೇಜುಗಳ ಪ್ರಾಚಾರ್ಯರು, ಅಂಕ ನಮೂದಿಸುವ ಸಂದರ್ಭದಲ್ಲಿ ಲೋಪ ಎಸಗಿದಲ್ಲಿ, ಶಿಸ್ತು ಕ್ರಮ ತೆಗೆದುಕೊಳ್ಳುವ ಜತೆಗೆ ಕಾಲೇಜಿನ ಮಾನ್ಯತೆ ರದ್ದು ಮಾಡಲು ಸರ್ಕಾರಕ್ಕೆ ಶಿಫಾರಸು ಮಾಡಲಾಗುವುದು ಎಂದೂ ಎಚ್ಚರಿಕೆ ನೀಡಲಾಗಿದೆ. ಪ್ರಥಮ ಪಿಯುಸಿ ಅಂಕ ನಮೂದಿಸಿದ ನಂತರ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯಿಂದ 2019ನೇ ಸಾಲಿನ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳು ವಾರ್ಷಿಕ ಹಾಗೂ ಪೂರಕ ಪರೀಕ್ಷೆಯಲ್ಲಿ ಪಡೆದ ಅಂಕಗಳು ಸ್ವಯಂ ಆಗಿ ದಾಖಲೀಕರಣವಾಗುತ್ತದೆ. ಅವುಗಳನ್ನು ಪರಿಶೀಲಿಸಿ, ಅಂತಿಮಗೊಳಿಸಬೇಕು. ಖಾಸಗಿ ಅಭ್ಯರ್ಥಿಯಾಗಿ ಎಸ್ಸೆಸ್ಸೆಲ್ಸಿ ತೇರ್ಗಡೆ ಆದವರ ಮಾಹಿತಿಯನ್ನು ಮ್ಯಾನುವಲ್ ವ್ಯವಸ್ಥೆಯಲ್ಲಿ ಅಪ್ಲೋಡ್ ಮಾಡಬೇಕು ಎಂದು ಮಂಡಳಿ ಸೂಚನೆ ನೀಡಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

OTHERS

For Sale

IMMEDIATE SALE Leather Sofa Leather diwan King size Box cot dining call 9845414482/ 8861643112

PERSONAL

Change of Name

I, GAYATHRI GURURAJ, residing at C 801, Hiranandani Glen Gate, Devinagar, Near Tata Nagar, Bangalore 560092 have changed my daughter's name from SIMONE GIRISH to SIDDIKSHA, vide affidavit dated 29/05/2021, sworn before Kundan Babu.M., Notary, Bangalore.

DH ಪ್ರಜಾವಾಣಿ FOR CLASSIFIED ADVERTISEMENTS

SERVICES

Contact:
Santhosh: 9880856233
Jerry: 9731810277
Tanveer: 9886213331

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

GM-Advertisement

ಸೆಂಟಮ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ CENTUM

CIN: L85110KA1993PLC013869

ನೋಂದಾಯಿತ ಕಛೇರಿ: ನಂ.44 ಕೆ.ಎಚ್.ಬಿ. ಕೈಗಾರಿಕಾ ಪ್ರದೇಶ, ಯಲಹಂಕ ನ್ಯೂ ಟೌನ್, ಬೆಂಗಳೂರು – 560 106

Tel: 080 - 4143 6000 Fax: 080 - 4143 6005

Email: investors@centumelectronics.com Website: www.centumelectronics.com

ಸೂಚನೆ

ಈ ಮೂಲಕ ತಿಳಿಸುವುದೇನೆಂದರೆ, ಸೆಬಿ (ಲಿಸ್ಟಿಂಗ್ ಒಬ್ಲಿಗೇಶನ್ಸ್ ಮತ್ತು ಡಿಸ್ಕ್ಲೋಜರ್ಸ್ ರಿಕ್ವಾಯರ್‌ಮೆಂಟ್ಸ್) ರೆಗ್ಯುಲೇಶನ್ಸ್ 2015ರ ರೆಗ್ಯುಲೇಶನ್ 29 ಮತ್ತು 47ರೊಂದಿಗೆ ಓದಲ್ಪಡುವ ರೆಗ್ಯುಲೇಶನ್‌ನ ಅನುಸಾರ, 31ನೇ ಮಾರ್ಚ್ 2021 ರ ನಾಲ್ಕನೇ ತ್ರೈಮಾಸಿಕದ ಮತ್ತು ವಾರ್ಷಿಕ ಅವಧಿಗೆ ಕೊನೆಗೊಂಡ ಪರಿಶೋಧಿತ ಪ್ರತ್ಯೇಕವಾದ ಮತ್ತು ಒಟ್ಟುಗೂಡಿಸಿದ ಆರ್ಥಿಕ ಫಲಿತಾಂಶಗಳೊಂದಿಗೆ, 31ನೇ ಮಾರ್ಚ್ 2021 ಗೆ ಕೊನೆಗೊಂಡ ವಾರ್ಷಿಕ ಅವಧಿಗೆ ಡಿವಿಡೆಂಡ್ ಏನಾದರೂ ಪ್ರಸ್ತಾಪವನ್ನು ಮಾಡುವುದಿದ್ದಲ್ಲಿ ಪರಿಗಣಿಸುವುದಕ್ಕಾಗಿ ಕಂಪನಿಯ ನಿರ್ದೇಶಕರ ಮಂಡಳಿಯ ಸಭೆಯನ್ನು ಮಂಗಳವಾರ, 15ನೇ ಜೂನ್, 2021 ರಂದು ಏರ್ಪಡಿಸಲಾಗಿದೆ.

ಮೇಲಿನ ವಿವರಗಳನ್ನು ಕಂಪನಿಯ ವೆಬ್‌ಸೈಟ್: www.centumelectronics.com, ಮತ್ತು ಸ್ಟಾಕ್ ಎಕ್ಸ್‌ಚೇಂಜ್‌ನ ವೆಬ್‌ಸೈಟ್: www.nseindia.com ಮತ್ತು www.bseindia.com ಗಳಲ್ಲಿಯೂ ವೀಕ್ಷಿಸಬಹುದು.

ಸೆಂಟಮ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್‌ನ ಪರವಾಗಿ
ಸಹಿ/–
ನಾಗರಾಜ್ ಕೆ ವಿ
ಕಂಪನಿ ಸೆಕ್ರೆಟರಿ ಮತ್ತು ಕಂಪ್ಲಾಯೆನ್ಸ್ ಆಫೀಸರ್

ಬೆಂಗಳೂರು
7ನೇ ಜೂನ್, 2021

ಮೆಟ್ರೊ: ರೀಚ್ 2ಎ–2ಬಿಗೆ ಮಂಜೂರಾತಿ ಆದೇಶ ನೀಡಿದ ಕೇಂದ್ರ ಸರ್ಕಾರ

ವಿಮಾನನಿಲ್ದಾಣ ಮಾರ್ಗಕ್ಕೆ ‘ಗ್ರೀನ್ ಸಿಗ್ನಲ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಮ್ಮ ಮೆಟ್ರೊ’ ಎರಡನೇ ಹಂತದಲ್ಲಿ ಸಿಲ್ಕ್ ಬೋರ್ಡ್‌ನಿಂದ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದವರೆಗಿನ 58.19 ಕಿ.ಮೀ. ಉದ್ದದ ಮೆಟ್ರೊ ಮಾರ್ಗ ನಿರ್ಮಾಣಕ್ಕೆ ಕೇಂದ್ರ ಸರ್ಕಾರವು ಸೋಮವಾರ ಮಂಜೂರಾತಿ ಆದೇಶ ನೀಡಿದ್ದು, ಕಾಮಗಾರಿ ಪ್ರಾರಂಭಕ್ಕೆ ದಿನಗಣನೆ ಪ್ರಾರಂಭವಾಗಿದೆ.

ಕೇಂದ್ರ ವಸತಿ ಮತ್ತು ನಗರಾಭಿವೃದ್ಧಿ ವ್ಯವಹಾರಗಳ ಸಚಿವಾಲಯವು ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಈ ಕುರಿತು ಪತ್ರ ಬರೆದಿದ್ದು, ಮಂಜೂರಾತಿ ಆದೇಶ ನೀಡಿದ ದಿನದಿಂದ ಐದು ವರ್ಷಗಳಲ್ಲಿ ಯೋಜನೆ ಪೂರ್ಣಗೊಳಿಸಬೇಕು ಎಂದು ಸೂಚಿಸಿದೆ.



ಕೆ.ಆರ್‌. ಪುರದಲ್ಲಿ ಮೆಟ್ರೊ ನಿಲ್ದಾಣದ ಕಾಮಗಾರಿಯ ನೋಟ –ಪ್ರಜಾವಾಣಿ ಚಿತ್ರ

ಸೆಂಟ್ರಲ್ ಸಿಲ್ಕ್ ಬೋರ್ಡ್‌ನಿಂದ ಕೆ.ಆರ್. ಪುರ 19.75 ಕಿ.ಮೀ. ಮತ್ತು ಕೆ.ಆರ್. ಪುರದಿಂದ ಹೆಬ್ಬಾಳ ಮಾರ್ಗವಾಗಿ ವಿಮಾನ ನಿಲ್ದಾಣದವರೆಗಿನ 38.44 ಕಿ.ಮೀ. ಸೇರಿದಂತೆ ಒಟ್ಟಾರೆ 58.19 ಕಿ.ಮೀ. ಉದ್ದದ ಈ ಮಾರ್ಗವನ್ನು ₹14,788 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗುತ್ತಿದೆ. 50:50ರ ಅನುಪಾತದಲ್ಲಿ ಕೇಂದ್ರ ಮತ್ತು ರಾಜ್ಯಸರ್ಕಾರವು ಈ ಮೊತ್ತವನ್ನು ಭರಿಸಲಿವೆ.

ಕೇಂದ್ರ ಸರ್ಕಾರದಿಂದ ಏಪ್ರಿಲ್‌ನಲ್ಲಿ ಈ ಮಾರ್ಗ ನಿರ್ಮಾಣಕ್ಕೆ ಅನುಮೋದನೆ ದೊರಕಿತ್ತು. ಆದರೆ, ಇನ್ನೂ ಮಂಜೂರಾತಿ ಆದೇಶ ನೀಡಿರಲಿಲ್ಲ. ರಾಜ್ಯ ಸರ್ಕಾರವು 2019ರ ಜನವರಿಯಲ್ಲಿ ಇದಕ್ಕೆ ಮಂಜೂರಾತಿ ಆದೇಶ ನೀಡಿತ್ತು. ಆಗ ಯೋಜನಾ ವೆಚ್ಚ ₹10,584 ಕೋಟಿ ಆಗಿತ್ತು.

ಭೂಸ್ವಾಧೀನ: ಹೊರವರ್ತುಲ ರಸ್ತೆ ಮಾರ್ಗದ ಭೂಸ್ವಾಧೀನ ಕಾರ್ಯ ಶೇ 100ರಷ್ಟು ಪೂರ್ಣಗೊಂಡಿದ್ದು, ವಿಮಾನ ನಿಲ್ದಾಣ ಮಾರ್ಗದ ಭೂಸ್ವಾಧೀನ ಕಾರ್ಯ ಶೇ 90ರಷ್ಟು ಆಗಿದೆ.

> **ಕೇಂದ್ರದ ಅನುದಾನ ಬಳಸಿಕೊಂಡು 2ಎ ಮತ್ತು ಬಿ ಹಂತದ ಯೋಜನೆಗಳನ್ನು ಐದು ವರ್ಷಗಳ ಕಾಲಮಿತಿಯಲ್ಲಿ ಪೂರ್ಣಗೊಳಿಸುವ ವಿಶ್ವಾಸವಿದೆ. ಕಾಮಗಾರಿ ಶೀಘ್ರ ಪ್ರಾರಂಭವಾಗಲಿದೆ.**
>
> **ರಾಕೇಶ್ ಸಿಂಗ್,** ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ

ಮೂರನೇ ಅಲೆಯ ಭೀತಿ: ಲಸಿಕೆ ಅಭಿಯಾನ ತೀವ್ರಗೊಳಿಸಲು ಬಿಬಿಎಂಪಿ ನಿರ್ಧಾರ

30 ದಿನಗಳಲ್ಲಿ 30 ಲಕ್ಷ ಮಂದಿಗೆ ಲಸಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಮೂರನೇ ಅಲೆ ಕಾಣಿಸಿಕೊಳ್ಳುವ ಬಗ್ಗೆ ತಜ್ಞರು ಮುನ್ನೆಚ್ಚರಿಕೆ ನೀಡಿರುವುದನ್ನು ಗಂಭೀರವಾಗಿ ಪರಿಗಣಿಸಿರುವ ಬಿಬಿಎಂಪಿ, ಇದನ್ನು ಪರಿಣಾಮಕಾರಿಯಾಗಿ ಎದುರಿಸಲು ಲಸಿಕಾ ಅಭಿಯಾನವನ್ನು ಬಲಪಡಿಸಲು ಮುಂದಾಗಿದೆ.

ಈ ಕುರಿತು ಮಾಹಿತಿ ನೀಡಿದ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ, 'ಕೋವಿಡ್ ಮೂರನೇ ಅಲೆಯನ್ನು ಸಮರ್ಥವಾಗಿ ಎದುರಿಸಬೇಕಾದರೆ ಎಲ್ಲರಿಗೂ ಲಸಿಕೆ ಹಾಕಬೇಕು. ಲಸಿಕೆ ಪಡೆದರೆ ಜನರು ಸುರಕ್ಷಿತವಾಗಿರುತ್ತಾರೆ. ಸೋಂಕು ತಗುಲಿದರೂ ಚಿಕಿತ್ಸೆ ಸುಲಭವಾಗಲಿದೆ. ಹಾಗಾಗಿ ಎಲ್ಲರಿಗೂ ಲಸಿಕೆ ನೀಡಲು ಸರ್ಕಾರ ಕ್ರಮ ಕೈಗೊಳ್ಳುತ್ತಿದೆ' ಎಂದು ತಿಳಿಸಿದರು.

'30 ದಿನಗಳಲ್ಲಿ 30 ಲಕ್ಷ ಮಂದಿಗೆ ಲಸಿಕೆ ನೀಡುವ ಗುರಿ ಹೊಂದಿದ್ದೇವೆ. ಖಾಸಗಿ ಆಸ್ಪತ್ರೆಗಳು ಹಾಗೂ ದೇಣಿಗೆ ನೀಡುವ ಸಂಸ್ಥೆಗಳ ನೆರವಿನಿಂದ ದಿನಕ್ಕೆ 1 ಲಕ್ಷಕ್ಕಿಂತ ಜಾಸ್ತಿ ಡೋಸ್ ಲಸಿಕೆಗಳನ್ನು ನೀಡಲಿದ್ದೇವೆ. ನಗರದಲ್ಲಿ ಶುಕ್ರವಾರ 1.17 ಲಕ್ಷ ಮಂದಿಗೆ ಹಾಗೂ ಶನಿವಾರ 1.15 ಲಕ್ಷ ಮಂದಿಗೆ ಲಸಿಕೆ ಹಾಕಲಾಗಿದೆ' ಎಂದರು.

'ನಗರದಲ್ಲಿ 45 ವರ್ಷ ಮೇಲಿನ 26 ಲಕ್ಷ ಜನರನ್ನು ಗುರುತಿಸಲಾಗಿದೆ. ಇವರಲ್ಲಿ 15.43 ಲಕ್ಷ ಮಂದಿ ಲಸಿಕೆಯ ಮೊದಲ ಡೋಸ್ ಪಡೆದಿದ್ದಾರೆ. ಅಂದರೆ, ಶೇ 59ರಷ್ಟು ಮಂದಿಗೆ ಈಗಾಗಲೇ ಲಸಿಕೆ ಹಾಕಲಾಗಿದ್ದು, ತಿಂಗಳ ಒಳಗ ಶೇ 75ರಷ್ಟು ಮಂದಿಗೆ ಲಸಿಕೆ ನೀಡಲಿದ್ದೇವೆ. ಇದಕ್ಕಾಗಿ ಲಭ್ಯ ಇರುವ ಲಸಿಕೆ ಜೊತೆಗೆ ಇನ್ನೂ 4 ಲಕ್ಷ ಡೋಸ್‌ಗಳ ಅಗತ್ಯವಿದೆ' ಎಂದು ಮುಖ್ಯ ಆಯುಕ್ತರು ಮಾಹಿತಿ ನೀಡಿದರು.

'18ರಿಂದ 44 ವರ್ಷದೊಳಗಿನವರಲ್ಲಿ ಆಯ್ದ 20 ವರ್ಗಗಳನ್ನು ಗುರುತಿಸಿ ಉಚಿತವಾಗಿ ಲಸಿಕೆ ನೀಡಲಾಗುತ್ತಿದೆ. ಈ ವಯೋಮಾನದ ಶೇ 75ರಷ್ಟು ಮಂದಿಗೆ ಖಾಸಗಿ ಆಸ್ಪತ್ರೆಗಳ ಮೂಲಕ ಲಸಿಕೆ ನೀಡಲಾಗುತ್ತಿದೆ. ವಿವಿಧ ಕಂಪನಿಗಳ ಕಚೇರಿಗಳು, ಕಾರ್ಖಾನೆಗಳು, ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಕಂಪನಿಗಳಗಳು ಪ್ರತ್ಯೇಕವಾಗಿ ಖಾಸಗಿ ಆಸ್ಪತ್ರೆ ಜೊತೆ ಸಮಾಲೋಚಿಸಿ ತಮ್ಮ ಸಿಬ್ಬಂದಿ ಲಸಿಕೆ ಕೊಡಿಸುತ್ತಿವೆ. ಅಪಾರ್ಟ್‌ಮೆಂಟ್ ಸಮುಚ್ಚಯಗಳ ಕ್ಷೇಮಾಭಿವೃದ್ಧಿ ಸಂಘಗಳೂ ಖಾಸಗಿ ಆಸ್ಪತ್ರೆಗಳ ನೆರವಿನಿಂದ ಲಸಿಕಾ ಕಾರ್ಯಕ್ರಮ ಹಮ್ಮಿಕೊಳ್ಳುತ್ತಿವೆ' ಎಂದರು.

'18ರಿಂದ 44 ವರ್ಷಗಳ ಒಳಗಿನ 64 ಲಕ್ಷ ಮಂದಿಯನ್ನು ನಗರದಲ್ಲಿ ಗುರುತಿಸಿದ್ದು, ಈಗಾಗಲೇ 9 ಲಕ್ಷ ಮಂದಿ ಲಸಿಕೆ ಪಡೆದಿದ್ದಾರೆ. ಈ ವಯೋಮಾನದ 32 ಲಕ್ಷ ಮಂದಿಗೆ ಖಾಸಗಿ ವಲಯದ ಸಹಭಾಗಿತ್ವದಲ್ಲಿ ತಿಂಗಳ ಒಳಗೆ ಲಸಿಕೆ ನೀಡಲು ನಿರ್ಧರಿಸಿದ್ದೇವೆ. ಇದಕ್ಕೆ 23 ಲಕ್ಷ ಹೆಚ್ಚುವರಿ ಡೋಸ್‌ಗಳ ಅಗತ್ಯವಿದೆ' ಎಂದರು.

'ಬಿಬಿಎಂಪಿಯು ದಾನಿಗಳ ನೆರವಿನಿಂದ ತಳವರ್ಗದ ಜನರಿಗೆ ಹಾಗೂ ವೆಚ್ಚ ಭರಿಸಲು ಸಾಧ್ಯವಿಲ್ಲದವರಿಗೆ ಲಸಿಕೆ ಕಾರ್ಯಕ್ರಮ ಏರ್ಪಡಿಸುತ್ತಿದೆ. ಕೊಳೆಗೇರಿ, ಗಾರ್ಮೆಂಟ್ಸ್ ಕಾರ್ಖಾನೆಗಳ ಕಾರ್ಮಿಕರು, ಮಧ್ಯಮ, ಸಣ್ಣ ಮತ್ತು ಅತಿ ಸಣ್ಣ ಕೈಗಾರಿಕೆಗಳ ಕಾರ್ಮಿಕರಿಗೆ ಲಸಿಕೆ ಅಭಿಯಾನ ಹಮ್ಮಿಕೊಳ್ಳುತ್ತಿದ್ದು, ಇದಕ್ಕಾಗಿ ವಿಶೇಷ ಕಾರ್ಯಪಡೆ (ಎಸಿಟಿ) ರಚಿಸಲಾಗಿದೆ. ಮೂರು ದಿನಗಳಿಂದ ಕಟ್ಟಡ ಕಾರ್ಮಿಕರಿಗೆ ಲಸಿಕೆ ಕಾರ್ಯಕ್ರಮ ಶುರು ಮಾಡಿದ್ದೇವೆ' ಎಂದು ತಿಳಿಸಿದರು.

ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ಭಾಷಣದಲ್ಲಿ ಎಲ್ಲರಿಗೂ ಉಚಿತ ಲಸಿಕೆ ನೀಡುವ ವಾಗ್ದಾನ ಮಾಡಿದ ಬಗ್ಗೆ ಪ್ರತಿಕ್ರಿಯಿಸಿದ ಗೌರವ್ ಗುಪ್ತ, 'ಸದ್ಯಕ್ಕೆ ನಾವು ಹಮ್ಮಿಕೊಂಡಿರುವ ಅಭಿಯಾನ ಮುಂದುವರಿಸಲಿದ್ದೇವೆ. ಕೇಂದ್ರ ಸರ್ಕಾರ ಲಸಿಕೆ ಲಭ್ಯವಾದ ಬಳಿಕ ಅವುಗಳನ್ನು ಉಚಿತವಾಗಿ ನೀಡಲು ಕ್ರಮ ಕೈಗೊಳ್ಳಲಿದ್ದೇವೆ' ಎಂದರು.

'ಖಾಸಗಿ ಆಸ್ಪತ್ರೆಗಳಿಗೇಕೆ ಹೆಚ್ಚಿನ ಲಸಿಕೆ?'

ಬಿಬಿಎಂಪಿಗಿಂತ ಖಾಸಗಿ ಆಸ್ಪತ್ರೆಗಳಿಗೆ ಹೆಚ್ಚು ಲಸಿಕೆ ಲಭ್ಯವಾಗುತ್ತಿರುವ ಕುರಿತು ಪ್ರತಿಕ್ರಿಯಿಸಿದ ಮುಖ್ಯ ಆಯುಕ್ತರು, 'ಲಭ್ಯ ಇರುವ ಲಸಿಕೆಗಳಲ್ಲಿ ಶೇ 50 ರಷ್ಟನ್ನು ಕೇಂದ್ರ ಸರ್ಕಾರ ಪಡೆಯುತ್ತದೆ. 45 ವರ್ಷ ಮೇಲ್ಪಟ್ಟವರಿಗೆ ನೀಡಲು ಈ ಲಸಿಕೆಗಳನ್ನು ಹಂಚಿಕೆ ಮಾಡುತ್ತಿದೆ. ಉಳಿದ ಶೇ 50ರಷ್ಟು ಲಸಿಕೆಗಳಲ್ಲಿ ಶೇ 25ರಷ್ಟನ್ನು ರಾಜ್ಯ ಸರ್ಕಾರಗಳಿಗೆ ಹಾಗೂ ಶೇ 25ರಷ್ಟನ್ನು ಖಾಸಗಿ ಆಸ್ಪತ್ರೆಗಳಿಗೆ ಹಂಚಿಕೆ ಮಾಡಲಾಗಿದೆ. ಲಸಿಕೆ ಖರೀದಿಸುವ ಖಾಸಗಿ ಆಸ್ಪತ್ರೆಗಳು ಬೆಂಗಳೂರಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿವೆ. ಹಾಗಾಗಿ ಸಹಜವಾಗಿ ಅವರಿಗೆ ಹೆಚ್ಚು ಲಸಿಕೆ ಸಿಕ್ಕಿದೆ' ಎಂದು ವಿವರಿಸಿದರು.

'ಲಸಿಕೆ: ಮನೆ ಮನೆ ಸಮೀಕ್ಷೆ'

'ಲಸಿಕೆ ಪಡೆಯದವರನ್ನು ಗುರುತಿಸುವ ಬಗ್ಗೆ ವಲಯ ಮಟ್ಟದ ಅಧಿಕಾರಿಗಳು ಹಾಗೂ ಆರೋಗ್ಯ ವಿಭಾಗದ ಅಧಿಕಾರಿಗಳ ಸಭೆಯಲ್ಲಿ ನಿರ್ಣಯಿಸಿದ್ದೇವೆ. ಈ ಸಲುವಾಗಿ ಮನೆ ಮನೆ ಸಮೀಕ್ಷೆ ನಡೆಸಲಾಗುತ್ತದೆ. ಮತದಾರರ ಪಟ್ಟಿ ಆಧಾರದಲ್ಲಿ ಜನರನ್ನು ಗುರುತಿಸಿ ಲಸಿಕೆ ಬಗ್ಗೆ ಮಾಹಿತಿ ನೀಡಬೇಕು. ಲಸಿಕೆಯ ಎರಡನೇ ಡೋಸ್ ಪಡೆಯಲು ಬಾಕಿ ಇರುವವರಿಗೆ ಕರೆ ಮಾಡಿ ಮಾಹಿತಿ ನೀಡಲು ನಿರ್ದೇಶನ ನೀಡಿದ್ದೇನೆ' ಎಂದು ಗೌರವ್ ಗುಪ್ತ ತಿಳಿಸಿದರು.

ಕಿಸಾನ್ ಕಾಂಗ್ರೆಸ್: ಆಮ್ಲಜನಕ ಸೌಲಭ್ಯದ ಆಂಬುಲೆನ್ಸ್

ಬೆಂಗಳೂರು: ಕೆಪಿಸಿಸಿ ಕಿಸಾನ್ ಕಾಂಗ್ರೆಸ್ ಘಟಕ ಆಮ್ಲಜನಕ ಸೌಲಭ್ಯವಿರುವ ಎಂಟು ರೈತ ಆರೋಗ್ಯ ಸಂಜೀವಿನಿ ಆಂಬುಲೆನ್ಸ್‌ಗಳನ್ನು ಸಾರ್ವಜನಿಕ ಸೇವೆ ಒದಗಿಸಿದೆ. ಮೂರು ಆಂಬುಲೆನ್ಸ್‌ಗಳನ್ನು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಸೋಮವಾರ ಸೇವೆಗೆ ಅರ್ಪಿಸಿದರು.

ದಾವಣಗೆರೆ ಜಿಲ್ಲೆಯ ಕಿಸಾನ್ ಕಾಂಗ್ರೆಸ್ ಘಟಕದ ಅಧ್ಯಕ್ಷ ಶಿವಗಂಗಾ ಬಸವರಾಜ್ ನೇತೃತ್ವದಲ್ಲಿ ಚನ್ನಗಿರಿ ವಿಧಾನಸಭೆ ವ್ಯಾಪ್ತಿಯಲ್ಲಿ ಮೂರು, ಕಿಸಾನ್ ಕಾಂಗ್ರೆಸ್‌ನ ನಾಯಕರಾದ ಎಸ್. ಮಂಜುನಾಥ್, ಶಿವಾನಂದ ಹೆಗ್ಡೆ ಕುಮಟಾ, ಸಿದ್ದು ಕೊಣ್ಣೂರು ಮತ್ತು ಪದ್ಮಜೀತ್ ಜೈನ್ ತೆರೆದಾಳ್ ನೇತೃತ್ವದಲ್ಲಿ ತಲಾ ಒಂದು ಆಂಬುಲೆನ್ಸ್ ಸೇವೆ ಆರಂಭಿಸಲಾಗಿದೆ ಎಂದು ಕಿಸಾನ್ ಘಟಕದ ಅಧ್ಯಕ್ಷ ಸಚಿನ್ ಮಿಗಾ ತಿಳಿಸಿದರು.

ಕಾಂಗ್ರೆಸ್ ಸಭೆ: ಪಕ್ಷದ ಮುಂಚೂಣಿ ಘಟಕಗಳಾದ ಕಿಸಾನ್ ಕಾಂಗ್ರೆಸ್, ಇಂಟಕ್, ಯುವ ಕಾಂಗ್ರೆಸ್, ಮಹಿಳಾ ಘಟಕ, ಎನ್‌ಎಸ್‌ಯುಐ ನಾಯಕರ ಜೊತೆ ಸೋಮವಾರ ಸರಣಿ ಸಭೆ ನಡೆಸಿದ ಶಿವಕುಮಾರ್, 'ಎಷ್ಟೇ ಕಷ್ಟವಾದರೂ ಜನರಿಗೆ ಉಚಿತ ಲಸಿಕೆ ನೀಡಲು ಕಾಂಗ್ರೆಸ್ ಪಕ್ಷ ಶ್ರಮಿಸಲಿದೆ' ಎಂದರು.

'ಪಕ್ಷದ ವತಿಯಿಂದ ಈಗಾಗಲೇ 172ಕ್ಕೂ ಹೆಚ್ಚು ಆಂಬುಲೆನ್ಸ್‌ಗಳನ್ನು ಸೇವೆಗೆ ನೀಡಲಾಗಿದೆ. ಅಲ್ಲದೆ, ಪಕ್ಷದ ಕಾರ್ಯಕರ್ತರು, ನಾಯಕರು ಜನರಿಗೆ ಲಸಿಕೆ ನೀಡಲು ತಮ್ಮ ಸ್ವಂತ ಹಣ ಖರ್ಚು ಮಾಡಿ ಲಸಿಕೆ ಸಂಗ್ರಹಿಸುತ್ತಿದ್ದಾರೆ. ಹಳ್ಳಿಗಳಲ್ಲಿ ಮತ್ತು ತಾಲ್ಲೂಕುಗಳಲ್ಲಿ ಉಚಿತ ಶಿಬಿರ ಆಯೋಜಿಸುತ್ತಿದ್ದೇವೆ' ಎಂದರು.

ಪ್ರಾಣಿಗಳ ದತ್ತು ಸ್ವೀಕಾರ: ಅವಕಾಶ

ಆನೇಕಲ್: ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿನ ಪ್ರಾಣಿಗಳನ್ನು ದತ್ತು ಪಡೆಯುವಂತೆ ಅಧಿಕಾರಿಗಳು ಮನವಿ ಮಾಡಿದ್ದಾರೆ.

ಉದ್ಯಾನ ಸಂಪೂರ್ಣವಾಗಿ ಪ್ರವೇಶ ಶುಲ್ಕದ ಮೂಲಕವೇ ನಿರ್ಹವಣೆಯಾಗುತ್ತಿದೆ. ಆದರೆ, ಕೋವಿಡ್ ಲಾಕ್‌ಡೌನ್ ಹಿನ್ನೆಲೆಯಲ್ಲಿ ಉದ್ಯಾನ ಮುಚ್ಚಿರುವುದರಿಂದ ಆದಾಯವಿಲ್ಲ. ಎಂದು ಉದ್ಯಾನದ ಕಾರ್ಯ ನಿರ್ವಾಹಕ ನಿರ್ದೇಶಕಿ ವನಶ್ರೀ ವಿಪಿನ್ ಸಿಂಗ್ ತಿಳಿಸಿದ್ದಾರೆ.

ಪ್ರಾಣಿಗಳನ್ನು ದತ್ತು ಪಡೆದವರಿಗೆ ಆದಾಯ ತೆರಿಗೆಯಲ್ಲಿ 80G ಅಡಿಯಲ್ಲಿ ವಿನಾಯಿತಿಯಿದೆ. ಹೆಚ್ಚಿನ ವಿವರಗಳಿಗೆ educationbbp@gmail.com ಸಂಪರ್ಕಿಸಲು ಕೋರಿದ್ದಾರೆ.

ಲಂಚ: ಬಿಜೆಪಿ ಕೇರಳ ಘಟಕದ ಅಧ್ಯಕ್ಷರ ವಿರುದ್ಧ ಪ್ರಕರಣ ದಾಖಲು

ತಿರುವನಂತಪುರ: ವಿಧಾನಸಭಾ ಚುನಾವಣೆ ವೇಳೆ ಮಂಜೇಶ್ವರ ಕ್ಷೇತ್ರದ ಅಭ್ಯರ್ಥಿಯೊಬ್ಬರಿಗೆ ನಾಮಪತ್ರ ಹಿಂತೆಗೆದುಕಳ್ಳಲು ಲಂಚ ನೀಡಿದ ಆರೋಪದಲ್ಲಿ ಬಿಜೆಪಿ ಕೇರಳ ಘಟಕದ ಅಧ್ಯಕ್ಷ ಕೆ.ಸುರೇಂದ್ರನ್ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲು ಕಾಸರಗೋಡಿನ ನ್ಯಾಯಾಲಯ ಸೋಮವಾರ ಆದೇಶಿಸಿದೆ.

3ನೇ ಅಲೆಗೆ ಸಿದ್ಧತೆ: 146 ತಾಲ್ಲೂಕು, 19 ಜಿಲ್ಲಾಸ್ಪತ್ರೆಗಳ ಉನ್ನತೀಕರಣ

'ಆರೋಗ್ಯ ವ್ಯವಸ್ಥೆಗೆ ₹1,500 ಕೋಟಿ ವೆಚ್ಚ'

ಬೆಂಗಳೂರು: ಕೋವಿಡ್ ಸಂಭವನೀಯ ಮೂರನೇ ಅಲೆ ಸೇರಿದಂತೆ ಯಾವುದೇ ಬಿಕ್ಕಟ್ಟು ಎದುರಿಸಲು ರಾಜ್ಯವನ್ನು ಸಜ್ಜುಗೊಳಿಸಲು ₹ 1,500 ಕೋಟಿ ವೆಚ್ಚದಲ್ಲಿ ಆರೋಗ್ಯ ಮೂಲಸೌಲಭ್ಯ ಕಲ್ಪಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಸೋಮವಾರ ನಡೆದ ಕೋವಿಡ್ ಕಾರ್ಯಪಡೆ ಸಭೆಯ ಬಳಿಕ ಈ ವಿಷಯ ತಿಳಿಸಿದ ಕಾರ್ಯಪಡೆ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಅಶ್ವತ್ಥನಾರಾಯಣ ಡಾ.ಸಿ.ಎನ್. ಅಶ್ವತ್ಥನಾರಾಯಣ, '3 ತಿಂಗಳಲ್ಲಿ ಯೋಜನೆ ಅನುಷ್ಠಾನಗೊಳ್ಳಲಿದೆ' ಎಂದರು.

'16 ಜಿಲ್ಲಾಸ್ಪತ್ರೆಗಳು, 146 ತಾಲ್ಲೂಕು ಆಸ್ಪತ್ರೆಗಳು ಹಾಗೂ ಜಿಲ್ಲಾಸ್ಪತ್ರೆಗಳಿಗೆ ಸಮಾನವಾಗಿ ಅದೇ ಜಿಲ್ಲೆಗಳಲ್ಲಿರುವ ಇನ್ನೂ ಮೂರು ಆಸ್ಪತ್ರೆಗಳ ಸೌಲಭ್ಯ ಅಭಿವೃದ್ಧಿಪಡಿಸುವ ಕ್ರಿಯಾಯೋಜನೆ ಇದಾಗಿದೆ. ತಾಲ್ಲೂಕು ಆಸ್ಪತ್ರೆಗಳಲ್ಲಿ 25 ಐಸಿಯು, 25 ಎಚ್‌ಡಿಯು, 50 ಆಕ್ಸಿಜನ್ ಹಾಸಿಗೆ, ಡಯಾಗ್ನಾಸ್ಟಿಕ್ ಸೌಲಭ್ಯ ಒದಗಿಸಲಾಗುವುದು' ಎಂದರು.

'4 ಸಾವಿರ ವೈದ್ಯರು, ಒಬ್ಬ ವೈದ್ಯರಿಗೆ ಮೂವರು ದಾದಿಯರು, ಮೂವರು ಗ್ರೂಪ್ 'ಡಿ' ಸಿಬ್ಬಂದಿ ಅಗತ್ಯವಿದೆ. ಮೂಲಸೌಲಭ್ಯ ಮತ್ತು ಸಿಬ್ಬಂದಿ ವೇತನಕ್ಕೆ ₹ 1,500 ಕೋಟಿ ಅಂದಾಜಿಸಲಾಗಿದೆ. ಈ ಮೊತ್ತದಲ್ಲಿ ವಾರ್ಷಿಕ ₹ 600 ಕೋಟಿ ವೇತನಕ್ಕೆ ವೆಚ್ಚವಾಗಲಿದೆ. ಉಳಿದಂತೆ ಕಟ್ಟಡ, ಆಕ್ಸಿಜನ್ ಜನರೇಟರ್, ವೆಂಟಿಲೇಟರ್, ಯಂತ್ರೋಪಕರಣ ಖರೀದಿಗೆ ₹ 800 ಕೋಟಿ ವೆಚ್ಚ ಆಗಲಿದೆ. ಆರೋಗ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಮಂಡಿಸಿದ ಪ್ರಸ್ತಾವನೆಗೆ ಒಪ್ಪಿಗೆ ನೀಡಲಾಗಿದೆ' ಎಂದರು.

ಇನ್ನು ಲಸಿಕೆ ಖರೀದಿ ಇಲ್ಲ

'18 ವರ್ಷ ದಾಟಿದ ಎಲ್ಲರಿಗೂ ಇನ್ನು ಕೇಂದ್ರ ಸರ್ಕಾರವೇ ಲಸಿಕೆ ಪೂರೈಸಲಿದೆ. ಹೀಗಾಗಿ, ಲಸಿಕೆ ಖರೀದಿ ಮಾಡುವುದಿಲ್ಲ' ಎಂದು ಅಶ್ವತ್ಥನಾರಾಯಣ ಹೇಳಿದರು.

ಈಗಾಗಲೇ 3 ಕೋಟಿ ಲಸಿಕೆ ಖರೀದಿಗೆ ಆದೇಶ ನೀಡಲಾಗಿದ್ದು, ಈ ಬಗ್ಗೆ ಪರಿಶೀಲಿಸಲಾಗುವುದು. ಇನ್ನೂ 2 ಕೋಟಿ ಲಸಿಕೆ ಪಡೆಯುವ ಪ್ರಯತ್ನವನ್ನೂ ಕೈಬಿಡಲಾಗಿದೆ' ಎಂದರು



₹20 ಸಾವಿರ ಕೋಟಿ ಪ್ಯಾಕೇಜ್‌ಗೆ ಜನಾಗ್ರಹ ಬೇಡಿಕೆ

ಬೆಂಗಳೂರು: 'ಜನರ ಜೀವ ಹಾಗೂ ಜೀವನ ಉಳಿಸಲು ಸರ್ಕಾರವು ಕನಿಷ್ಠ ₹20 ಸಾವಿರ ಕೋಟಿ ಮೊತ್ತದ ಸಮಗ್ರ ಪ್ಯಾಕೇಜ್ ಪ್ರಕಟಿಸುವ ಜತೆಗೆ ಕೋವಿಡ್ ಅನ್ನು ರಾಷ್ಟ್ರೀಯ ವಿಪತ್ತು ಎಂಬುದಾಗಿ ಘೋಷಿಸಬೇಕು' ಎಂದು ಜನಾಗ್ರಹ ಆಂದೋಲನವು ಪತ್ರದ ಮೂಲಕ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರನ್ನು ಒತ್ತಾಯಿಸಿದೆ.

ಜನಾಗ್ರಹದ ಪರವಾಗಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಶಶಿಕಾಂತ್ ಸೆಂಥಿಲ್, ಮಾವಳ್ಳಿ ಶಂಕರ್, ಎಚ್.ಆರ್. ಬಸವರಾಜಪ್ಪ, ಸ್ವರ್ಣಾ ಭಟ್, ನೂರ್ ಶ್ರೀಧರ್, ಕೆ.ಎಲ್. ಅಶೋಕ್ ಮೊದಲಾದವರು, ಈ ಆಗ್ರಹ ಪತ್ರಕ್ಕೆ ರಾಜ್ಯದ 650ಕ್ಕೂ ಹೆಚ್ಚು ಗಣ್ಯರು, ಚಿಂತಕರು ಹಾಗೂ ಸಾಮಾಜಿಕ ಕಾರ್ಯಕರ್ತರು ಸಹಿ ಮಾಡಿದ್ದಾರೆ ಎಂದರು.

ಬೇಡಿಕೆಗಳೇನು?: 'ಸರ್ಕಾರವು ಎರಡನೇ ಅಲೆ ಎದುರಿಸಲು ಯಾವ ಸಿದ್ಧತೆಗಳನ್ನೂ ಮಾಡಿಕೊಂಡಿರಲಿಲ್ಲ. ಹೀಗಾಗಿ ಅಪಾರ ಸಾವು ನೋವುಗಳು ಸಂಭವಿಸಿದವು. ನಂತರ ಲಾಕ್‌ಡೌನ್ ಹೇರಿ ಜನರ ಸಂಕಷ್ಟವನ್ನು ಮತ್ತಷ್ಟು ಹೆಚ್ಚಿಸಿತು. ತನ್ನ ವೈಫಲ್ಯ ಮರೆಮಾಚಲು ಅರೆ ಬರೆ ಪ್ಯಾಕೇಜ್ ಘೋಷಿಸಿತು. ಈಗ ಸಮಸ್ಯೆಯನ್ನು ಅರಿತು ಹಾಗೂ ಮೂರನೇ ಅಲೆ ಎದುರಿಸಲು ಸನ್ನದ್ಧವಾಗಲು ಸರ್ಕಾರ ಕೆಲವು ದಿಟ್ಟ ನಿರ್ಧಾರಗಳನ್ನು ಕೈಗೊಳ್ಳಲೇಬೇಕು' ಎಂದು ಪತ್ರದಲ್ಲಿ ಒತ್ತಾಯಿಸಲಾಗಿದೆ.

ಲಾಕ್‌ಡೌನ್ ತೆರವಾದ ಮರುದಿನವೇ ಮುಖ್ಯಮಂತ್ರಿ, ಸಚಿವರು ಹಾಗೂ ಎಲ್ಲಾ ಶಾಸಕರ ಮನೆ ಹಾಗೂ ಕಚೇರಿಗಳ ಮುಂದೆ ರಾಜ್ಯವ್ಯಾಪಿ ಪ್ರತಿಭಟನೆ ನಡೆಸುವುದಾಗಿಯೂ ಪತ್ರದಲ್ಲಿ ಎಚ್ಚರಿಸಲಾಗಿದೆ.

ಪ್ರಮುಖ ಬೇಡಿಕೆಗಳು

- ಎಲ್ಲಾ ವಯೋಮಾನದವರಿಗೂ ಉಚಿತವಾಗಿ ಲಸಿಕೆ ನೀಡುವುದನ್ನು ಎಷ್ಟು ದಿನದೊಳಗೆ ಹಾಗೂ ಯಾವ ರೀತಿಯಲ್ಲಿ ಈ ಗುರಿ ಸಾಧಿಸಲಾಗುತ್ತದೆ ಎಂಬುದನ್ನೂ ಜನರಿಗೆ ತಿಳಿಸಬೇಕು.
- ಎಲ್ಲ ಬಡ ಕುಟುಂಬಗಳಿಗೂ ಸಮಗ್ರ ಪಡಿತರ ಒದಗಿಸಬೇಕು. ಲಾಕ್‌ಡೌನ್ ಅವಧಿಯಲ್ಲಿ ತಿಂಗಳಿಗೆ ₹5 ಸಾವಿರದಂತೆ ಎರಡು ತಿಂಗಳಿಗೆ ₹10 ಸಾವಿರ ನೆರವು ನೀಡಬೇಕು.
- ಅನಾಥ ಕುಟುಂಬಗಳಿಗೆ ಬದುಕು ಕಟ್ಟಿಕೊಳ್ಳಲು ₹5 ಲಕ್ಷ ಪರಿಹಾರ ಪ್ರಕಟಿಸಬೇಕು.

ಲಾಕ್‌ಡೌನ್‌ನಲ್ಲೂ ವಾಹನಗಳ ದಟ್ಟಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊರೊನಾ ಸೋಂಕು ಹರಡುವಿಕೆ ತಡೆಗಾಗಿ ಲಾಕ್‌ಡೌನ್ ಜಾರಿ ಮಾಡಲಾಗಿದ್ದು, ಇದರ ನಡುವೆಯೂ ನಗರದ ಹಲವೆಡೆ ಸೋಮವಾರ ವಾಹನಗಳ ದಟ್ಟಣೆ ಕಂಡುಬಂತು.

ಅಗತ್ಯ ವಸ್ತುಗಳ ಖರೀದಿಗೆ ಅವಕಾಶ ಮಾಡಿಕೊಟ್ಟಿದ್ದ ಸಮಯದಲ್ಲೇ ನಗರದ ಹಲವು ಪ್ರದೇಶಗಳಲ್ಲಿ ವಾಹನಗಳು ಸಂಚರಿಸಿದವು. ದ್ವಿಚಕ್ರ ವಾಹನ, ಕಾರು, ಗೂಡ್ಸ್ ವಾಹನಗಳು ರಸ್ತೆಗಳನ್ನು ಆವರಿಸಿದ್ದವು.

ಪೀಣ್ಯ, ಟಿ–ದಾಸರಹಳ್ಳಿ, ಜಾಲಹಳ್ಳಿ, 8ನೇ ಮೈಲಿ, ಯಶವಂತಪುರ, ನವರಂಗ್ ವೃತ್ತ, ಸ್ಯಾಂಕಿ ರಸ್ತೆ, ಮೈಸೂರು ರಸ್ತೆ ಹಾಗೂ ಇತರೆ ಕಡೆಯ ಪ್ರಮುಖ ರಸ್ತೆಗಳಲ್ಲಿ ವಾಹನಗಳು ಸಾಲುಗಟ್ಟಿ ನಿಂತಿದ್ದವು. 'ಅಗತ್ಯ ಸೇವೆ' ಎಂಬ ಫಲಕ ಅಂಟಿಸಿಕೊಂಡಿದ್ದ ಕಾರುಗಳ ಸಂಚಾರವೂ ಹೆಚ್ಚಿನ ಸಂಖ್ಯೆಯಲ್ಲಿತ್ತು. ಅದರ ನಡುವೆಯೇ ಆಟೊಗಳ ಓಡಾಟವೂ ಇತ್ತು.

ತುಮಕೂರು ರಸ್ತೆಯ ಟಿ. ದಾಸರಹಳ್ಳಿ ಬಳಿ ಸಾಲುಗಟ್ಟಿ ನಿಂತಿದ್ದ ವಾಹನಗಳು

ನಗರದ ಎಲ್ಲ ಮೇಲ್ಸೇತುವೆಗಳನ್ನು ಬಂದ್ ಮಾಡಲಾಗಿದೆ. ಹೀಗಾಗಿ, ದಟ್ಟಣೆ ಉಂಟಾಯಿತು.

'ಶನಿವಾರ, ಭಾನುವಾರ ನಗರದಲ್ಲಿ ಬಿಗಿ ಭದ್ರತೆ ಇತ್ತು. ಸೋಮವಾರ ಬೆಳಿಗ್ಗೆ ಹಲವರು ರಸ್ತೆಗೆ ಇಳಿದರು. ಚೆಕ್‌ಪೋಸ್ಟ್‌ನಲ್ಲಿ ಪೊಲೀಸರು ಪ್ರಶ್ನಿಸಿದಾಗ, ಅಗತ್ಯ ಸೇವೆಗೆ ಹೊರಟಿರುವುದಾಗಿ ಸಬೂಬು ಹೇಳಿದರು' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ನಗರದಿಂದ ಹೊರ ಜಿಲ್ಲೆಗಳಿಗೆ ಹಾಗೂ ಹೊರ ಜಿಲ್ಲೆಗಳಿಂದ ನಗರಕ್ಕೆ ವಾಹನಗಳು ಸಂಚರಿಸಿದವು. ಅಗತ್ಯ ವಸ್ತುಗಳ ಖರೀದಿ ಅವಧಿ ಮುಗಿದ ನಂತರ 736 ವಾಹನಗಳನ್ನು ಜಪ್ತಿ ಮಾಡಲಾಯಿತು' ಎಂದೂ ತಿಳಿಸಿದರು.

ಸಿಎಸ್‌ಆರ್ ನಿಧಿಯಲ್ಲಿ ಐಸಿಯು ಹಾಸಿಗೆ ಸೌಲಭ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿ.ವಿ. ರಾಮನ್ ನಗರ ಸಾರ್ವಜನಿಕ ಆಸ್ಪತ್ರೆಗೆ ಕಾರ್ಪೊರೇಟ್ ಕಂಪನಿಗಳ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ಅಡಿಯಲ್ಲಿ ಕಾನ್ಫೆಡರೇಷನ್ ಆಫ್ ಇಂಡಿಯನ್ ಇಂಡಸ್ಟ್ರೀಸ್ (ಸಿಐಐ) ಒದಗಿಸಿದ 56 ಐಸಿಯು ಹಾಸಿಗೆಗಳ ಸೌಲಭ್ಯವನ್ನು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಸೋಮವಾರ ಲೋಕಾರ್ಪಣೆ ಮಾಡಿದರು.

ಇಂದಿರಾನಗರದ ಸಾಂಕ್ರಾಮಿಕ ರೋಗಗಳ ಆಸ್ಪತ್ರೆಯಲ್ಲಿ ಕೈಗಾರಿಕೋದ್ಯಮಿಗಳು ಹಾಗೂ ಕಾರ್ಪೊರೇಟ್ ಸಂಸ್ಥೆಗಳ ಸಹಯೋಗದಲ್ಲಿ ಒದಗಿಸಿರುವ 24 ಐಸಿಯು ಹಾಸಿಗೆ ಸೌಲಭ್ಯವನ್ನು ಕೂಡಾ ಅವರು ವರ್ಚುವಲ್ ಮೂಲಕ ಲೋಕಾರ್ಪಣೆ ಮಾಡಿದರು.

ಕೋವಿಡ್ ಆರೈಕೆ ಕೇಂದ್ರಗಳ ಹಾಸಿಗೆ ಖಾಲಿ ಖಾಲಿ

ಬೆಂಗಳೂರು: ನಗರದಲ್ಲಿ ಇತ್ತೀಚೆಗೆ ಸೋಂಕು ಪತ್ತೆ ಪ್ರಮಾಣ ಗಣನೀಯವಾಗಿ ಇಳಿಕೆ ಕಂಡಿರುವುದರಿಂದ ಕೋವಿಡ್ ಆರೈಕೆ ಕೇಂದ್ರಗಳ ಹಾಸಿಗೆಗಳು ಖಾಲಿ ಉಳಿಯುತ್ತಿವೆ. ಆರೈಕೆಯ ಜೊತೆಗೆ ಉಚಿತ ಊಟೋಪಾಚಾರಗಳನ್ನು ಒದಗಿಸಿದರೂ ಈ ಕೇಂದ್ರಗಳಿಗೆ ದಾಖಲಾಗಲು ಸೋಂಕಿತರು ನಿರಾಸಕ್ತಿ ತೋರಿಸುತ್ತಿದ್ದಾರೆ.

ಬಿಬಿಎಂಪಿ ಸೋಮವಾರ ಬಿಡುಗಡೆ ಮಾಡಿರುವ ಅಂಕಿ–ಅಂಶ ಪ್ರಕಾರ, ನಗರದಲ್ಲಿರುವ 56 ಕೋವಿಡ್ ಆರೈಕೆ ಕೇಂದ್ರಗಳಲ್ಲಿ ಒಟ್ಟು 3,026 ಹಾಸಿಗೆಗಳಿವೆ. ಅವುಗಳಲ್ಲಿ 583 ಹಾಸಿಗೆಗಳಷ್ಟೇ ಭರ್ತಿ ಆಗಿವೆ. ಒಟ್ಟು 2,443 ಹಾಸಿಗೆಗಳು ಖಾಲಿ ಉಳಿದಿವೆ.

'ಕೋವಿಡ್ ಆರೈಕೆ ಕೇಂದ್ರಗಳ ಸ್ಥಿತಿಯನ್ನು ಪರಿಶೀಲಿಸುತ್ತಿದ್ದೇವೆ. ಇವುಗಳ ಹಾಸಿಗೆಗಳ ಸಂಖ್ಯೆ ಕಡಿಮೆ ಮಾಡಲು ಚಿಂತನೆ ನಡೆದಿದೆ. ಎಲ್ಲ ಕೇಂದ್ರಗಳನ್ನು ಸ್ಥಗಿತಗೊಳಿಸಿ ಅಲ್ಲಿನ ಸೌಕರ್ಯಗಳನ್ನು ತೆರವುಗೊಳಿಸುವುದಿಲ್ಲ. ಕೆಲವೊಂದಷ್ಟನ್ನು ಉಳಿಸಿಕೊಳ್ಳುತ್ತೇವೆ.' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ತಿಳಿಸಿದರು.

'ಬಿಬಿಎಂಪಿ ವ್ಯಾಪ್ತಿಯಲ್ಲಿ ಒಟ್ಟು 16 ಚಿಕಿತ್ಸಾ ನಿರ್ಧಾರ ಕೇಂದ್ರಗಳಿವೆ (ಟ್ರಯಾಜ್ ಸೆಂಟರ್). ಇವುಗಳೆಲ್ಲವನ್ನೂ ಮುಂದುವರಿಸುತ್ತೇವೆ. ಅಲ್ಲಿನ ಸಿಬ್ಬಂದಿ ಮೂರು ಪಾಳಿಯಲ್ಲಿ ಕೆಲಸ ಮಾಡುತ್ತಾರೆ. ಈ ಕೇಂದ್ರಗಳಲ್ಲಿ ಸೋಂಕಿತರ ಆರೋಗ್ಯ ತಪಾಸಣೆ ನಡೆಸುವುದರ ಜೊತೆಗೆ ಆಸ್ಪತ್ರೆಗಳಲ್ಲಿ ಹಾಸಿಗೆ ಕಾಯ್ದಿರಿಡುವ ಸವಲತ್ತು ಕೂಡಾ ಲಭ್ಯ. ಹಾಸಿಗೆ ಕಾಯ್ದಿರಿಸಲು ಈಗ ಸಹಾಯವಾಣಿಯನ್ನು (1912) ಸಂಪರ್ಕಿಸಬೇಕಾದ ಅಗತ್ಯವಿಲ್ಲ' ಎಂದರು.

3,320 ಹಾಸಿಗೆಗಳು ಮಾತ್ರ ಬಳಕೆ

ಸೋಮವಾರದ ಅಂಕಿ– ಅಂಶಗಳ ಪ್ರಕಾರ, ನಗರದಲ್ಲಿ ವಿವಿಧ ಆಸ್ಪತ್ರೆಗಳಲ್ಲಿ ಸರ್ಕಾರಿ ಕೋಟಾದ 10,186 ಹಾಸಿಗೆಗಳು ಖಾಲಿ ಉಳಿದಿವೆ.

ನಗರದ ವಿವಿಧ ಆಸ್ಪತ್ರೆಗಳಲ್ಲಿ ಬಿಬಿಎಂಪಿ ವತಿಯಿಂದ ದಾಖಲಾಗುವ ಕೊರೊನಾ ಸೋಂಕಿತರಿಗೆ 13,506 ಹಾಸಿಗೆಗಳನ್ನು ಹಂಚಿಕೆ ಮಾಡಲಾಗಿದೆ. ಅವುಗಳಲ್ಲಿ 3,320 ಹಾಸಿಗೆಗಳು ಮಾತ್ರ ಪ್ರಸ್ತುತ ಬಳಕೆ ಆಗುತ್ತಿವೆ.

'ಬಿಬಿಎಂಪಿ ವತಿಯಿಂದ ಹಂಚಿಕೆಯಾದ ಹಾಸಿಗೆಗಳ ಸಂಖ್ಯೆಯನ್ನು ಕಡಿಮೆ ಮಾಡುವ ಬಗ್ಗೆ ಸಂಬಂಧಪಟ್ಟ ಸಚಿವರ ಜೊತೆ ಸಮಾಲೋಚಿಸಿ ತೀರ್ಮಾನ ತೆಗೆದುಕೊಳ್ಳುತ್ತೇವೆ' ಎಂದು ಗೌರವ್ ಗುಪ್ತ ತಿಳಿಸಿದರು.

‘ಜಮೀನು ವಿವಾದಕ್ಕೆ ಕೈಹಾಕಿದ್ದರಿಂದ ಸಮಸ್ಯೆ’

ಪ್ರಜಾವಾಣಿ ವಾರ್ತೆ

ಮೈಸೂರು: ‘ಜಿಲ್ಲಾಧಿಕಾರಿಯಾಗಿ ಬಂದ ಮೊದಲ ಏಳು ತಿಂಗಳಲ್ಲಿ ಯಾವುದೇ ಸಮಸ್ಯೆ ಇರಲಿಲ್ಲ. ಆದರೆ, ಕಳೆದ ಒಂದು ತಿಂಗಳಲ್ಲಿ ಸಮಸ್ಯೆ ಶುರುವಾಯಿತು. ಜಮೀನು ವಿಚಾರದಲ್ಲಿ ಕಠಿಣ ಕ್ರಮ ಕೈಗೊಂಡಿದ್ದೇ ಇದಕ್ಕೆ ಕಾರಣ ಇರಬಹುದು’ ಎಂದು ಮೈಸೂರಿನ ಹಿಂದಿನ ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ಸೋಮವಾರ ಇಲ್ಲಿ ಬೇಸರ ವ್ಯಕ್ತಪಡಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ನಾನು ಮೈಸೂರಿಗೆ ಬಂದ ಒಂದೇ ತಿಂಗಳಲ್ಲಿ ಕೆರೆ ಒತ್ತುವರಿ ತೆರವು ವಿಚಾರಕ್ಕೆ ಕೈಹಾಕಿದೆ. ಸರ್ಕಾರಿ ಭೂಮಿ ರಕ್ಷಣೆಗೆ ಮುಂದಾದೆ. ಕೇರ್ಗಳ್ಳಿ ಕೆರೆ ಒತ್ತುವರಿ ತೆರವು ಮಾಡಿ ನೀರು ತುಂಬಿಸಲು ಪ್ರಯತ್ನಿಸಿದೆ. ಜೊತೆಗೆ ಕುರುಬಾರಹಳ್ಳಿ ಸರ್ವೆ ನಂ 4ರ 1,500 ಎಕರೆಗೂ ಹೆಚ್ಚಿನ ಜಾಗ ಉಳಿಸಿಕೊಳ್ಳುವ ನಿಟ್ಟಿನಲ್ಲಿ ಸುಪ್ರೀಂ ಕೋರ್ಟ್‌ನಲ್ಲೂ ಉತ್ತಮ ವಕೀಲರನ್ನು ಇಟ್ಟು ಹೋರಾಟ ಮಾಡುತ್ತಿದ್ದೇವೆ’ ಎಂದರು.

‘ಸರ್ಕಾರಿ ಜಾಗ, ಕೆರೆ ಉಳಿಸಿಕೊಳ್ಳಬೇಕು. ಹೀಗಾಗಿ, ಒತ್ತುವರಿ ತೆರವು ಮಾಡಲು ಗಮನ ಹರಿಸಿದೆ. ಕೆಲಸದ ಮೂಲಕವೇ ಉತ್ತರ ಕೊಡಲು ಪ್ರಯತ್ನಿಸಿದೆ. ಅಧಿಕಾರಿಗಳಿಗೆ ಪ್ರಾಮಾಣಿಕವಾಗಿ ಕೆಲಸ ಮಾಡಲು ಬಿಡಬೇಕು’ ಎಂದರು.

‘ಪ್ರವಾಸೋದ್ಯಮ ಬೆಳವಣಿಗೆ ನಿಟ್ಟಿನಲ್ಲಿ ಹಲವು ಕಾರ್ಯಕ್ರಮ ರೂಪಿಸಿದ್ದೆ. ಕೆಲಸ ಮಾಡುವಾಗ ಪ್ರತಿ ದಿನ ಅಡ್ಡಿಪಡಿಸುವುದು ಸರಿಯಲ್ಲ. ಕೋವಿಡ್ ಸಮಯದಲ್ಲಿ ಕೈಗೊಂಡ ವೈದ್ಯಕೀಯ ವಿಚಾರಕ್ಕೆ ಸಂಬಂಧಿಸಿದ ನಿರ್ಧಾರಗಳಲ್ಲೂ ಕೆಲವರು ಹಸ್ತಕ್ಷೇಪ ಮಾಡಿದರು’ ಎಂದು ಆರೋಪಿಸಿದರು.

‘ಚಾಮರಾಜನಗರ ಕೋವಿಡ್ ಆಸ್ಪತ್ರೆಯಲ್ಲಿ ಸಂಭವಿಸಿದ ಸಾವುಗಳ ವಿಚಾರದಲ್ಲಿ ನ್ಯಾಯಾಲಯ ನೇಮಿಸಿದ್ದ ತನಿಖಾ ತಂಡ ಈಗಾಗಲೇ ವರದಿ ನೀಡಿದೆ. ಹೀಗಿದ್ದೂ, ಕೆಲವರು ಮತ್ತೆ ಅದೇ ವಿಚಾರ ಮಾತನಾಡುತ್ತಿದ್ದಾರೆ’ ಎಂದರು.

ಈಗಲೂ ವರದಿ ನೀಡಲಿ: ಸಾ.ರಾ.ಮಹೇಶ್

ಜಮೀನು ವಿಚಾರದಲ್ಲಿ ಕಠಿಣ ಕ್ರಮ ಕೈಗೊಂಡಿದ್ದೇ ವರ್ಗಾವಣೆಗೆ ಕಾರಣ ಇರಬಹುದು ಎಂದು ರೋಹಿಣಿ ಸಿಂಧೂರಿ ಹೇಳಿರುವುದಕ್ಕೆ ತಿರುಗೇಟು ನೀಡಿರುವ ಶಾಸಕ ಸಾ.ರಾ.ಮಹೇಶ್, ‘ಅವರು ಈಗ ಇಲ್ಲಿಯ ಜಿಲ್ಲಾಧಿಕಾರಿ ಅಲ್ಲದಿರಬಹುದು. ಆದರೆ, ಈಗಲೂ ಐಎಎಸ್ ಅಧಿಕಾರಿಯೇ. ಎಲ್ಲೆಲ್ಲಿ ಭೂ ಅಕ್ರಮ ನಡೆದಿದೆ ಎಂಬುದರ ವಿವರವಾದ ವರದಿಯೊಂದನ್ನು ರಾಜ್ಯಪಾಲರು, ಮುಖ್ಯಮಂತ್ರಿ, ಮುಖ್ಯ ಕಾರ್ಯದರ್ಶಿಗೆ ಸಲ್ಲಿಸುವ ಕೆಲಸ ಮಾಡಲಿ’ ಎಂದರು.

ಮೃಗಾಲಯ: 3 ದಿನದಲ್ಲಿ ₹40 ಲಕ್ಷ ದೇಣಿಗೆ ಸಂಗ್ರಹ

ಮೈಸೂರು: ಪ್ರಾಣಿಗಳನ್ನು ದತ್ತು ಪಡೆದು, ಕೋವಿಡ್ ಲಾಕ್‌ಡೌನ್‌ನಿಂದ ಸಂಕಷ್ಟಕ್ಕೆ ಸಿಲುಕಿರುವ ಮೃಗಾಲಯಗಳ ನೆರವಿಗೆ ನಿಲ್ಲುವಂತೆ ನಟ ದರ್ಶನ್ ಮನವಿ ಮಾಡಿದ ಬೆನ್ನಲ್ಲೇ, ಮೃಗಾಲಯ ಪ್ರಾಧಿಕಾರಕ್ಕೆ 3 ದಿನಗಳಲ್ಲಿ ₹40 ಲಕ್ಷಕ್ಕೂ ಅಧಿಕ ದೇಣಿಗೆ ಹರಿದು ಬಂದಿದೆ.

ಮೈಸೂರು, ಬನ್ನೇರುಘಟ್ಟ, ಬೆಳಗಾವಿ, ಗದಗ, ಕಲಬುರ್ಗಿ, ದಾವಣಗೆರೆ, ಹಂಪಿ, ಚಿತ್ರದುರ್ಗ ಹಾಗೂ ಶಿವಮೊಗ್ಗ ಸೇರಿದಂತೆ 9 ಮೃಗಾಲಯಗಳಿವೆ. ದರ್ಶನ್ ಮನವಿ ನಂತರ ಈ ಒಂದು ಮೃಗಾಲಯಕ್ಕೆ ಅಧಿಕ ದೇಣಿಗೆ ಹೆಚ್ಚಿದೆ. ಇದರಲ್ಲಿ ಮೈಸೂರಿನ ಮೃಗಾಲಯಕ್ಕೆ ಅಧಿಕ ದೇಣಿಗೆ ಬಂದಿದೆ.

ನಟ ದರ್ಶನ್

‘ದರ್ಶನ್‌ಕರೆನೀಡಿದ್ದರಿಂದಸಾಕಷ್ಟು ಪ್ರೋತ್ಸಾಹ ಸಿಕ್ಕಿದೆ. ಅವರ ಅಭಿಮಾನಿಗಳು ಮೃಗಾಲಯ ಪ್ರಾಧಿಕಾರದ ಆ್ಯಪ್‌ನಲ್ಲಿ ನೋಂದಣಿ ಮಾಡಿಕೊಂಡು, ಡಿಜಿಟಲ್ ವೇದಿಕೆ ಮೂಲಕವೇ ದತ್ತು ಪಡೆಯುತ್ತಿದ್ದಾರೆ. ನಾವು ಕೂಡ ಡಿಜಿಟಲ್ ಪ್ರಮಾಣಪತ್ರ ವಿತರಿಸುತ್ತಿದ್ದೇವೆ’ ಎಂದು ಮೃಗಾಲಯ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಬಿ.ಪಿ.ರವಿ ಪ್ರತಿಕ್ರಿಯಿಸಿದರು.

ದರ್ಶನ್ ಅವರಿಗೆ ಅರಣ್ಯ ಸಚಿವ ಅರವಿಂದ ಲಿಂಬಾವಳಿ ಕೃತಜ್ಞತೆ ಸಲ್ಲಿಸಿದ್ದಾರೆ.

‘ವರ್ಷಕ್ಕೆ ₹ 70 ಕೋಟಿ ಖರ್ಚು’

‘ರಾಜ್ಯದ 9 ಮೃಗಾಲಯಗಳಲ್ಲಿ ಅಂದಾಜು 800 ಸಿಬ್ಬಂದಿ ಇದ್ದಾರೆ. ಸುಮಾರು 5 ಸಾವಿರ ಪ್ರಾಣಿಗಳಿವೆ. ಸಿಬ್ಬಂದಿಯ ವೇತನ, ಪ್ರಾಣಿಗಳ ಆಹಾರ ಹಾಗೂ ನಿರ್ವಹಣೆ ಸೇರಿ ವರ್ಷಕ್ಕೆ ಸುಮಾರು ₹ 70 ಕೋಟಿ ಖರ್ಚಾಗುತ್ತದೆ’ ಎಂದು ಮೃಗಾಲಯ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಬಿ.ಪಿ.ರವಿ ಹೇಳಿದರು. ‘ಜನರು ನೀಡುವ ಟಿಕೆಟ್ ದರದಿಂದಲೇ ಎಲ್ಲಾ ಮೃಗಾಲಯಗಳ ನಿರ್ವಹಣೆ ನಡೆಯುತ್ತಿತ್ತು. ಲಾಕ್‌ಡೌನ್ ಕಾರಣ ಈಗ ತೊಂದರೆ ಉಂಟಾಗಿದೆ...’

ಮಹಾನಗರ ಪಾಲಿಕೆ, ಬೆಳಗಾವಿ

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಸಂಖ್ಯೆ: ಮನಪಾ/ಲೋವಿ/ಕಾಇ/ಡಿಎಮ್/ಟೆಂಡರ್/ಇಪ್ರೊ-02/2021-22 ದಿನಾಂಕ: [illegible]

ಆಯುಕ್ತರು, ಮಹಾನಗರ ಪಾಲಿಕೆ ಬೆಳಗಾವಿ ... ನೋಂದಾಯಿತ ಗುತ್ತಿಗೆದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಮುಖಾಂತರ ... ಬೆಳಗಾವಿ ಮಹಾನಗರ ಪಾಲಿಕೆಗೆ ಬಿಡುಗಡೆಯಾದ ಮಹಾತ್ಮ ಗಾಂಧಿ ನಗರ ವಿಕಾಸ ಯೋಜನೆಯ ಅನುದಾನದ 04 ಪ್ಯಾಕೇಜ್ ಕಾಮಗಾರಿಗಳ ಕುರಿತು ಇ-ಪ್ರೊಕ್ಯೂರ್‌ಮೆಂಟ್ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಮುಖಾಂತರ ಐಟಂವಾರು ಮರು ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಆನ್‌ಲೈನ್ ಮೂಲಕ ವೆಬ್‌ಸೈಟ್ (https://www.eproc.karnataka.gov.in) ನಲ್ಲಿ ಪ್ರಕಟಿಸಲಾಗಿದೆ.

ಸಹಿ/- ಆಯುಕ್ತರು,
ಮಹಾನಗರ ಪಾಲಿಕೆ, ಬೆಳಗಾವಿ

DIPO/RO No. 140/2021-22

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
(CIN-U04010KA2002SGC030438)

ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)

ಬೆವಿಕಂ, ವಿಚಾರಣಾ ಸಂಖ್ಯೆ- **BESCOM/DSM/GM/DGM/DDIS/2021-22/07**ರ ಮೂಲಕ ಬೆಂಗಳೂರಿನ ಆಯ್ದ ರೈಲು ನಿಲ್ದಾಣಗಳ ಟಿಕೆಟಿಂಗ್ ಕೌಂಟರ್ ಹಾಗು ಪ್ಲ್ಯಾಟ್ ಫಾರ್ಮ್ ಸ್ಕ್ರೀನ್‌ಗಳಲ್ಲಿ ಇರುವ **Dual Display Infotainment System (DDIS)**ರ ಮೂಲಕ ಗ್ರಾಹಕರಲ್ಲಿ ಇಂಧನ ಕ್ಷಮತೆಯುಳ್ಳ ವಿದ್ಯುತ್ ಉಪಕರಣಗಳನ್ನು ಉಪಯೋಗಿಸುವ ಬಗ್ಗೆ ಅರಿವು ಮೂಡಿಸುವುದಕ್ಕಾಗಿ ಟೆಂಡರ್ ಆಹ್ವಾನಿಸಿದೆ. ಟೆಂಡರ್ ದಾಖಲೆಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರಿಂಗ್ ವೆಬ್‌ಸೈಟ್: **http://eproc.karnataka.gov.in**ನಿಂದ ದಿನಾಂಕ: **10.06.2021** ರಂದು ಅಥವಾ ನಂತರ ಪಡೆಯಬಹುದು. ಆಸಕ್ತ ಬಿಡ್ಡುದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳತಕ್ಕದ್ದು. ಹೆಚ್ಚಿನ ವಿವರಗಳಿಗಾಗಿ ಬಿಡ್ಡುದಾರರು ಇ-ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ **80-46010000, 080-22631200, 080-68948777** ಅನ್ನು ಸಂಪರ್ಕಿಸಿ ಸಹಾಯ ಪಡೆಯಬಹುದು.

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆಮಾಡಿ : 1912
ಬೆಸ್ಕಾಂ ಮಿತ್ರ Mobile APP ಡೌನ್‌ಲೋಡ್ ಮಾಡಿಕೊಳ್ಳಿ.

ಸಹಿ/- ಪ್ರಧಾನ ವ್ಯವಸ್ಥಾಪಕರು(ವಿದ್ಯುತ್),
ಡಿಎಸ್‌ಎಂ ವಿಭಾಗ, ಬೆವಿಕಂ, ನೆಲಮಹಡಿ,
ಕೆ.ಆರ್.ವೃತ್ತ, ಬೆಂಗಳೂರು-560 001.

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರರವರ ಕಛೇರಿ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಹಡಗಲಿ

ಸಂ:ಕಾನಿಅ/ಪಂರಾಇಂವಿ/ಹಡಗಲಿ/ಪಿಬಿ-3/ಟೆಂಡರ್/ಸ/155/2021-22
ದಿನಾಂಕ:29.05.2021

ಅಲ್ಪಾವಧಿ ಟೆಂಡರ್ ಪ್ರಕಟಣೆ
(Through Government of Karnataka e-procurement)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಹಡಗಲಿ ಬಳ್ಳಾರಿ ಜಿಲ್ಲೆ ಇವರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ – 2000 ರಂತೆ ಈ ವಿಭಾಗದಡಿಯ ಕೂಡ್ಲಿಗಿ ಮತ್ತು ಹ.ಬೋ.ಹಳ್ಳಿ ತಾಲೂಕುಗಳ ವ್ಯಾಪ್ತಿಯ ಆರ್.ಎಂ.ಎಸ್.ಎ ಅನುದಾನದಡಿ ಅನುಮೋದನೆಯಾದ ಕಾಮಗಾರಿಗಳಿಗೆ ಅರ್ಹ ನೊಂದಾಯಿತ ಗುತ್ತಿಗೆದಾರರಿಂದ *Standard Bid Document KW-IV*ರ ನಿಯಮಗಳ ನಿಬಂದನೆಗೊಳಪಟ್ಟು (ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಿರುವಂತೆ) ಟರ್ನ ಕೀ ಆಧಾರದ ಮೇಲೆ *GOK e- procurement* ಮೂಲಕ ಅಲ್ಪಾವದಿ ಟೆಂಡರ್‌ಗಳನ್ನು ಆಹ್ವಾನಿಸಿದ್ದು , ಘಟನಾವಳಿಗಳ ವಿವರ ಈ ಕೆಳಕಂಡಂತೆಯಿದೆ.

1)ಟೆಂಡರ್ ಪ್ರಕಟಣೆಯ ಬಗ್ಗೆ ಆಕ್ಷೇಪಣೆಗಳನ್ನು ಸಲ್ಲಿಸಿ, ಪರಿಹರಿಸಿಕೊಳ್ಳಲು ನಿಗಧಿಪಡಿಸಿದ ಕೊನೆಯ ದಿನಾಂಕ: 14.06.2021 ರ ಸಂಜೆ: 17.00ರವರೆಗೆ.
2)ಅರ್ಜಿಗಳನ್ನು ಸ್ವೀಕರಿಸುವ ಹಾಗೂ ಭರ್ತಿಮಾಡಿದ ಟೆಂಡರ್‌ಗಳನ್ನು ಸ್ವೀಕರಿಸಲು ನಿಗಧಿಪಡಿಸಿದ ಕೊನೆಯ ದಿನಾಂಕ : 16.06.2021 ರ ಸಂಜೆ:17.00ರ ವರೆಗೆ
3)ಟೆಂಡರ್‌ಗಳನ್ನು ತೆರೆಯುವ ದಿನಾಂಕ: 18.06.2021. ರಂದು ಬೆಳಿಗ್ಗೆ 11.00 ಕ್ಕೆ

Pre-bid meeting on 11.06.2021 Place: PRE Divi office Madalagatta road, Hadagali. ಟೆಂಡರ್ ಪ್ರಕಟಣೆಯ ಹೆಚ್ಚಿನ ಮಾಹಿತಿಗಾಗಿ ***CEG (Government of Karnataka)*** 080-25501216/25501227 ಅಥವಾ ***www.eproc.karnataka.gov.in*** ಮತ್ತು ಕಛೇರಿ ವೇಳೆಯಲ್ಲಿ ಖುದ್ದಾಗಿ ***(eepredhadagali@gmail.com)*** ಸಂಪರ್ಕಿಸಬಹುದು.

ಸಹಿ/- ಕಾನಿಅ ಪಂರಾಇಂ ವಿಭಾಗ, ಹಡಗಲಿ.

ಡಿಐಪಿಆರ್/ಬಳ್ಳಾರಿ/77/ಎಂಸಿಎ/2021-22

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ,
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ತುಮಕೂರು.
ದೂರವಾಣಿ:0816-2211105 Email:eemitmk@gmail.com
ಐ.ಎಫ್.ಟಿ ಸಂಖ್ಯೆ:02/2021-22. ಕೆ.ಡಬ್ಲ್ಯೂ-3 (ದ್ವಿಲಕೋಟೆ) ದಿ: 05.06.2021

ಅಲ್ಪಾವಧಿ ಟೆಂಡರ್ ಪ್ರಕಟಣೆ ದಿನಾಂಕ: 05.06.2021

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ ತುಮಕೂರು ವ್ಯಾಪ್ತಿಯಲ್ಲಿ 2021-22 ನೇ ಸಾಲಿನ ಪಟ್ಟಿಯಲ್ಲಿ ಲೆಕ್ಕ ಶೀರ್ಷಿಕೆ: 4702-ಕೆರೆಗಳ ಆಧುನೀಕರಣ ಮತ್ತು ಡಿ.ಸಿ. ಗ್ರಾಂಟ್ ಅಡಿಯಲ್ಲಿ ಅನುಮೋದನೆಯಾಗಿರುವ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಇ-ಪ್ರೊಕ್ಯೂರ್‌ಮೆಂಟ್ ಅಡಿಯಲ್ಲಿ ಐಟಂವಾರು ಟೆಂಡರುಗಳನ್ನು ಈ ಕಛೇರಿ ಟೆಂಡರು ಪ್ರಕಟಣೆ ಸಂಖ್ಯೆ: 02/2021-22, ದಿ: 05.06.2021 ರಂದು ಆಹ್ವಾನಿಸಲಾಗಿದೆ. ಟೆಂಡರು ಪ್ರಕ್ರಿಯೆ ದಿನಾಂಕ ಮತ್ತು ವಿವರಗಳನ್ನು ಟೆಂಡರ್‌ನ ನಿಗಧಿತ ನಮೂನೆಯಲ್ಲಿ ವೆಬ್‌ಸೈಟ್ http//eproc.karnataka.gov.in ನಲ್ಲಿ ಅವಶ್ಯಕ ಮಾಹಿತಿಗಳೊಂದಿಗೆ, ಅರ್ಜಿ ಶುಲ್ಕ ಹಾಗೂ ಇ.ಎಂ.ಡಿ.ಯೊಂದಿಗೆ ಅಪ್‌ಲೋಡ್ ಮಾಡಬಹುದಾಗಿದೆ. ಟೆಂಡರು ಪ್ರಕ್ರಿಯೆಯ ದಿನಾಂಕಗಳು ಈ ಕೆಳಕಂಡಂತಿವೆ:

(1) ಟೆಂಡರ್ ಪ್ರಕಟಣೆಯನ್ನು ದಿನಾಂಕ: **09.06.2021**ರಂದು ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಪ್ರಕಟಿಸಲಾಗುವುದು. (2) ಅವಶ್ಯ ಟೆಂಡರ್ ಮಾಹಿತಿ/ ಸ್ಪಷ್ಟೀಕರಣವನ್ನು ಪಡೆಯಲು ದಿನಾಂಕ **19.06.2021** ಸಾಯಂಕಾಲ 4.00ಗಂಟೆಯವರೆಗೆ ಸ್ವೀಕರಿಸಲಾಗುವುದು. (3) ಗುತ್ತಿಗೆದಾರರಿಂದ ಟೆಂಡರ್‌ನ್ನು"ಇ" ಪ್ರೊಕ್ಯೂರ್‌ಮೆಂಟ್ ಮೂಲಕ ದಿನಾಂಕ: **21.06.2021**ರ ಬೆಳಗ್ಗೆ 11.00ಗಂಟೆಯವರೆಗೆ ಸ್ವೀಕರಿಸಲಾಗುವುದು. (4) ತಾಂತ್ರಿಕ ಬಿಡ್ಡನ್ನು ದಿನಾಂಕ: **22.06.2021** ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು. (5) ಆರ್ಥಿಕ ಬಿಡ್ಡನ್ನು ದಿನಾಂಕ: **25.06.2021** ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯಿಂದ ಅಥವಾ ಮೇಲೆ ತಿಳಿಸಿದ ವೆಬ್ ಸೈಟ್ ಮೂಲಕ ಪಡೆಯಬಹುದಾಗಿದೆ.

DIPR/TUM/77/MCA/2021-22
ಸಹಿ/- ಕಾರ್ಯಪಾಲಕ ಇಂಜಿನಿಯರ್,
ಸಣ್ಣ ನೀರಾವರಿ ಮತ್ತು ಅಂ.ಅ ವಿಭಾಗ, ತುಮಕೂರು.

ಜಿಲ್ಲಾ ಪಂಚಾಯತ್ ಕಾರ್ಯಾಲಯ,
ತುಮಕೂರು ಜಿಲ್ಲೆ, ತುಮಕೂರು.
ಸಂ:ತುಜಿಪಕೆಎಸ್.ಆರ್.ಎಲ್.ಪಿ.ಎಸ್/ಸಂಜೀವಿನಿ/ಮಾ.ಸಂ.ಪೂ/02/2020-21 ದಿನಾಂಕ31.05.2021

ಮರು ಟೆಂಡರ್ ಪ್ರಕಟಣೆ (ಮೂರನೇ ಕರೆ)

ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (ಎನ್.ಆರ್.ಎಲ್.ಎಂ) ಯೋಜನೆಯಲ್ಲಿ ಮಾನವ ಸಂಪನ್ಮೂಲ ಸೇವೆಯನ್ನು ಒದಗಿಸುವ ಸಂಸ್ಥೆಯನ್ನು ಆಯ್ಕೆ ಮಾಡಿಕೊಳ್ಳಲು ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಆಹ್ವಾನಿಸಲಾಗಿದೆ. (1) ಟೆಂಡರ್ ಉಲ್ಲೇಖ ಮತ್ತು ದಿನಾಂಕ: TZP/KSRLPS/SANJEEVINI/M.S.P/02/2020-21 ದಿನಾಂಕ : 31.05.2021 (2) ಟೆಂಡರ್‌ನ ಅಂದಾಜು ಮೌಲ್ಯ: **ರೂ.47,10,000/-** (3) ಇಎಂಡಿ ಮೊತ್ತ **ರೂ.94,200/-** (4) ಟೆಂಡರ್ ಪ್ರಾರಂಭವಾಗುವ ದಿನಾಂಕ: **07.06.2021** (5) ಟೆಂಡರ್ ಸಲ್ಲಿಸುವ ಕಡೆಯ ದಿನಾಂಕ ಮತ್ತು ಸಮಯ **21.06.2021** ಸಂಜೆ 5:30 ಗಂಟೆ (6) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **28.06.2021** ಬೆಳಿಗ್ಗೆ 11:30 ಗಂಟೆ (7) ಹಣಕಾಸಿನ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **03.07.2021** ಬೆಳಿಗ್ಗೆ 11:30 ಗಂಟೆ (8) ಲೆಟರ್ ಆಫ್ ಇಂಟೆಂಟ್: **12.07.2021** (9) ಗುತ್ತಿಗೆ ಅವಧಿ : ಒಪ್ಪಂದ ದಿನಾಂಕದಿಂದ 02 ವರ್ಷಗಳು (10) ಟೆಂಡರ್ ತೆರೆಯುವ ಸ್ಥಳ: ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಾರ್ಯಾಲಯ, ಜಿಲ್ಲಾ ಪಂಚಾಯತ್, ತುಮಕೂರು.

ಸಹಿ/- ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,
ಜಿಲ್ಲಾ ಪಂಚಾಯತ್, ತುಮಕೂರು.

DIPR/TUM/81/MCA/2021-22

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ
ಜಿಲ್ಲಾ ನಗರಾಭಿವೃದ್ಧಿ ಕೋಶ ಕೊಪ್ಪಳ.
ಕಛೇರಿ ದೂ.08539-221895 ಫ್ಯಾಕ್ಸ್ ನಂ:08539-221235
Email: itstaff_dudc_koppal@Yahoo.com
ಕಂ.ಸಂ:24597/ಕೆಪಿಡಿಯುಡಿಸಿ-11011/9/2019 ದಿನಾಂಕ: 03.06.2021

ಅಲ್ಪಾವಧಿ ಟೆಂಡರ್ ಪ್ರಕಟಣೆ-2ನೇ ಕರೆ (ಇ-ಪ್ರೊಕ್ಯೂರ್‌ಮೆಂಟ್)

ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಅರ್ಹ ದರ್ಜೆಯ ಗುತ್ತಿಗೆದಾರರಿಂದ ನಗರೋತ್ಥಾನ (ಮುನಿಸಿಪಾಲಿಟಿ) ಹಂತ-3ರ ಯೋಜನೆಯಡಿಯಲ್ಲಿ ಬದಲಾವಣೆಯ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಅನ್ವಯ ಟೆಂಡರ್‌ಗಳನ್ನು ಕರೆಯಲಾಗಿದೆ. ಇಚ್ಛೆವುಳ್ಳ ಗುತ್ತಿಗೆದಾರರು ತಮ್ಮ ಟೆಂಡರ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ ಸಲ್ಲಿಸಬಹುದಾಗಿದೆ. ಕಾಮಗಾರಿಗಳ ಹೆಚ್ಚಿನ ಮಾಹಿತಿಗೆ ಆನ್‌ಲೈನ್ ಮೂಲಕ ವೆಬ್‌ಸೈಟ್ **www.eproc.karnataka.gov.in** ನಲ್ಲಿ ಸಂಪರ್ಕಿಸಬಹುದಾಗಿದೆ.

ಕಾಮಗಾರಿಗಳ ವಿವರ: ಕೊಪ್ಪಳ ಜಿಲ್ಲೆಯ ಭಾಗ್ಯನಗರ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಚರಂಡಿ ಮತ್ತು ರಸ್ತೆಗಳ ಕಾಮಗಾರಿ ನಿರ್ಮಾಣ. Indent No : 114860. **ಟೆಂಡರ್ ಮೊತ್ತ (ರೂ.ಲಕ್ಷಗಳಲ್ಲಿ):** 56.12. **ಇ.ಎಮ್.ಡಿ ಮೊತ್ತ (ರೂ.ಲಕ್ಷಗಳಲ್ಲಿ):** 0.00. **ಕಾಮಗಾರಿಗಳ ಅವಧಿ:** 4 ತಿಂಗಳು

1. ಪ್ರಿ-ಬಿಡ್ ಮೀಟಿಂಗ್: **10-06-2021 ಬೆಳಿಗ್ಗೆ 11:00 ಗಂಟೆ**. 2. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **12-06-2021**. 3. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **14-06-2021 ಬೆಳಿಗ್ಗೆ 11:00 ಗಂಟೆ**. 4. ಆರ್ಥಿಕ ಬಿಡ್ ತೆರೆಯುವ ದಿನಾಂಕ: **17-06-2021 ಬೆಳಿಗ್ಗೆ 11:00 ಗಂಟೆ**.

ಸಹಿ/- ಜಿಲ್ಲಾಧಿಕಾರಿಗಳು, ಕೊಪ್ಪಳ.

ಡಿಐಪಿಆರ್/ಕೊಪ್ಪಳ/94/ಎಂಸಿಎ/2021-22

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ಇಂಜಿನಿಯರಿಂಗ್ ಘಟಕ,
ಮುಖ್ಯ ಇಂಜಿನಿಯರ್‌ರವರ ಕಚೇರಿ, ಆರೋಗ್ಯ ಸೌಧ, 3ನೇ ಮಹಡಿ,
ಕುಷ್ಠರೋಗ ಆಸ್ಪತ್ರೆ ಆವರಣ, 1ನೇ ಅಡ್ಡರಸ್ತೆ, ಮಾಗಡಿ ರಸ್ತೆ, ಬೆಂಗಳೂರು-560 023,
ದೂರವಾಣಿ ಸಂಖ್ಯೆ: 080-29557023. ಇ-ಮೇಲ್: cekhsdrp@gmail.com & cekhsdrp-hfws@karnataka.gov.in
ಸಂಖ್ಯೆ:ಆಕುಕ/ಇಂಘ/ಮು.ಇಂ/ತಾಂ.ಸ-1/ಸ.ಇಂ-4/ನಬಾರ್ಡ್-ಆರ್‌ಐಡಿಎಫ್-26/ಟೆಂಡರ್/2021-22/320 ದಿನಾಂಕ: 07-06-2021

ಟೆಂಡರ್ ಪ್ರಕಟಣೆ

ಮುಖ್ಯ ಇಂಜಿನಿಯರ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ಘಟಕ, ಬೆಂಗಳೂರುರವರಿಂದ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಒಂದನೇ ದರ್ಜೆ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗೆ ಟೆಂಡರ್‌ನ್ನು ದ್ವಿ ಟೆಂಡರ್ ದಸ್ತಾವೇಜು ಪದ್ಧತಿಯಲ್ಲಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ (e-Procurement) ಮೂಲಕ ಆಹ್ವಾನಿಸಲಾಗಿದೆ.
(ರೂ. ಲಕ್ಷಗಳಲ್ಲಿ)

ಕ್ರ. ಸಂ.	ಕಾಮಗಾರಿಯ ವಿವರ	ಅಂದಾಜು ಮೊತ್ತ
1.	ಕೃಷಿ ಕಾಲೇಜು ಚಾಮರಾಜನಗರ ಈ ಕಾಲೇಜಿನ ಆಡಳಿತ ಕಟ್ಟಡ, ಪ್ರಯೋಗಾಲಯ ಕೊಠಡಿ, ಮಹಿಳೆಯರ ವಸತಿಗೃಹ, ಗ್ರಂಥಾಲಯ ನಿರ್ಮಾಣ ಕಾಮಗಾರಿಗಳು.	2500.00

ಕಾಲಾವಧಿ (ಮಳೆಗಾಲ ಸೇರಿದಂತೆ): 15 ತಿಂಗಳು.

ಟೆಂಡರ್ ಪ್ರಕ್ರಿಯೆಯ ದಿನಾಂಕಗಳು: 1) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: **07-07-2021 ರಂದು 4.00 ಗಂಟೆಯವರೆಗೆ.** 2) ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ (ತಾಂತ್ರಿಕ ಬಿಡ್ : **09-07-2021 ರಂದು 4.00 ಗಂಟೆಗೆ.**

ಸೂಚನೆ: ಸರ್ಕಾರದ ಆದೇಶದಂತೆ ಇ.ಎಂ.ಡಿ.ಗೆ Declartion ನಮೂನೆಯನ್ನು ಟೆಂಡರ್‌ಗಳೊಂದಿಗೆ ಲಗತ್ತಿಸುವುದು.

ಟೆಂಡರ್ ವಿವರಗಳನ್ನು ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (Through e-Procurement Platform) www.eproc.karnataka.gov.in ದಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಇ.ಎಂ.ಡಿ ಮೊತ್ತವನ್ನು ಮತ್ತು ಟೆಂಡರ್ ಪ್ರಕ್ರಿಯೆ ಶುಲ್ಕವನ್ನು www.eproc.karnataka.gov.in ನಲ್ಲಿ ವಿದ್ಯುನ್ಮಾನ (electronic) ವಿಧಾನದಲ್ಲಿ ಪಾವತಿಸಬಹುದಾಗಿರುತ್ತದೆ. ಆಸಕ್ತಿಯುಳ್ಳ ಗುತ್ತಿಗೆದಾರರು ಸದರಿ ಟೆಂಡರ್‌ಗಳಲ್ಲಿ ಭಾಗವಹಿಸಲು ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ (e-Procurement Platform) ನೋಂದಾಯಿಸುವ ಅಗತ್ಯ ಇದೆ.

ಟಿಪ್ಪಣಿ: 1. ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯ ಮುಂದೂಡುವಿಕೆ / ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. 2. ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/-
ಮುಖ್ಯ ಇಂಜಿನಿಯರ್,
ಆ&ಕುಕಇ, ಇಂಜಿನಿಯರಿಂಗ್ ಘಟಕ, ಬೆಂಗಳೂರು

ಕೋವಿಡ್-19. ಆತಂಕ ಬೇಡ: ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕೊಬ್ಬಿನಾಂಶ ಕಡಿತಗೊಳಿಸಿದ್ದ ಮನ್‌ಮುಲ್; ‘ಮಂಡ್ಯ ಹಾಲು’ ಬ್ರ್ಯಾಂಡ್‌ಗೂ ಧಕ್ಕೆ

ನೀರು ಮಿಶ್ರಿತ ಹಾಲು ಮಾರಾಟ?

• ಎಂ.ಎನ್.ಯೋಗೇಶ್

ಮಂಡ್ಯ: ಜಿಲ್ಲಾ ಹಾಲು ಒಕ್ಕೂಟ (ಮನ್‌ಮುಲ್)ದ ಆಡಳಿತ ಮಂಡಳಿ ಹಾಗೂ ಅಧಿಕಾರಿ ವರ್ಗ ಶಾಮೀಲಾಗಿ, ನಂದಿನಿ ಹಾಲಿನಲ್ಲಿ ಕೊಬ್ಬಿನಾಂಶ (ಫ್ಯಾಟ್) ಕಡಿತಗೊಳಿಸಿ ಗ್ರಾಹಕರಿಗೆ ನೀರು ಮಿಶ್ರಿತ ಹಾಲು ಮಾರಾಟ ಮಾಡುತ್ತಿದ್ದರು ಎಂಬ ವಿಚಾರ ಬೆಳಕಿಗೆ ಬಂದಿದೆ.

ರೈತರಿಂದ ಸಂಗ್ರಹ ಮಾಡಿದ ಪ್ರತಿ ಟ್ಯಾಂಕರ್ ಹಾಲಿನಲ್ಲಿ ಶೇ 30ರಷ್ಟನ್ನು ಖಾಸಗಿ ಡೇರಿಗಳಿಗೆ ಮಾರಾಟ ಮಾಡುತ್ತಿದ್ದರು. ಉಳಿದ ಹಾಲಿಗೆ ನೀರು ಸೇರಿಸಿ ಮನ್‌ಮುಲ್‌ಗೆ ಸರಬರಾಜು ಮಾಡುತ್ತಿದ್ದರು. ಇದಕ್ಕಾಗಿ, ಹಾಲು-ನೀರು ಬೇರ್ಪಡಿಸುವ ವಿಶೇಷ ಟ್ಯಾಂಕರ್‌ಗಳನ್ನು ವಿನ್ಯಾಸ ಮಾಡಲಾಗಿತ್ತು ಎಂಬ ವಿಷಯ ಮೇ 28ರಂದು ಪತ್ತೆಯಾಗಿತ್ತು. 5 ಟ್ಯಾಂಕರ್ ವಶಪಡಿಸಿಕೊಳ್ಳಲಾಗಿದ್ದು 6 ಮಂದಿ ಅಧಿಕಾರಿಗಳನ್ನೂ ಅಮಾನತು ಮಾಡಲಾಗಿದೆ.

ಕೋಟ್ಯಂತರ ರೂಪಾಯಿ ಅವ್ಯವಹಾರ ಆಡಳಿತ ಮಂಡಳಿಯ ನೆರಳಿನಲ್ಲೇ ನಡೆಯುತ್ತಿತ್ತು. ಪ್ರತಿದಿನ 1 ಲಕ್ಷ ಲೀಟರ್ ನೀರು ಬೆರೆಸಿದ ಹಾಲು ಮನ್‌ಮುಲ್ ಸೇರುತ್ತಿತ್ತು. ಗ್ರಾಹಕರಿಗೆ ಸರಬರಾಜಾಗುವ ನಂದಿನಿ ಹಾಲಿನ ಪಾಕೀಟುಗಳಲ್ಲಿ ಹೆಚ್ಚಿನ ನೀರಿನಾಂಶ ಸೇರ್ಪಡೆ ಮಾಡಲಾಗುತ್ತಿತ್ತು.

ಮದ್ದೂರು ತಾಲ್ಲೂಕು ಗೆಜ್ಜಲಗೆರೆ ಕೈಗಾರಿಕಾ ಪ್ರದೇಶದಲ್ಲಿರುವ ಮಂಡ್ಯ ಜಿಲ್ಲಾ ಹಾಲು ಉತ್ಪಾದಕ ಸಹಕಾರ ಸಂಘಗಳ ಒಕ್ಕೂಟದ ಕಟ್ಟಡ

ನಂದಿನಿ ಪಾಕೀಟಿನ ಮೇಲೆ ಮುದ್ರಿಸಲಾದ ಪೋಷಕಾಂಶಗಳ ಪಟ್ಟಿಯಲ್ಲಿರುವಷ್ಟು ಕೊಬ್ಬಿನಾಂಶ ವಾಸ್ತವವಾಗಿ ಹಾಲಿನಲ್ಲಿ ಇರಲಿಲ್ಲ. ಕೊಬ್ಬಿನಾಂಶದ ಪ್ರಮಾಣ ಕಡಿತಗೊಳಿಸಲಾಗಿತ್ತು. ಆ ಮೂಲಕ ಮನ್‌ಮುಲ್‌ಗೆ ಸರಬರಾಜಾಗುತ್ತಿದ್ದ ನೀರು ಮಿಶ್ರಿತ ಹಾಲಿನಿಂದಾದ ನಷ್ಟವನ್ನು ನಿವಾರಿಸಲಾಗುತ್ತಿತ್ತು ಎಂದು ಮೂಲಗಳು ತಿಳಿಸಿವೆ.

‘ಮೇ 28ಕ್ಕಿಂತ ಮೊದಲು ಉತ್ಪಾದನೆಯಾದ ಹಾಲಿನ ಪಾಕೀಟುಗಳಲ್ಲಿ ಕೊಬ್ಬಿನಾಂಶ ಕಡಿಮೆ ಇದೆ. ಪ್ರಕರಣ ಬೆಳಕಿಗೆ ಬರುತ್ತಿದ್ದಂತೆಯೇ ಸರಿಪಡಿಸಿಕೊಂಡಿದ್ದಾರೆ. ಒಕ್ಕೂಟಕ್ಕೆ ನೀರುಮಿಶ್ರಿತ ಹಾಲು ಸರಬರಾಜಾಗುತ್ತಿರುವ ಬಗ್ಗೆ ಎಲ್ಲೂ ಸಾಕ್ಷ್ಯ ತೋರಿಸಿಲ್ಲ. ಆದರೆ ಕಳಪೆ ಹಾಲು ಉತ್ಪಾದಿಸಿ ನಷ್ಟ ಸರಿದೂಗಿಸಿಕೊಳ್ಳಲಾಗುತ್ತಿತ್ತು. ಇದು ಸಮಗ್ರವಾಗಿ ತನಿಖೆಯಾಗಬೇಕಾಗಿದೆ’ ಎಂದು ಹೆಸರು ಬಹಿರಂಗಪಡಿಸಲು ಬಯಸದ ಮನ್‌ಮುಲ್ ತಂತ್ರಜ್ಞರೊಬ್ಬರು ತಿಳಿಸಿದರು.

> **ತಪ್ಪೆಸಗಿರುವ ಅಧಿಕಾರಿಗಳನ್ನು ಅಮಾನತು ಮಾಡಿದ್ದೇವೆ. ಗ್ರಾಹಕರಿಗೆ ಪೂರೈಸುವ ನಂದಿನಿ ಹಾಲಿನ ಗುಣಮಟ್ಟ ಕಡಿಮೆ ಮಾಡಿಲ್ಲ**
> **ಬಿ.ಎಂ.ರಾಮಚಂದ್ರ,** ಮನ್‌ಮುಲ್ ಅಧ್ಯಕ್ಷ

ಬ್ರ್ಯಾಂಡ್‌ಗೆ ಧಕ್ಕೆ: ಜಿಲ್ಲೆಯು, ಬೆಲ್ಲದೊಂದಿಗೆ ಹೈನುಗಾರಿಕೆಗೂ ಹೆಸರಾಗಿದೆ. ಮನ್‌ಮುಲ್ ಹಾಲು ರಾಮನಗರ ಜಿಲ್ಲೆ, ಬೆಂಗಳೂರು ನಗರಕ್ಕೂ ಸರಬರಾಜಾಗುತ್ತದೆ. ಮಂಡ್ಯ ಬೆಲ್ಲದಷ್ಟೇ ಹಾಲಿಗೂ ಬ್ರ್ಯಾಂಡ್ ರೂಪವಿದೆ. ಈಚೆಗೆ ಮಂಡ್ಯ ಬೆಲ್ಲ ಕಲಬೆರಕೆಯಾಗಿರುವ ವಿಷಯ ಬೆಳಕಿಗೆ ಬಂದ ಬೆನ್ನಲ್ಲೇ ಮಂಡ್ಯ ಹಾಲಿನ ಅವ್ಯವಹಾರ ಬಯಲಿಗೆ ಬಂದಿದ್ದು ಬ್ರ್ಯಾಂಡ್ ರೂಪಕ್ಕೆ ಧಕ್ಕೆಯಾಗಿದೆ.

‘ಟ್ಯಾಂಕರ್ ಜಪ್ತಿ ಮಾಡಿದ ನಂತರ ಹಾಲಿನ ಮಾದರಿಯನ್ನು ಪರೀಕ್ಷೆಗೆ ಕಳುಹಿಸಲಾಗಿದೆ. ನಂದಿನಿ ಮಾದರಿಯನ್ನೂ ಪರೀಕ್ಷಿಸಲಾಗುವುದು’ ಎಂದು ಜಿಲ್ಲಾ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರದ ಜಿಲ್ಲಾ ಅಂಕಿತ ಅಧಿಕಾರಿ ಡಾ.ಬೆಟ್ಟಸ್ವಾಮಿ ತಿಳಿಸಿದರು.

ಅನಧಿಕೃತ ಟ್ಯಾಂಕರ್‌ಗಳ ಹಾವಳಿ

ನಿತ್ಯ 9 ಲಕ್ಷ ಲೀಟರ್ ಹಾಲು ಮನ್‌ಮುಲ್‌ಗೆ ಸಂಗ್ರಹವಾಗುತ್ತಿದ್ದು, ಈ ಹಾಲು ಸರಬರಾಜು ಮಾಡಲು 50 ಟ್ಯಾಂಕರ್‌ಗಳಿಗೆ ಮಾತ್ರ ಗುತ್ತಿಗೆ ನೀಡಲಾಗಿದೆ. ಆದರೆ, 100ಕ್ಕೂ ಹೆಚ್ಚು ಟ್ಯಾಂಕರ್‌ಗಳಿಗೆ ಅನಧಿಕೃತವಾಗಿ ಅನುಮತಿ ನೀಡಲಾಗಿತ್ತು ಎಂದು ಮೂಲಗಳು ತಿಳಿಸಿವೆ.

‘ಪ್ರಕರಣದ ವಿಚಾರಣೆ ನಡೆಯುತ್ತಿದೆ. ಅಕ್ರಮ ನಡೆದಿರುವುದು ಸಾಬೀತಾದರೆ ಆಡಳಿತ ಮಂಡಳಿಯನ್ನು ಸೂಪರ್‌ಸೀಡ್ ಮಾಡಲು ಹಿಂಜರಿಯುವುದಿಲ್ಲ’ ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ಸಿ.ನಾರಾಯಣಗೌಡ ಹೇಳಿದರು.

ಬಗರ್ ಹುಕುಂ: 4.83 ಲಕ್ಷ ಅರ್ಜಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಗರ್‌ಹುಕುಂ ಸಾಗುವಳಿಯ ಭೂಮಿ ಸಕ್ರಮಗೊಳಿಸುವ ತಂತ್ರಾಂಶಕ್ಕೆ ಅಪ್‌ಲೋಡ್ ಆಗದೇ ಇರುವ 4.83 ಲಕ್ಷ ಅರ್ಜಿಗಳನ್ನು ಜುಲೈ 31 ರೊಳಗೆ ಅಪ್‌ಲೋಡ್ ಮಾಡಲಾಗುವುದು ಎಂದು ಕಂದಾಯ ಸಚಿವ ಆರ್.ಅಶೋಕ ಅವರು ಹೇಳಿದ್ದಾರೆ.

ಇದರಿಂದ ಅರ್ಜಿ ಸಲ್ಲಿಸಿರುವ ಅರ್ಹ ರೈತರ ಜಮೀನು ಸಕ್ರಮಕ್ಕೆ ಅನುಕೂಲವಾಗಲಿದೆ ಎಂದು ಅವರು ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸರ್ಕಾರಿ ಜಮೀನಿನಲ್ಲಿ 2005 ಜನವರಿ 1 ಕ್ಕೂ ಮೊದಲು ಅನಧಿಕೃತವಾಗಿ ಸಾಗುವಳಿ ಮಾಡುತ್ತಿರುವ ಭೂರಹಿತರು, ಸಣ್ಣ ರೈತರ ಜಮೀನುಗಳನ್ನು ಸಕ್ರಮಗೊಳಿಸಲು ಅರ್ಜಿಗಳನ್ನು ಅಪ್‌ಲೋಡ್ ಮಾಡಲು ಮತ್ತೆ ಅವಕಾಶ ನೀಡಲಾಗಿದೆ ಎಂದು ಅಶೋಕ ಹೇಳಿದರು.

ಮನೆಗಳ ಸಕ್ರಮ ಅವಧಿ ವಿಸ್ತರಣೆ

ಗ್ರಾಮಾಂತರ ಮತ್ತು ನಗರ ಪ್ರದೇಶಗಳ ಸರ್ಕಾರಿ ಜಮೀನುಗಳಲ್ಲಿ 2015 ರ ಜನವರಿ 1 ಕ್ಕೆ ಮೊದಲು ಅನಧಿಕೃತವಾಗಿ ನಿರ್ಮಿಸಿರುವ ವಾಸದ ಮನೆಗಳ ಸಕ್ರಮಕ್ಕೆ ಅರ್ಜಿ ಸಲ್ಲಿಸುವ ಕೊನೆಯ ದಿನವನ್ನು 2022 ರ ಮಾರ್ಚ್ 31 ರವರೆಗೆ ವಿಸ್ತರಿಸಲಾಗಿದೆ.

ಸಕ್ರಮಕ್ಕಾಗಿ ಭೂಕಂದಾಯ ಕಾಯ್ದೆಯ 94 ಸಿ ಮತ್ತು 94 ಸಿಸಿ ಅಡಿ ಅವಕಾಶ ಕಲ್ಪಿಸಲಾಗಿತ್ತು. ಈ ಹಿಂದೆ ನೀಡಿದ್ದ ಕಾಲಾವಕಾಶ ಮುಗಿದಿದ್ದರೂ ಕಂದಾಯ ನಿಯಮ 108 ಕ್ಯೂ ಮತ್ತು 108 ಎಕ್ಸ್‌ಗೆ ತಿದ್ದುಪಡಿ ಮಾಡುವ ಮೂಲಕ ಹೆಚ್ಚಿನ ಕಾಲಾವಕಾಶ ನೀಡಲಾಗಿದೆ. ಅರ್ಜಿಗಳನ್ನು ಪರಿಶೀಲಿಸಿ ಅರ್ಹ ಫಲಾನುಭವಿಗಳಿಗೆ 2023 ರ ಮಾರ್ಚ್ 31 ರೊಳಗೆ ಹಕ್ಕು ಪತ್ರ ನೀಡಲಾಗುವುದು ಎಂದು ಅಶೋಕ ತಿಳಿಸಿದರು.

ಮಂಡಾಳು ರಾಶಿ

ಹಳೇ ಹುಬ್ಬಳ್ಳಿಯ ಪಡದಯ್ಯನ ಹಕ್ಕಲ ಬಳಿಯ ಬಟ್ಟಿಯಲ್ಲಿ ಕಾರ್ಮಿಕ ಮಂಡಾಳು ರಾಶಿ ಮಾಡುವಲ್ಲಿ ನಿರತರಾಗಿರುವುದು

– ಪ್ರಜಾವಾಣಿ ಚಿತ್ರ/ ತಾಜುದ್ದೀನ್ ಆಜಾದ್

‘ಮಕ್ಕಳಿಗೆ ಮದ್ಯ ಕುಡಿಸಿದ್ದೇ ಸಂಬಂಧಿಕರು’

ಪ್ರಜಾವಾಣಿ ವಾರ್ತೆ

ರಾಮನಗರ: ಎಳೆಯ ಪ್ರಾಯದ ಮಕ್ಕಳಿಗೆ ಸಂಬಂಧಿಕರೇ ಮದ್ಯ ಕುಡಿಸಿ ವಿಕೃತಿ ಮೆರೆದಿದ್ದು, ಘಟನೆ ಸಂಬಂಧ ಒಬ್ಬನನ್ನು ಪೊಲೀಸರು ಬಂಧಿಸಿದ್ದಾರೆ. ಮತ್ತಿಬ್ಬರು ಆರೋಪಿಗಳು ತಲೆಮರೆಸಿಕೊಂಡಿದ್ದಾರೆ.

ಕನಕಪುರ ತಾಲ್ಲೂಕಿನ ಕೋಡಿಹಳ್ಳಿ ಹೋಬಳಿಯ ಮರಳಿಪುರ ಗ್ರಾಮದ ಗಣೇಶ್ ಬಂಧಿತ. ಇನ್ನಿಬ್ಬರು ಆರೋಪಿಗಳಾದ ಪ್ರಮೋದ್ ಹಾಗೂ ಸೋಮಸುಂದರ್ ತಲೆಮರೆಸಿಕೊಂಡಿದ್ದಾರೆ.

ಈ ಮೂವರು ಮರಳಿಪುರ ಗ್ರಾಮದ ಬಾಳೆ ತೋಟವೊಂದರಲ್ಲಿ ಈಚೆಗೆ ಏಳು ಬಾಲಕರನ್ನು ಸೇರಿಸಿಕೊಂಡು ಮದ್ಯ ಪಾರ್ಟಿ ನಡೆಸಿದ್ದರು. ಮಕ್ಕಳಿಗೂ ಮದ್ಯ ಕುಡಿಸಿ ವಿಡಿಯೊ ಮಾಡಿಕೊಂಡಿದ್ದರು.

> **ಮಕ್ಕಳಿಗೆ ಮದ್ಯ ಕುಡಿಸಿದ ವಿಡಿಯೊದಲ್ಲಿ ಇರುವವರೆಲ್ಲ ಸಂಬಂಧಿಕರೇ ಆಗಿದ್ದಾರೆ. ಮೂವರ ವಿರುದ್ಧ ಪ್ರಕರಣ ದಾಖಲಾಗಿದ್ದು, ಈಗಾಗಲೇ ಒಬ್ಬನ ಬಂಧನವಾಗಿದೆ**
> **ಗಿರೀಶ್,** ಎಸ್‌ಪಿ, ರಾಮನಗರ

ಈ ವಿಡಿಯೊಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ್ದವು. ಈ ಹಿನ್ನೆಲೆಯಲ್ಲಿ ಜಾಗೃತಗೊಂಡ ಪೊಲೀಸರು ಸ್ವಯಂಪ್ರೇರಿತರಾಗಿ ಪ್ರಕರಣ ದಾಖಲಿಸಿ ಆರೋಪಿಯನ್ನು ಬಂಧಿಸಿದ್ದಾರೆ.

ಆರೋಪಿಗೆ ಕೋವಿಡ್: ಬಂಧಿತ ಆರೋಪಿ ಗಣೇಶ್‌ನನ್ನು ಪೊಲೀಸರು ಕೋವಿಡ್ ಪರೀಕ್ಷೆಗೆ ಒಳಪಡಿಸಿದ್ದು, ಕೋವಿಡ್ ಪಾಸಿಟಿವ್ ಬಂದಿದೆ. ಸದ್ಯ ಈತನನ್ನು ಕ್ವಾರಂಟೈನ್‌ನಲ್ಲಿ ಇಡಲಾಗಿದೆ. ಇದರಿಂದಾಗಿ ಪಾರ್ಟಿಯಲ್ಲಿ ಪಾಲ್ಗೊಂಡ ಮಕ್ಕಳಿಗೂ ಸೋಂಕು ಹರಡಿರುವ ಭೀತಿ ಎದುರಾಗಿದೆ.

ಮಕ್ಕಳಿಗೆ ಕೌನ್ಸೆಲಿಂಗ್: ಪ್ರಕರಣ ನಡೆದ ಗ್ರಾಮಕ್ಕೆ ಸೋಮವಾರ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಸಿಬ್ಬಂದಿ, ಆರೋಗ್ಯಾಧಿಕಾರಿಗಳು ಭೇಟಿ ನೀಡಿ ಮಾಹಿತಿ ಪಡೆದರು.

‘ವಿಡಿಯೊದಲ್ಲಿ ಇರುವವರೆಲ್ಲ 8ರಿಂದ 13 ವರ್ಷದ ಒಳಗಿನವರಾಗಿದ್ದಾರೆ. ಇವರ ಆರೋಗ್ಯ ತಪಾಸಣೆ ಮಾಡಿಸಿದ್ದು, ಯಾವುದೇ ತೊಂದರೆ ಇಲ್ಲ ಎಂದು ವೈದ್ಯರು ತಿಳಿಸಿದ್ದಾರೆ. ಈ ಎಲ್ಲರಿಗೂ ಆಪ್ತ ಸಮಾಲೋಚನೆ ಸಹ ಮಾಡಿದ್ದು, ವಿಡಿಯೊ ಕಾನ್ಫರೆನ್ಸ್ ಮೂಲಕ ಮಕ್ಕಳ ಕಲ್ಯಾಣ ಸಮಿತಿ ಮುಂದೆ ಹಾಜರುಪಡಿಸಿದ್ದೇವೆ’ ಎಂದು ಮಕ್ಕಳ ರಕ್ಷಣಾ ಘಟಕದ ಅಧಿಕಾರಿಗಳು ಮಾಹಿತಿ ನೀಡಿದರು.

ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿ
ದೂರವಾಣಿ : 08472/ 278675 ಫ್ಯಾಕ್ಸ್ : 08472 / 260776
ಇ ಮೇಲ್ : itstaff_ulb_gulbarga@yahoo.com

No: KMP/EE/ELE/CCMS/139/2020-21 DATE: 03.06.2021

2ನೇ ತಿದ್ದುಪಡಿ ಅಧಿಸೂಚನೆ (ಕೋರಿಜೆಂಡಮ್)

ಈ ಕಛೇರಿ ಪತ್ರ ಸಂಖ್ಯೆ: KMP/EE/ELE/CCMS/139/2020-21/16 Dated: 01.04.2021 ಮತ್ತು ಕೋರಿಜೆಂಡಮ್ ಪತ್ರ ಸಂಖ್ಯೆ: KMP/EE/ELE/CCMS/139/2020-21 Dated:11.05.2021 ರನ್ವಯ ಕಲಬುರಗಿ ಮಹಾನಗರ ಪಾಲಿಕೆಯ SFC Special Fund ಯೋಜನೆಯಲ್ಲಿ ಮಂಜೂರಾದ ಕಾಮಗಾರಿಯಾದ Selection of concessionaire for implementation and maintenance of LED street lights/ lighting system and Centralized Control & Monitoring System through Public Private Partnership (PPP) in Kalaburagi City Corporation, Kalaburagi ಇಂಡೆಂಟ್ ನಂ: KMP/EE/ELE/CCMS/139/2020-21 ಟೆಂಡರ್ ಪ್ರಕಟಣೆ ಕೋರಿಜೆಂಡಮ್ ಪ್ರಕಟಿಸಲು ದಿನಾಂಕ: 11.05.2021 ರಂದು ನೀಡಲಾಗಿತ್ತು. ಆದರೆ ಕೋವಿಡ್-19 ಲಾಕಡೌನ್ ಹಿನ್ನಲೆಯಲ್ಲಿ ಸದರಿ ಕಾಮಗಾರಿಯ ಟೆಂಡರ್‌ನ ದಿನಾಂಕಗಳನ್ನು ಮತ್ತೆ ಮುಂದೂಡಿಸಿ ಹೊಸ ದಿನಾಂಕಗಳನ್ನು ಪ್ರಕಟಿಸಲು ಸೂಚಿಸಲಾಗಿದೆ. ಅದರಂತೆ ಹೊಸ ದಿನಾಂಕಗಳು ಕೆಳಗಿನಂತಿವೆ,

ಕ್ರ.ಸಂ	ಮೊದಲು ಪ್ರಕಟಿಸಲಾದ ದಿನಾಂಕ	ತಿದ್ದುಪಡಿ (ಬದಲಾದ) ದಿನಾಂಕ
1.	ಟೆಂಡರಗಾಗಿ ಸಲ್ಲಿಸಲು ಅಂತಿಮ ದಿನಾಂಕ: 04.06.2021 ಸಾಯಂಕಾಲ 5:00 ಗಂಟೆಯವರೆಗೆ	ಟೆಂಡರಗಾಗಿ ಸಲ್ಲಿಸಲು ಅಂತಿಮ ದಿನಾಂಕ: 15.06.2021 ಸಾಯಂಕಾಲ 5:00 ಗಂಟೆಯವರೆಗೆ
2.	ತಾಂತ್ರಿಕ ಟೆಂಡರ ತೆರೆಯುವ ದಿನಾಂಕ: 07.06.2021 ಸಾಯಂಕಾಲ 4:30 ಗಂಟೆಗೆ	ತಾಂತ್ರಿಕ ಟೆಂಡರ ತೆರೆಯುವ ದಿನಾಂಕ: 17.06.2021 ಸಾಯಂಕಾಲ 4:30 ಗಂಟೆಗೆ
3.	ಆರ್ಥಿಕ ಟೆಂಡರ್ ತೆರೆಯುವ ದಿನಾಂಕ: 14.06.2021 ಬೆಳಗ್ಗೆ 11:00 ಗಂಟೆಗೆ	ಆರ್ಥಿಕ ಟೆಂಡರ್ ತೆರೆಯುವ ದಿನಾಂಕ: 23.06.2021 ಬೆಳಗ್ಗೆ 11:00 ಗಂಟೆಗೆ

ವಾ.ಸಾ.ಸಂ.ಇ/ಕಲಬುರಗಿ/250/ಎಂ.ಸಿ&ಎ/2021-22
ಸಹಿ/- ಆಯುಕ್ತರು
ಮಹಾನಗರ ಪಾಲಿಕೆ, ಕಲಬುರಗಿ.

ನಿಧನ ವಾರ್ತೆ

ಮಾಜಿ ಸಚಿವ ಪ್ರೊ. ಮುಮ್ತಾಜ್ ಅಲಿಖಾನ್

ಬೆಂಗಳೂರು: ಮಾಜಿ ಸಚಿವ ಪ್ರೊ. ಮುಮ್ತಾಜ್ ಅಲಿಖಾನ್ (94) ಅವರು ಗಂಗಾನಗರದಲ್ಲಿರುವ ತಮ್ಮ ನಿವಾಸದಲ್ಲಿ ಸೋಮವಾರ ಬೆಳಿಗ್ಗೆ ನಿಧನರಾದರು.

ಅವರಿಗೆ ಪತ್ನಿ ಮತ್ತು ಮಗಳು ಇದ್ದಾರೆ. ಕೆಲವು ದಿನಗಳಿಂದ ವಯೋಸಹಜ ಕಾಯಿಲೆಗಳಿಂದ ಅವರು ಬಳಲುತ್ತಿದ್ದರು.

ಬಿಜೆಪಿಯಿಂದ ವಿಧಾನಪರಿಷತ್ ಸದಸ್ಯರಾಗಿ ನಾಮನಿರ್ದೇಶನಗೊಂಡಿದ್ದ ಅವರು, 2013ರಲ್ಲಿ ಆ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. 2008ರಲ್ಲಿ ಬಿ.ಎಸ್. ಯಡಿಯೂರಪ್ಪ ಸಂಪುಟದಲ್ಲಿ ಅವರು ಹಜ್, ವಕ್ಫ್ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವರಾಗಿದ್ದರು. ಬಳಿಕ ಬಿಜೆಪಿ ಬಿಟ್ಟು ಕಾಂಗ್ರೆಸ್ ಸೇರಿದ್ದರು. 2015ರಲ್ಲಿ ಅಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಲ್ಪ ಸಂಖ್ಯಾತ ಸಮುದಾಯಕ್ಕೆ ಯಾವುದೇ ಕೊಡುಗೆ ನೀಡುತ್ತಿಲ್ಲ ಎಂದು ಟೀಕಿಸಿ ಕಾಂಗ್ರೆಸ್ ತ್ಯಜಿಸಿದ್ದರು.

ಚಿಕ್ಕಬಳ್ಳಾಪುರದವರಾದ ಮುಮ್ತಾಜ್ ಅಲಿಖಾನ್ ಅಲ್ಲಿಯೇ ಶಿಕ್ಷಣ ಮುಗಿಸಿ, ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಲ್ಲಿ ಸಮಾಜವಿಜ್ಞಾನ ಪ್ರಾಧ್ಯಾಪಕರಾಗಿದ್ದರು. 1982ರಲ್ಲಿ ಸ್ವಯಂ ನಿವೃತ್ತಿ ಪಡೆದಿದ್ದರು.

ಸಾಹಿತ್ಯ ಮತ್ತು ಸಾಮಾಜಿಕ ಕ್ಷೇತ್ರದಲ್ಲಿ ಸಲ್ಲಿಸಿದ ಸೇವೆಗಾಗಿ ಅವರಿಗೆ ಹಲವು ಪ್ರಶಸ್ತಿಗಳು ಬಂದಿದ್ದವು.

ನಗರದ ಖುದ್ದುಸ್ ಸಾಹೇಬ್ ಖಬರ್‌ಸ್ತಾನದಲ್ಲಿ ಅವರ ಅಂತ್ಯಕ್ರಿಯೆ ನಡೆಯಿತು.

ಡಾ.ಸಿದ್ಧಲಿಂಗ ಶಿವಾಚಾರ್ಯ ಶ್ರೀ

ತೀರ್ಥಹಳ್ಳಿ: ಪ್ರಖರ ಮಾತುಗಾರಿಕೆ, ವಿಶೇಷ ಅಧ್ಯಯನದೊಂದಿಗೆ ಜೀವನ ಧರ್ಮದ ಪ್ರತಿಪಾದಕರಾಗಿದ್ದ ತಾಲ್ಲೂಕಿನ ಕವಲೇದುರ್ಗ ಭುವನಗಿರಿ ಸಂಸ್ಥಾನ ಮಹಾಮತ್ತಿನ ಮಠದ ಪೀಠಾಧಿಪತಿ ಡಾ.ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ (62) ಸೋಮವಾರ ಲಿಂಗೈಕ್ಯರಾದರು.

ಡಾ.ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ ಕೆಲ ದಿನಗಳಿಂದ ಕೊರೊನಾ ಸೋಂಕಿಗೆ ತುತ್ತಾಗಿದ್ದರು. ವಿಪರೀತ ಶೀತ, ಜ್ವರದಿಂದ ಬಳಲುತ್ತಿದ್ದ ಶ್ರೀಗಳು 4 ದಿನಗಳ ಹಿಂದೆ ಪಟ್ಟಣದ ಜೆ.ಸಿ ಆಸ್ಪತ್ರೆಯಲ್ಲಿ 2 ದಿನ ಚಿಕಿತ್ಸೆ ಪಡೆದಿದ್ದರು. ಸೋಂಕು ಉಲ್ಬಣಗೊಂಡ ಕಾರಣ ಹೆಚ್ಚಿನ ಚಿಕಿತ್ಸೆಗೆ ಶಿವಮೊಗ್ಗ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದರು. ಕೋವಿಡ್ ನಿಯಮಾವಳಿ ಅನ್ವಯ ಕವಲೇದುರ್ಗ ಮಠದ ಆವರಣದಲ್ಲಿ ಶ್ರೀಗಳ ಅಂತ್ಯ ಸಂಸ್ಕಾರ ಕಾರ್ಯ ನಡೆಯಿತು.

ಸೋಮಶೇಖರ ಬನವಾಸಿ

ಉಡುಪಿ: ಜಿಲ್ಲೆಯ ಪ್ರವಾಸೋದ್ಯಮ ಇಲಾಖೆಯ ಸಹಾಯಕ ನಿರ್ದೇಶಕ ಸೋಮಶೇಖರ ಬನವಾಸಿ (48) ಮಂಗಳೂರಿನ ಆಸ್ಪತ್ರೆಯಲ್ಲಿ ಸೋಮವಾರ ನಿಧನರಾದರು.

ಅವರಿಗೆ ಕೋವಿಡ್-19 ದೃಢವಾಗಿದ್ದು, ವೆನ್ಲಾಕ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಉತ್ತರ ಕನ್ನಡ ಜಿಲ್ಲೆಯ ಬನವಾಸಿಯವರಾದ ಸೋಮಶೇಖರ ಅವರು, ಕುಟುಂಬದೊಂದಿಗೆ ನಗರದಲ್ಲಿ ವಾಸವಿದ್ದರು. ಅವರಿಗೆ ಪತ್ನಿ, ಇಬ್ಬರು ಪುತ್ರಿಯರು ಹಾಗೂ ಒಬ್ಬ ಪುತ್ರ ಇದ್ದಾರೆ.

ಪೂರಕ ಪೌಷ್ಟಿಕಾಂಶ ಅತಿ ಬಳಕೆ ಬೇಡ

ಶರೀರದ ಕಾರ್ಯಕ್ಷಮತೆಗೆ ಮತ್ತು ಉತ್ತಮ ರೋಗನಿರೋಧಕ ವ್ಯವಸ್ಥೆಗೆ ಪೌಷ್ಟಿಕಾಂಶಗಳು ಅತ್ಯಗತ್ಯ. ಆದರೆ ಕೃತಕವಾಗಿ ತಯಾರಾದ ಪೌಷ್ಟಿಕಾಂಶಗಳ ಅತಿಯಾದ ಬಳಕೆಯೂ ಒಳ್ಳೆಯದಲ್ಲ

ಡಾ. ವಿನಯ ಶ್ರೀನಿವಾಸ್

ಸೌಮ್ಯಸ್ವರೂಪದ ಕೊರೊನಾ ಸೋಂಕಿತರಿಗೆ ಜ್ವರ ತಗ್ಗಿಸುವ ಔಷಧದ ಜೊತೆಗೆ ಒಂದಿಷ್ಟು ಸತು (ಜಿಂಕ್) ಮತ್ತು ಸಿ ಜೀವಸತ್ವಗಳಂತಹ ಪೂರಕ ಪೋಷಕಾಂಶಗಳನ್ನು ಕೊಡಲಾಗುತ್ತಿದೆಯಷ್ಟೆ. ಆದರೆ ಬಹಳಷ್ಟು ಮಂದಿ ಕೊರೊನಾದಿಂದ ಗುಣಮುಖರಾದ ಮೇಲೆಯೂ ಹಲವು ತಿಂಗಳುಗಳ ಕಾಲ ಈ ಗುಳಿಗೆಗಳನ್ನು ಮುಂದುವರೆಸಿದ್ದಾರೆ. ಅವುಗಳ ನಿಯಮಿತ ಬಳಕೆ ಕೊರೊನಾದಿಂದ ತಮ್ಮನ್ನು ರಕ್ಷಿಸಬಲ್ಲದು ಎಂದೇ ತಿಳಿದಿದ್ದಾರೆ. ಅದು ಪರೋಕ್ಷವಾಗಿ ನಿಜವೆನಿಸಿದರೂ ಸದೃಢ ಶರೀರವನ್ನು ಹೊಂದಿರುವ ಆರೋಗ್ಯವಂತರಿಗೆ ಅದರ ಅಗತ್ಯ ಇರುವುದಿಲ್ಲ. ಶರೀರದ ಕಾರ್ಯಕ್ಷಮತೆಗೆ ಮತ್ತು ಉತ್ತಮ ರೋಗನಿರೋಧಕ ವ್ಯವಸ್ಥೆಗೆ ಪೌಷ್ಟಿಕಾಂಶಗಳು ಅತ್ಯಗತ್ಯ. ಆದರೆ ಕೃತಕವಾಗಿ ತಯಾರಾದ ಇವುಗಳ ಅತಿಯಾದ ಬಳಕೆಯೂ ಒಳ್ಳೆಯದಲ್ಲ ಎನ್ನುತ್ತವೆ ಅಧ್ಯಯನಗಳು.

ಈ ಪೂರಕ ಪೌಷ್ಟಿಕಾಂಶಗಳು ಯಾರಿಗೆ ಅಗತ್ಯ?

- ಗರ್ಭಿಣಿಯಾಗ ಬಯಸುವ ಮಹಿಳೆಯರು ಹುಟ್ಟಲಿರುವ ಮಗುವಿನ ನರವ್ಯೂಹದ ಸಮರ್ಪಕ ಬೆಳವಣಿಗೆಗಾಗಿ ಫೋಲಿಕ್ ಆ್ಯಸಿಡ್ ಪೂರಕಗಳನ್ನು ಕಡ್ಡಾಯವಾಗಿ ತೆಗೆದುಕೊಳ್ಳಬೇಕು.
- ಗರ್ಭಿಣಿಯರು ಹಾಗೂ ಎದೆಹಾಲುಣಿಸುವ ತಾಯಂದಿರಲ್ಲಿ ಹೆಚ್ಚುವರಿ ಶಕ್ತಿ ಹಾಗೂ ಪೋಷಕಾಂಶಗಳ ಅಗತ್ಯ ಇರುತ್ತದೆ. ಹಾಗಾಗಿ ಈ ಸಮಯದಲ್ಲಿ ಫೋಲಿಕ್ ಆ್ಯಸಿಡ್, ಕಬ್ಬಿಣಾಂಶ ಹಾಗೂ ಕ್ಯಾಲ್ಸಿಯಂ ಪೂರಕಗಳನ್ನು ಸೇವಿಸುವುದು ಅತ್ಯಗತ್ಯ.
- ಹಿರಿಯ ನಾಗರಿಕರಲ್ಲಿ ವಯೋಸಹಜ ಕಾರಣಗಳಿಂದಾಗಿ ಜೀರ್ಣಾಂಗ ವ್ಯವಸ್ಥೆಯು ಸಮರ್ಪಕವಾಗಿ ಪೋಷಕಾಂಶಗಳನ್ನು ಹೀರಿಕೊಳ್ಳಲು ಅಸಮರ್ಥವಾಗಿರುತ್ತದೆ. ಇವರಲ್ಲಿ ಪೂರಕ ಪೋಷಕಾಂಶಗಳ ಬಳಕೆ ಒಮ್ಮೊಮ್ಮೆ ಬೇಕೆನಿಸಬಹುದು.
- ಆ್ಯಂಟಿಬಯೋಟಿಕ್ ಔಷಧಗಳ ಬಳಕೆಯ ನಂತರ. ಯಾವುದೇ ಸೋಂಕಿನ ಕಾಯಿಲೆಯ ಶಮನಕ್ಕಾಗಿ ಸೂಚಿಸುವ ಆ್ಯಂಟಿಬಯೋಟಿಕ್ ಔಷಧಗಳು ಒಮ್ಮೊಮ್ಮೆ ಕರುಳಿನಲ್ಲಿರುವ ಸ್ನೇಹಪರ ಸೂಕ್ಷ್ಮಾಣುಗಳ ನಾಶಕ್ಕೂ ಕಾರಣವಾಗಬಹುದು. ಈ ಸೂಕ್ಷ್ಮಾಣುಗಳು ಪೌಷ್ಟಿಕಾಂಶಗಳ ಹೀರಿಕೊಳ್ಳುವಿಕೆಗೆ ಅತ್ಯಗತ್ಯ. ಹಾಗಾಗಿ ಆ ಸಂದರ್ಭಗಳಲ್ಲಿ ಶರೀರಕ್ಕೆ ಪೂರಕಗಳು ಬೇಕೆನಿಸಬಹುದು.
- ಸಸ್ಯಾಹಾರಿಗಳಲ್ಲಿ ಪ್ರಾಣಿಜನ್ಯ ಆಹಾರದಿಂದ ಮಾತ್ರವೇ ಪ್ರಮುಖವಾಗಿ ಲಭ್ಯವಿರುವ ಪೋಷಕಾಂಶಗಳ ಕೊರತೆ ಕಂಡು ಬಂದಾಗ ಕೆಲವೊಮ್ಮೆ ವೈದ್ಯರು ಸೂಚಿಸಬಹುದು. ಉದಾಹರಣೆಗೆ ವಿಟಮಿನ್ ಬಿ-12.
- ಪೋಷಕಾಂಶಗಳ ಕೊರತೆಯಿಂದಾಗಿ ಆರೋಗ್ಯ ಸಮಸ್ಯೆಗಳು ಕಾಡಿದಾಗ.
- ನವಜಾತ ಶಿಶುಗಳಲ್ಲಿ. ಯಕೃತ್ತಿನ ಪೂರ್ಣಪ್ರಮಾಣದ ಕಾರ್ಯಕ್ಷಮತೆ ಸಿದ್ಧಿಸುವವರೆಗೂ ಕೆಲವೊಮ್ಮೆ 'ಕೆ' ಜೀವಸತ್ವ ಬೇಕಾಗಬಹುದು.
- ಮದ್ಯ ಹಾಗೂ ಮಾದಕ ವಸ್ತುಗಳ ವ್ಯಸನಿಗಳು ಸರಿಯಾದ ಆಹಾರಕ್ರಮವನ್ನು ಅನುಸರಿಸದೇ ಇರುವುದರಿಂದ ಅವರಲ್ಲಿ ಪೂರಕ ಪೋಷಕಾಂಶಗಳು ಬೇಕಾಗಬಹುದು.
- ಶಸ್ತ್ರಚಿಕಿತ್ಸೆ, ಸುಟ್ಟಗಾಯ ಅಥವಾ ಇತರ ತೀವ್ರ ಸ್ವರೂಪದ ಕಾಯಿಲೆಗಳಿಂದ ಚೇತರಿಸಿಕೊಳ್ಳುವಾಗ.
- ಏಡ್ಸ್ ಕಾಯಿಲೆಯಿಂದ ಬಳಲುವವರಿಗೆ. ಪೂರಕ ಪೋಷಕಾಂಶಗಳು ಗುಳಿಗೆ, ಪುಡಿ, ದ್ರವ ಮೊದಲಾದ ರೂಪದಲ್ಲಿ ಔಷಧ ಅಂಗಡಿಗಳಲ್ಲಿ ದೊರಕುತ್ತವೆ. ಇವು ಸೂಕ್ತಪ್ರಮಾಣದಲ್ಲಿ ನಿಗದಿತ ಪೌಷ್ಟಿಕಾಂಶವನ್ನಷ್ಟೇ ಹೊಂದಿರುತ್ತವೆ. ಶರೀರಕ್ಕೆ ಅವಶ್ಯಕತೆಯಿದ್ದಾಗ ಪೂರಕ ಪೋಷಕಾಂಶಗಳು ನಿಜಕ್ಕೂ ಪರಿಣಾಮಕಾರಿ. ಆದರೆ, ವೈದ್ಯರು ಯಾವುದೋ ಸಂದರ್ಭದಲ್ಲಿ ಸೂಚಿಸಿದ ಪೂರಕ ಔಷಧಗಳನ್ನೇ ಮುಂದುವರೆದು ಬಳಸುವುದು ಕೆಲವೊಮ್ಮೆ ಅಡ್ಡಪರಿಣಾಮಗಳಿಗೂ ಕಾರಣವಾಗಬಹುದು.

ಅಡ್ಡಪರಿಣಾಮಗಳೇನು?

- ಅಗತ್ಯಕ್ಕಿಂತಲೂ ಹೆಚ್ಚಾದ ಮೆಗ್ನಿಸಿಯಂನಿಂದಾಗಿ ಭೇದಿಯಾಗಬಹುದು.
- ಅಗತ್ಯಕ್ಕಿಂತಲೂ ಹೆಚ್ಚಾದ ಫಾಸ್ಫರಸ್‌ನಿಂದಾಗಿ ಭೇದಿ, ವಾಕರಿಕೆ ಮತ್ತು ವಾಂತಿಯಾಗಬಹುದು
- ಅತಿಯಾದ ಕಬ್ಬಿಣಾಂಶದ ಗುಳಿಗೆಗಳ ಬಳಕೆಯಿಂದ ಮಲಬದ್ಧತೆ, ವಾಕರಿಕೆ, ವಾಂತಿಯಾಗುವುದಲ್ಲದೆ ಕರುಳುಗಳಲ್ಲಿ ಸತುವಿನ ಹೀರಿಕೊಳ್ಳುವಿಕೆಯೂ ಕುಂಠಿತಗೊಳ್ಳಬಹುದು.
- ಸತು (ಜಿಂಕ್) ಅಗತ್ಯಕ್ಕಿಂತಲೂ ಹೆಚ್ಚಾದಾಗ ವಾಕರಿಕೆ, ವಾಂತಿ, ರೋಗನಿರೋಧಕ ವ್ಯವಸ್ಥೆಯ ಶಿಥಿಲಗೊಳ್ಳುವುದು ಹಾಗೂ ಆಹಾರದಲ್ಲಿನ ತಾಮ್ರದ ಅಂಶದ ಹೀರಿಕೊಳ್ಳುವಿಕೆಯಲ್ಲಿ ವ್ಯತ್ಯಾಸವಾಗಬಹುದು.
- ಸೆಲೆನಿಯಂ ಎಂಬ ಪೋಷಕಾಂಶವು ಹೆಚ್ಚಾದಾಗ, ಅದು ಉಗುರು ಮತ್ತು ಕೂದಲನ್ನು ಟೊಳ್ಳಾಗಿಸಬಲ್ಲದು. ಅಲ್ಲದೆ ಕೈ ಮತ್ತು ಕಾಲುಗಳ ನರಗಳಲ್ಲಿ ತೊಂದರೆ ಉಂಟುಮಾಡಬಹುದು.

ನೆನಪಿಡಿ

- ಕೃತಕವಾಗಿ ತಯಾರಿಸಲ್ಪಟ್ಟ ಪೋಷಕಾಂಶಗಳಿಗಿಂತ ನಿಸರ್ಗದತ್ತ ಆಹಾರ ಪದಾರ್ಥಗಳಲ್ಲಿರುವ ಪೋಷಕಾಂಶಗಳು ಸಮರ್ಪಕವಾಗಿ ಕರುಳುಗಳಲ್ಲಿ ಹೀರಲ್ಪಡುತ್ತವೆ ಹಾಗೂ ದೇಹದಲ್ಲಿ ಹೆಚ್ಚು ಪರಿಣಾಮಕಾರಿಯಾಗಿ ಕಾರ್ಯಕ್ಷಮತೆ ತೋರುತ್ತವೆ.
- ಕೃತಕವಾಗಿ ತಯಾರಿಸಲ್ಪಟ್ಟದ್ದು ಕೇವಲ ನಿಗದಿತ ಪೋಷಕಾಂಶವನ್ನು ಮಾತ್ರವೇ ಹೊಂದಿರುತ್ತದೆ. ಆದರೆ ನೈಸರ್ಗಿಕವಾದ ಹಾಗೂ ತಾಜಾತನದಿಂದ ಕೂಡಿದ ಆಹಾರವು ವಿವಿಧ ಬಗೆಯ ಪೋಷಕಾಂಶಗಳನ್ನು ಹೊಂದಿದ್ದು, ಸುಲಭವಾಗಿ ಜೀರ್ಣವಾಗಿ, ಗರಿಷ್ಠ ಮಟ್ಟದಲ್ಲಿ ಶರೀರಕ್ಕೆ ಬಳಕೆಯಾಗುತ್ತವೆ.
- ಸಾಮಾನ್ಯವಾಗಿ ನಮ್ಮ ಶರೀರಕ್ಕೆ ಅಗತ್ಯವಾದ ಎಲ್ಲ ಪೌಷ್ಟಿಕಾಂಶಗಳು ನಾವು ಸೇವಿಸುವ ಆಹಾರದಿಂದ ನಮಗೆ ಲಭ್ಯ. ಆದ್ದರಿಂದ ಸರಿಯಾದ ಆಹಾರಕ್ರಮವನ್ನು ರೂಢಿಸಿಕೊಂಡರೆ, ಅಂದರೆ ಜೀವಸತ್ವಗಳು ಮತ್ತು ಖನಿಜಾಂಶಗಳು ಹೇರಳವಾಗಿರುವ ಹಣ್ಣು, ತರಕಾರಿ, ಸೊಪ್ಪು, ಹಾಲು, ಮೊಟ್ಟೆ, ಮೊಳಕೆ ಬರಿಸಿದ ಕಾಳುಗಳನ್ನು ದಿನನಿತ್ಯದ ಆಹಾರದಲ್ಲಿ ಸೇವಿಸಿದರೆ ಕೃತಕವಾಗಿ ತಯಾರಿಸಲ್ಪಟ್ಟ ಪೂರಕ ಪೌಷ್ಟಿಕಾಂಶಗಳ ಅಗತ್ಯ ಖಂಡಿತ ಇರುವುದಿಲ್ಲ.

(ಲೇಖಕಿ: ವೈದ್ಯೆ)

ದೇಹ ಇಂದ್ರಿಯ ಮನಸ್ಸುಗಳ ಸಂಯೋಗ

ಡಾ. ವಿಜಯಲಕ್ಷ್ಮಿ ಪಿ.

ಶರೀರ, ಇಂದ್ರಿಯ, ಮನಸ್ಸು ಮತ್ತು ಆತ್ಮಗಳ ಸಂಯೋಗವೇ ಈ ದೇಹ. ಇದರಲ್ಲಿ ಒಂದೊಂದು ವಿಕಾರ ಹೊಂದಿದರೇ ಜೀವನ ಕಷ್ಟ, ಇನ್ನು ಶರೀರ, ಇಂದ್ರಿಯ, ಮನಸ್ಸು - ಮೂರನ್ನೂ ಒಟ್ಟಿಗೆ ಆವರಿಸುವ ಕೋವಿಡ್‌ನ ಪರಿಣಾಮಗಳೇ ಇಂದು ನಾವು ಕಾಣುತ್ತಿರುವ ನಿತ್ಯದುಃಖ. ಈ ವ್ಯಾಧಿ ಹಾಗೂ ಅದರ ಅಡ್ಡಪರಿಣಾಮಗಳನ್ನು ತಡೆಯಬೇಕಾದರೆ ಶರೀರ, ಇಂದ್ರಿಯ ಮತ್ತು ಮನಸ್ಸು – ಮೂರೂ ಸಮತೋಲನದಲ್ಲಿರುವಂತೆ ನೋಡಿಕೊಳ್ಳಬೇಕು.

ಶರೀರವನ್ನು ಕಾಪಾಡಿಕೊಳ್ಳಲು ಶುದ್ಧವಾದ ಆಹಾರಸೇವನೆ ಮುಖ್ಯ; ಆಹಾರ ತಯಾರಿಕೆ ಮತ್ತು ಸೇವಿಸುವ ಸ್ಥಾನ, ವಿಧಾನ ಕೂಡ ಶುದ್ಧವಾಗಿರಬೇಕು. ಬಿಸಿ, ಬೇಯಿಸಿದ ಆಹಾರಸೇವನೆ, ಜೀರ್ಣಿಸಲು ಸುಲಭವಾಗುವ ಆಹಾರಗಳು, ಪ್ರಾದೇಶಿಕ ಆಹಾರಸೇವನೆ ಯಾವಾಗಲೂ ಹಿತಕರವಾದದ್ದು. ನಿತ್ಯವೂ ಆಹಾರದಲ್ಲಿ, ಸ್ವಲ್ಪ ಪ್ರಮಾಣವಾದರೂ ತುಪ್ಪವನ್ನು ಬಳಸುವುದು ಒಳ್ಳೆಯದು. ವಿಪರೀತವಾಗಿ ಕೊಬ್ಬು ಮತ್ತು ಜಿಡ್ಡಿನಿಂದ ಕೂಡಿರುವ ಆಹಾರ, ಪ್ರಾದೇಶಿಕ ಸಾಂಪ್ರದಾಯಿಕವಲ್ಲದ ಆಹಾರ, ತಂಪಾದ/ತಂಪು ಪೆಟ್ಟಿಗೆಯಲ್ಲಿಟ್ಟ ಆಹಾರ, ಯಾವುದೇ ಆಹಾರವಾದರೂ ಒಳ್ಳೆಯದು ಎಂದು ಅತಿಯಾಗಿ ನಿರಂತರವಾಗಿ ಸೇವಿಸ ಬಾರದು. ಕೋವಿಡ್ ಗುಣವಾದ ನಂತರ, ತಿಂಗಳಾದರೂ ಪಥ್ಯವನ್ನು ಪಾಲಿಸಿದರೆ ಜೀರ್ಣಶಕ್ತಿಯು ಸಮತೋಲನೆಗೆ ಬಂದು ಅಡ್ಡಪರಿಣಾಮಗಳಿಂದ ದೂರವಿರಬಹುದು.

ಇಂದ್ರಿಯಗಳು ಪ್ರಧಾನವಾಗಿ ಐದು. ಕೊರೊನಾದ/ಔಷಧಿಯ ಅಡ್ಡಪರಿಣಾಮಗಳು ಐದೂ ಇಂದ್ರಿಯಗಳ ಮೇಲೂ ಆಗುತ್ತದೆ. ಹಾಗಾಗಿ ಇವುಗಳನ್ನು ರಕ್ಷಿಸುವ ಭಾರ ದೊಡ್ಡದೇ.

ನಿತ್ಯವೂ ಬೆಚ್ಚಗಿರುವ ತ್ರಿಫಲಾ ಕಷಾಯದಿಂದ ದಿನಕ್ಕೆರಡು ಬಾರಿ (eye cupಗೆ ಹಾಕಿ) ಕಣ್ಣನ್ನು ತೊಳೆಯುವುದು. ಗುಲಾಬಿಜಲ (rose water)ದಲ್ಲಿ ಬಟ್ಟೆ ಅಥವಾ ಹತ್ತಿಯನ್ನು ಅದ್ದಿ ಕಣ್ಣಿನ ಮೇಲೆ 10 ನಿಮಿಷ ದಿನಕ್ಕೆರಡು ಬಾರಿ ಇರಿಸಿಕೊಳ್ಳುವುದು, ಕಣ್ಣಿನ ರೆಪ್ಪೆಗಳಿಗೆ ಕೊಬ್ಬರಿ ಅಥವಾ ಎಳ್ಳೆಣ್ಣೆಯನ್ನು ಹಚ್ಚುವುದು. ಈ ರೀತಿ ನಿತ್ಯವೂ ಮಾಡುವುದರಿಂದ ಕಣ್ಣಿಗೆ ಯಾವುದೇ ವೈರಾಣು ಅಥವಾ ಶಿಲೀಂದ್ರಗಳ ತೊಂದರೆ ನಿವಾರಣೆಯಾಗುತ್ತದೆ.

ಮೂಗಿನ ರಕ್ಷಣೆಗೆ ಮೂಗಿನ ಹೊಳ್ಳೆಗಳ ಒಳಗೆ ನಿತ್ಯವೂ ತುಪ್ಪ ಅಥವಾ ಕೊಬ್ಬರಿ ಎಣ್ಣೆಯನ್ನು ಬಳಸಬಹುದು; ಬಜೆ ಬೇರು ಅಥವಾ ಅರಿಶಿನದ ಬೇರನ್ನು ತುಪ್ಪದಲ್ಲಿ ನೆನೆಸಿ ಅದರ ತುದಿಗೆ ಬೆಂಕಿ ಹಚ್ಚಿ ಅದರಲ್ಲಿ ಅದರಿಂದ ಬರುವ ಹೊಗೆಯನ್ನು ಆಘ್ರಾಣಿಸುವುದು ಮೂಗಿನಲ್ಲಿರುವ ಕಫವನ್ನು ಕರಗಿಸುತ್ತದೆ, ಯಾವುದೇ ಸೋಂಕು ಬಾರದಂತೆಯೂ ತಡೆಗಟ್ಟುತ್ತದೆ. ನಾಲಿಗೆ, ಬಾಯಿಯ ರಕ್ಷಣೆಗೆ ಒಂದು ಚಮಚದಷ್ಟು ಎಳ್ಳೆಣ್ಣೆ ಅಥವಾ ಕೊಬ್ಬರಿ ಎಣ್ಣೆಯನ್ನು ಬಾಯಿಗೆ ಹಾಕಿ ದಿನಕ್ಕೆರಡು ಬಾರಿ ಬಾಯಿ ಮುಕ್ಕಳಿಸಬೇಕು.

ಚರ್ಮ ಮತ್ತು ಕಿವಿಗಳಿಗೆ, ಹೊಟ್ಟೆ ಖಾಲಿ ಇರುವಾಗ, ಎಣ್ಣೆಹಚ್ಚಿ ಶಾಖ ಕೊಡುವುದು, ಬಿಸಿನೀರಿನ ಸ್ನಾನವನ್ನು ಮಾಡುವುದರಿಂದ ಚರ್ಮವನ್ನು ಸೋಂಕಿನಿಂದ ಕಾಪಾಡಿಕೊಳ್ಳಬಹುದು. ಆಹಾರವನ್ನು ಸೇವಿಸಿ ಎಣ್ಣೆ ಹಚ್ಚುವುದು ಸೋಂಕಿಗೆ ಆಹ್ವಾನ ನೀಡಿದಂತೆ.

ಒಳ್ಳೆಯದು ಎಂದು ಅತಿಯಾಗಿ ಶುಂಠಿ–ಮೆಣಸಿನ ಕಷಾಯವನ್ನು ಕುಡಿಯುವುದು ಹೊಟ್ಟೆ ಉರಿ, ಅಮ್ಲಪಿತ್ತಗಳನ್ನು ಹೆಚ್ಚಿಸಿ ಅದೇ ವ್ಯಾಧಿಕ್ಷಮತೆಯನ್ನು ಕಡಿಮೆ ಮಾಡುತ್ತದೆ. ಎಲ್ಲರಿಗೂ ತಿಳಿದಿರುವಂತೆ, ಗಾಯವಾಗಿ ರಕ್ತ ಬರುತ್ತಿರುವಾಗ ಅರಿಶಿನವನ್ನು ಹಾಕಿದರೆ ರಕ್ತ ಹೆಪ್ಪುಗಟ್ಟುತ್ತದೆ, ಜೊತೆಗೆ ಗಾಯಕ್ಕೆ ಸೋಂಕಾಗದಂತೆ ಕಾಪಾಡುತ್ತದೆ. ಸೋಂಕನ್ನು ತಡೆಗಟ್ಟಬಹುದು ಎಂದು ಅತಿಯಾಗಿ ಅರಿಶಿನ ಸೇವಿಸಿದರೆ ಅದು ಸೋಂಕಿತರಲ್ಲಿ ರಕ್ತ ಹೆಪ್ಪುಗಟ್ಟುವಿಕೆಯನ್ನು ಹೆಚ್ಚುಮಾಡುವ ಸಾಧ್ಯತೆಯೂ ಇರುತ್ತದೆ. ಆದ್ದರಿಂದ ಔಷಧವಾಗಿ ಏನನ್ನೋ ಸೇವಿಸಬೇಕಾದರೂ ತಜ್ಞರ ಸಲಹೆಯನ್ನು ಪಡೆದು ಸೇವಿಸಿದರೆ ನಮ್ಮ ಆರೋಗ್ಯವನ್ನು ನಾವು ಕಾಪಾಡಿಕೊಳ್ಳಬಹುದು; ರೋಗ ಬಾರದಂತೆಯೂ ತಡೆಗಟ್ಟಬಹುದು.

ಸೋಂಕಿನಿಂದ ಭಯಭೀತರಾಗಿ, ಮಾಧ್ಯಮಗಳಲ್ಲಿ ಬರುವ ಎಲ್ಲಾ ವಿಧವಾದ ಚಿಕಿತ್ಸಾಕ್ರಮಗಳನ್ನು ವಿವೇಚನೆ ಇಲ್ಲದೆ, ಉಪಯೋಗಿಸುವುದು ಸರಿಯಲ್ಲ. ಸಿದ್ಧಗಂಗಾಮಠದ ಶ್ರೀ ಶಿವಕುಮಾರಸ್ವಾಮಿಗಳು ಹೇಳಿದಂತೆ 'ರೋಗ ಬಂದವರೆಲ್ಲಾ ಸಾಯುವುದಿಲ್ಲ. ಸಾಯಲು ರೋಗ ಬರಲೇಬೇಕೆಂದೇನೂ ಇಲ್ಲ' ಎನ್ನುವ ಮಾತನ್ನು ನೆನಪಿಟ್ಟುಕೊಂಡರೆ ರೋಗಭಯ/ಸಾವಿನ ಭಯದಿಂದ ವಿಮುಕ್ತರಾಗಬಹುದು.

ಯಾವುದೇ ಸಮಸ್ಯೆಗಾದರೂ ಪರಿಹಾರವಿರುತ್ತದೆ. ಸಮಸ್ಯೆಯನ್ನು ಎದುರಿಸಿ ಗೆಲ್ಲಬೇಕೇ ಹೊರತು ಸಮಸ್ಯೆಯಿಂದ ಓಡಿಹೋಗುವುದರಿಂದ ಸಮಸ್ಯೆ ನಮ್ಮನ್ನು ಅಟ್ಟಿಸಿಕೊಂಡು ಬರುತ್ತದೆ. ಆದ್ದರಿಂದ ದೈಹಿಕವಾಗಿ ಜ್ವರ, ಕೆಮ್ಮು, ನೆಗಡಿ, ಮೈ–ಕೈ ನೋವು ಅಥವಾ ಯಾವುದೇ ಸಂದರ್ಭದಲ್ಲಿ ಸೋಂಕಿತರೊಂದಿಗೆ ಸಂಪರ್ಕಕ್ಕೆ ಬಂದಿದ್ದರೆ ಪರೀಕ್ಷೆ ಮಾಡಿಸಿಕೊಳ್ಳಬೇಕು. ಸೋಂಕಿತರಾಗಿದ್ದರೆ ತಜ್ಞರ ಸಲಹೆಯಂತೆ ನಡೆದುಕೊಂಡರೆ ತಮ್ಮ ಆರೋಗ್ಯವನ್ನು ಕಾಪಾಡುವುದರ ಜೊತೆಗೆ ಸಮಾಜದಲ್ಲಿ ಸೋಂಕು ಹರಡುವುದನ್ನು ತಡೆಗಟ್ಟಬಹುದು. ಆದರೆ ಉದಾಸೀನ ಮಾಡಿ ಕೊನೆಗೆ ವೈದ್ಯರನ್ನೋ ವೈದ್ಯವಿದ್ಯೆಯನ್ನೋ ಸರ್ಕಾರವನ್ನೋ ಬೈಯ್ಯುವುದರಿಂದ ಯಾವುದೇ ಲಾಭವಿಲ್ಲ.

(ಲೇಖಕಿ: ಆಯುರ್ವೇದವೈದ್ಯೆ)

ಸಿಇಟಿ ದಿಕ್ಸೂಚಿ

Physics - Units and Measurements

1. The resistance $R=\frac{V}{I}$ where $V=(100\pm5)V$ and $I=(10\pm0.2)A$. The percentage error in R is
(1) 5.2 % (2) 4.8 %
(3) 7 % (4) 3 %

2. A cylindrical wire has a mass $(0.3\pm0.003)g$, radius $(0.5\pm0.005)mm$, and length $(6\pm0.06)cm$. The maximum percentage error in the measurement of its density is
(1) 1 (2) 2
(3) 3 (4) 4

3. If C be the capacitance and V be the electric potential, then the dimensional formula of CV^2 is [KCET-2011]
(1) $[ML^2T^{-2}A^{0}]$ (2) $[MLT^{-2}A^{-1}]$
(3) $[M^{0}LT^{-2}A^{0}]$ (4) $[ML^{-3}TA]$

4. The equation of a wave is given by $y=10\sin\left(\frac{2\pi}{45}t+\alpha\right)$. If the displacement is 5cm at t = 0, then the total phase at t = 7.5 s is [KCET-2011]
1) $\frac{\pi}{3}$ 2) $\frac{\pi}{2}$
3) $\frac{\pi}{6}$ 4) π

5. A physical quantity Q is found to depend on observables x, y and z obeying relation . $Q=\frac{x^3y^2}{z}$. The percentage error in the measurement of x, y and z are 1 %, 2 % and 4 % respectively. What is percentage error in the quantity Q?
(1) 4 % (2) 3 %
(3) 11 % (4) 1 %

6. Which one of the following is NOT correct?
1) Dimensional formula of thermal conductivity (K) is $M^1L^1T^{-3}K^{-1}$
2) Dimensional formula of potential (V) is $M^1L^2T^3A^{-1}$
3) Dimensional formula of permeability of free space (μ_o) is $M^1L^1T^{-2}A^{-2}$
4) Dimensional formula of RC is $M^0L^0T^{-1}$

7. If P, Q and R are physical quantities having different dimensions, which of the following combinations can never be a meaningful quantity?
(1) $\frac{PQ}{R}$ (2) $\frac{P-Q}{R}$
(3) $\frac{PR-Q^2}{R}$ (4) $PQ-R$

8. The dimensional formula of physical quantity is $M^aL^bT^c$. Then that physical quantity is [KCET-2012]
(1) surface tension if a = 1, b = 1, c = - 2
(2) force if a = , b = 1, c = 2
(3) angular frequency if a = 0, b = 0, c = -1
(4) spring constant if a = 1, b = - 1, c = -2

9. The ratio of the dimensions of Planck constant and that of moment of inertia has the dimensions of
(1) time
(2) frequency
(3) angular momentum
(4) velocity

10. A substance of mass 4.953 g occupies 1.5 cm³ of volume. The density of the substance (in g-cm-3) with correct number of significant figures is [KCET-2017]
(1) 3.302 (2) 3.300
(3) 3.3 (4) 3.30

Answers

1. Answer (3)

Hint:

$$\frac{\Delta R}{R}=\frac{\Delta V}{V}+\frac{\Delta i}{i}$$
$$\frac{\Delta R}{R}=\frac{5}{100}+\frac{0.2}{10}$$
$$\frac{\Delta R}{R}=0.05+0.02$$
$$\frac{\Delta R}{R}\times100=7\%$$

2. Answer: (4)

Hint:

$$\frac{\Delta\rho}{\rho}=\frac{\Delta m}{m}+2\frac{\Delta r}{r}+\frac{\Delta\ell}{\ell}$$
$$=\frac{0.003}{0.3}+2\times\frac{0.005}{0.5}+\frac{0.06}{6}$$
$$=0.01+2\times0.01+0.01=0.04\Rightarrow4\%$$

3. (1)
Hint: We know, Energy is dimensionally, $E=CV^2$
Dimensions of = Dimensions of energy $=[ML^2T^{-2}]$

4. (2)
Sol.: $y=10\sin\left[\frac{2\pi}{45}t+\alpha\right]$
$y=5cm\ at\ t=0$
$\therefore\quad 5=10(\sin\alpha)$

Again if t = 7.5 s
Then total phase $\frac{2\pi}{45}\times\frac{15}{2}+\frac{\pi}{6}=\frac{2\pi+\pi}{6}=\frac{3\pi}{6}=\frac{\pi}{2}$

5. (3)
Hint: Given, $Q=\frac{x^2y^2}{z}$
Percentage error in measurement of x = 1 %
Percentage error in measurement of y = 2 %
Percentage error in measurement of z = 4 %
Percentage error in $Q=\frac{\Delta Q}{Q}=3\frac{\Delta x}{x}+2\frac{\Delta y}{y}+\frac{\Delta z}{z}$
$=3\times1+2\times2+4=11\%$

6. (2 & 4)
Hint : 1)
Hint : 1) $\frac{Heat}{Time}=KA\frac{\Delta T}{L}$
$\Rightarrow K=\frac{Heat\times L}{Time\ A\ \Delta T}=\frac{ML^2T^{-2}\times L}{T\times L^2K}$
$[K]=[MLT^{-3}K^{-1}]$
2) Potential $=\frac{work}{charge}=\frac{ML^2T^{-2}}{AT}=ML^2A^{-1}T^{-3}$
3) $[\mu_o]=\frac{force}{I^2}=MLT^{-2}A^{-2}$
4) $[RC]=[T]$

7. (2)
Hint: Principle of homogeneity
Addition or subtraction is valid for PQ having same dimensional formula

8. (3) Code: P- 2
Hint :- $M^aL^bT^c$: If $a=0;b=0;c=-1$ this
If this physical quantity is angular frequency

9. (2)
Hint : Hint : $E=hv$
$h=\frac{E}{v}=\frac{[ML^2T^{-2}]}{[T^{-1}]}=ML^2T^{-1}$.....(1)
Moment of Inertia $I=mr^2=[ML^2]$ ......(2)
Dividing eq. (1) and (2)
$\left[\frac{h}{i}\right]=\frac{[ML^2T^{-1}]}{[ML^2]}=[T^{-1}]$
$[T^{-1}]$ = frequency of a particle.
Answer: (2)

10. (3) Hint: Density $\rho=\frac{mass}{vol}=\frac{4.953g}{1.5cm^3}$
$=3.303g/cm^3\quad=3.3g/cm^3$

(ಪ್ರಶ್ನೋತ್ತರ ಸಂಯೋಜನೆ: ಆಕಾಶ್ ಇನ್‌ಸ್ಟಿಟ್ಯೂಟ್, ಬೆಂಗಳೂರು)

ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆಯ ಮಾದರಿ ಪ್ರಶ್ನೆಗಳು

ಭಾಗ - 2

11. ಕರ್ನಾಟಕದ ಈ ಕೆಳಗಿನ ಯಾವ ಸ್ಥಳವು UNESCO ಪಾರಂಪರಿಕ ತಾಣಗಳ ಪಟ್ಟಿಗೆ ಸೇರಿಲ್ಲ?
ಎ) ಪಶ್ಚಿಮ ಘಟ್ಟಗಳು
ಬಿ) ಪಟ್ಟದಕಲ್ಲು
ಸಿ) ಐಹೊಳೆ
ಡಿ) ಹಂಪಿ

12. ಕರ್ನಾಟಕದ ಕಾಶ್ಮೀರ ಎಂದು ಯಾವ ಜಿಲ್ಲೆಯನ್ನು ಕರೆಯುತ್ತಾರೆ?
ಎ) ಉತ್ತರಕನ್ನಡ
ಬಿ) ದಕ್ಷಿಣಕನ್ನಡ
ಸಿ) ಕೊಡಗು
ಡಿ) ಮೈಸೂರು

13. ಓಝೋನ್ ರಾಸಾಯನಿಕ ಸೂತ್ರ ಏನು?
ಎ) ಓ2
ಬಿ) ಓ3
ಸಿ) ಓ4
ಡಿ) ಸಿಓ2

14. ಈ ಕೆಳಗಿನ ಯಾವ ಜಿಲ್ಲೆ ಸಂವಿಧಾನದ 371 J ವಿಧಿ ಅಡಿಯಲ್ಲಿ ಬರುವುದಿಲ್ಲ?
ಎ) ಬೀದರ್
ಬಿ) ಯಾದಗಿರಿ
ಸಿ) ವಿಜಯಪುರ
ಡಿ) ಕೊಪ್ಪಳ

15. ಗ್ಲೂಕೋಸ್‌ನ ರಾಸಾಯನಿಕ ಸೂತ್ರ ಏನು?
ಎ) C6H6O6
ಬಿ) C12H12O11
ಸಿ) C6H12O11
ಡಿ) C6H12O6

16. ಪ್ರಸಕ್ತ ಗ್ರಾಮ ಪಂಚಾಯ್ತಿ ಅಧ್ಯಕ್ಷರ ಅಧಿಕಾರಾವಧಿ ಎಷ್ಟು?
ಎ) 1 ವರ್ಷ
ಬಿ) 3.5 ವರ್ಷಗಳು
ಸಿ) 5 ವರ್ಷಗಳು
ಡಿ) 2.5 ವರ್ಷಗಳು

17. ನಮ್ಮ ದೇಶದ ಸಂಸದೀಯ ಮಾದರಿ ಸರ್ಕಾರವನ್ನು ಯಾವ ದೇಶದಿಂದ ಆಯ್ದುಕೊಳ್ಳಲಾಗಿದೆ?
ಎ) ಬ್ರಿಟನ್
ಬಿ) ಜರ್ಮನಿ
ಸಿ) ಅಮೆರಿಕ
ಡಿ) ಫ್ರಾನ್ಸ್

18. ಸಸ್ಯಗಳಲ್ಲಿ ಆಹಾರ ಸಾಗಣೆ ಮಾಡುವ ಅಂಗಾಂಶ ಯಾವುದು?
ಎ) ಕ್ಸೈಲಂ
ಬಿ) ಫ್ಲೋಯೆಂ
ಸಿ) ಕ್ಲೋರೋಫಿಲ್
ಡಿ) ಕ್ಸಾನೋಫಿಲ್

19. ಅತ್ಯಂತ ಗಟ್ಟಿಯಾದ ಅಲೋಹ ಯಾವುದು?
ಎ) ಯುರೇನಿಯಂ
ಬಿ) ಬೆಳ್ಳಿ
ಸಿ) ವಜ್ರ
ಡಿ) ಪ್ಲಾಟಿನಂ

20. ಜನಪ್ರಿಯ 'ಬಾರೋ ಸಾಧನಕೇರಿಗೆ' ಗೀತೆಯನ್ನು ರಚಿಸಿದವರು ಯಾರು?
ಎ) ಕುವೆಂಪು
ಬಿ) ಮೈಸೂರು ಅನಂತಸ್ವಾಮಿ
ಸಿ) ಅಂಬಿಕಾತನಯದತ್ತ
ಡಿ) ಡಾ.ಸಾ.ಶಿ.ಮರುಳಯ್ಯ

21. ರಾಮು ಸೋಮುವಿನ ವಯಸ್ಸಿಗಿಂತ 2 ಪಟ್ಟು ದೊಡ್ಡವನು ಮತ್ತು ಕಿಟ್ಟಿಗಿಂತ 4 ವರ್ಷ ದೊಡ್ಡವನು. ಈಗ ಕಿಟ್ಟಿಗೆ 8 ವರ್ಷ, ಹಾಗಾದರೆ ಸೋಮು ಕಿಟ್ಟಿಗಿಂತ ಎಷ್ಟು ವರ್ಷ ಚಿಕ್ಕವನು?
ಎ) 2 ವರ್ಷಗಳು
ಬಿ) 4 ವರ್ಷಗಳು
ಸಿ) 6 ವರ್ಷಗಳು
ಡಿ) 3 ವರ್ಷಗಳು

22. 'ಪಾರಾದೀಪ್' ಬಂದರು ಇರುವುದು ಯಾವ ರಾಜ್ಯದಲ್ಲಿ?
ಎ) ಪಶ್ಚಿಮ ಬಂಗಾಳ
ಬಿ) ಗುಜರಾತ್
ಸಿ) ಒಡಿಸ್ಸಾ
ಡಿ) ಆಂಧ್ರಪ್ರದೇಶ

23. 'ಶಿಲ್ಪವೇದ' ಯಾವುದರ ಭಾಗವಾಗಿದೆ?
ಎ) ಋಗ್ವೇದ
ಬಿ) ಯಜುರ್ವೇದ
ಸಿ) ಸಾಮವೇದ
ಡಿ) ಅಥರ್ವಣವೇದ

24. 'ಭಾರತದ ನೆಪೋಲಿಯನ್' ಎಂದು ಯಾರನ್ನು ಕರೆಯುತ್ತಾರೆ?
ಎ) ಚಕ್ರವರ್ತಿ ಅಶೋಕ
ಬಿ) ಧ್ರುವ
ಸಿ) ಇಮ್ಮಡಿ ಪುಲಿಕೇಶಿ
ಡಿ) ಸಮುದ್ರಗುಪ್ತ

25. ರಾಷ್ಟ್ರಪತಿ ಲೋಕಸಭೆಯನ್ನು ಯಾರ ಶಿಫಾರಸ್ಸಿನ ಮೇರೆಗೆ ವಿಸರ್ಜಿಸಬಹುದು?
ಎ) ಪ್ರಧಾನಮಂತ್ರಿ
ಬಿ) ಸುಪ್ರೀಂ ಕೋರ್ಟಿನ ಮುಖ್ಯ ನ್ಯಾಯಾಧೀಶರು
ಸಿ) ಲೋಕಸಭೆ ಸ್ಪೀಕರ್
ಡಿ) ರಾಜ್ಯಸಭೆ ಅಧ್ಯಕ್ಷ

ಭಾಗ-1ರ ಉತ್ತರ:
1. ಬಿ, 2. ಎ, 3. ಎ, 4. ಬಿ, 5. ಡಿ, 6. ಡಿ, 7. ಡಿ, 8. ಬಿ, 9. ಸಿ, 10. ಎ

(ಪ್ರಶ್ನೋತ್ತರ ಸಂಯೋಜನೆ: ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

ಸುಭಾಷಿತ

ಹಾಸ್ಯಪ್ರಜ್ಞೆ ಮತ್ತು ಜೀವನದ ಬಗ್ಗೆ ಒಂದು ತುಂಟತನ ಈ ಎರಡೂ ನನಗೆ ಮುಖ್ಯವಾದ ಸಂಗತಿಗಳು. ಅವು ಇಲ್ಲದಿದ್ದರೆ ಬದುಕು ಬಹಳ ನೀರಸವಾಗಿರುತ್ತದೆ.

–ಮೀರಾ ನಾಯರ್

ಖಾಸಗಿ ಶಾಲಾ ಶಿಕ್ಷಕರಿಗೆ ನೆರವು ಸರ್ಕಾರದ ಜಿಗುಟುತನ ಸರಿಯಲ್ಲ

ಕೊರೊನಾ ಸಂದರ್ಭದಲ್ಲಿ ಸಂಕಷ್ಟಕ್ಕೆ ಸಿಲುಕಿರುವ ಖಾಸಗಿ ಅನುದಾನರಹಿತ ಶಾಲೆಗಳ ಶಿಕ್ಷಕರಿಗೆ ನೆರವಾಗುವ ದಿಸೆಯಲ್ಲಿ ರಾಜ್ಯ ಸರ್ಕಾರ ಜಿಗುಟುತನ ತೋರುತ್ತಿದೆ. ಜೀವನೋಪಾಯಕ್ಕೆ ತೊಂದರೆ ಎದುರಿಸುತ್ತಿರುವ ಶಿಕ್ಷಕರಿಗೆ ನೆರವು ನೀಡಬೇಕಾಗಿದ್ದ ಸರ್ಕಾರ, ತನ್ನ ಹೊಣೆಗಾರಿಕೆಯನ್ನು ಸರ್ಕಾರಿ ಶಾಲಾ ಶಿಕ್ಷಕರಿಗೆ ವರ್ಗಾಯಿಸಲು ನಡೆಸಿದ ಪ್ರಯತ್ನ ಅಸಮಂಜಸ ಹಾಗೂ ಅವಾಸ್ತವಿಕ. ಐದು ದಿನಗಳ ವೇತನ ನೀಡುವ ಮೂಲಕ ಖಾಸಗಿ ಶಾಲೆಗಳ ಶಿಕ್ಷಕರ ಸಹಾಯಕ್ಕೆ ಬರುವಂತೆ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಎಸ್. ಸುರೇಶ್‌ಕುಮಾರ್ ಮಾಡಿಕೊಂಡಿದ್ದ ಮನವಿಯನ್ನು ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಸ್ಪಷ್ಟವಾಗಿ ನಿರಾಕರಿಸಿದೆ. ಕನಿಷ್ಠ ಒಂದು ದಿನದ ವೇತನವನ್ನಾದರೂ ನೀಡಿ ಎನ್ನುವ ಸಚಿವರ ಮನವಿಯನ್ನೂ ಸಂಘ ಒಪ್ಪಿಕೊಂಡಿಲ್ಲ. ಶಿಕ್ಷಕರು ಮಾತ್ರವಲ್ಲ, ಯಾವುದೇ ಸರ್ಕಾರಿ ನೌಕರ ಮತ್ತೊಬ್ಬರ ನೆರವಿಗೆ ತನ್ನ ದುಡಿಮೆಯ ಪಾಲನ್ನು ನೀಡಬೇಕೆಂದು ಸರ್ಕಾರ ನಿರೀಕ್ಷಿಸುವುದು ಅತಾರ್ಕಿಕ. ಸಮಾಜದ ಇತರ ವರ್ಗಗಳಿಗೆ ನೆರವು ನೀಡಲು ಸರ್ಕಾರಕ್ಕೆ ಸಾಧ್ಯವಿರುವಾಗ, ಖಾಸಗಿ ಶಾಲಾ ಶಿಕ್ಷಕರಿಗೆ ನೆರವಾಗುವ ಹೊಣೆಯನ್ನು ಸರ್ಕಾರಿ ಶಾಲಾ ಶಿಕ್ಷಕರ ಹೆಗಲಿಗೇರಿಸುವ ಪ್ರಯತ್ನ ಸಮರ್ಥನೀಯವಲ್ಲ. ಜಾತಿ ಆಧಾರಿತ ನಿಗಮಗಳಿಗೆ ಹಾಗೂ ಧಾರ್ಮಿಕ ಸಂಸ್ಥೆಗಳಿಗೆ ಅನುದಾನ ನೀಡಲು ಬಾಧಿಸದ ಹಣಕಾಸಿನ ಕೊರತೆ, ಶಿಕ್ಷಕರಿಗೆ ಸಹಾಯ ಮಾಡುವ ಸಂದರ್ಭದಲ್ಲಿ ಉಂಟಾಗುವುದು ಅಕ್ಷಮ್ಯಕರ. ನೆರವು ನೀಡುವ ವಿಷಯದಲ್ಲಿ ಸರ್ಕಾರಿ ಶಾಲೆಗಳ ಶಿಕ್ಷಕರನ್ನು ಎಳೆದು ತರುವ ಮೂಲಕ, ಖಾಸಗಿ ಶಾಲಾ ಶಿಕ್ಷಕರ ಘನತೆಗೆ ಕುಂದು ತರುವ ಕೆಲಸವನ್ನೂ ಸರ್ಕಾರ ಮಾಡಿದೆ. ನೆರವು ನೀಡುವ ವಿಷಯದಲ್ಲಿ ಸರ್ಕಾರಿ ಶಾಲಾ ಶಿಕ್ಷಕರನ್ನು ಮಧ್ಯೆ ತರಬೇಡಿ ಎಂದು ಅನುದಾನರಹಿತ ಶಾಲೆಗಳ ಆಡಳಿತ ಮಂಡಳಿಗಳ ಸಂಘ ಮಾಡಿಕೊಂಡಿರುವ ಮನವಿಯು ವಿವೇಚನಾಯುತವಾದುದು.

ಖಾಸಗಿ ಶಾಲಾ ಶಿಕ್ಷಕರ ಹಿತಾಸಕ್ತಿ ರಕ್ಷಣೆಗೆ ಸರ್ಕಾರ ಪ್ರಾಮಾಣಿಕ ಪ್ರಯತ್ನ ಮಾಡಬೇಕಾಗಿದೆ ಹಾಗೂ ಶಿಕ್ಷಕರನ್ನು ಘನತೆಯಿಂದ ನಡೆಸಿಕೊಳ್ಳಬೇಕಾಗಿದೆ

ಪೋಷಕರಿಗೆ ಹೊರೆಯಾಗುತ್ತದೆನ್ನುವ ಕಾರಣದಿಂದಾಗಿ ಕಳೆದ ಶೈಕ್ಷಣಿಕ ವರ್ಷದಲ್ಲಿ ಸರ್ಕಾರವು ಶಾಲಾ ಶುಲ್ಕದಲ್ಲಿ ವಿನಾಯಿತಿ ಕಲ್ಪಿಸಿತ್ತು. ರಿಯಾಯಿತಿ ಶುಲ್ಕವನ್ನು ಕಟ್ಟಲು ಕೂಡ ಕೆಲವು ಪೋಷಕರು ಹಿಂಜರಿದಿದ್ದರು. ಇದರ ಪರಿಣಾಮವು ಖಾಸಗಿ ಶಾಲೆಗಳ, ಮುಖ್ಯವಾಗಿ ಅನುದಾನ ರಹಿತ ಶಾಲೆಗಳ ಶಿಕ್ಷಕರು ಮತ್ತು ಸಿಬ್ಬಂದಿಯ ಮೇಲೆ ಉಂಟಾಗಿದೆ. ಕೆಲವರ ಸಂಬಳ ಕಡಿತವಾಗಿದ್ದರೆ, ಬಹಳಷ್ಟು ಜನ ಕೆಲಸವನ್ನೇ ಕಳೆದುಕೊಂಡಿದ್ದಾರೆ. ಕೊರೊನಾ ಬಿಕ್ಕಟ್ಟು ತಲೆದೋರಿದಾಗಿನಿಂದಲೂ ಖಾಸಗಿ ಶಾಲೆಗಳ ಶಿಕ್ಷಕರು ಸರ್ಕಾರದ ನೆರವಿಗೆ ಬೇಡಿಕೆ ಸಲ್ಲಿಸುತ್ತಲೇ ಇದ್ದಾರೆ. ಹೊಟ್ಟೆಪಾಡಿಗಾಗಿ ಕೆಲವು ಶಿಕ್ಷಕರು ಹಣ್ಣು– ತರಕಾರಿ ಮಾರಾಟ ಮಾಡಿದ್ದಾರೆ; ಕಟ್ಟಡ ನಿರ್ಮಾಣ ಕಾರ್ಮಿಕರಾಗಿ ದುಡಿದಿದ್ದಾರೆ. ಮಕ್ಕಳ ನಾಳೆಗಳನ್ನು ರೂಪಿಸುವ ಶಿಕ್ಷಕವೃಂದ ಜೀವನೋಪಾಯಕ್ಕಾಗಿ ಪಡುವ ಪಡಿಪಾಟಲುಗಳನ್ನು ಸರ್ಕಾರ ಈವರೆಗೆ ಮೂಕಪ್ರೇಕ್ಷಕನಂತೆ ನೋಡಿದ ನಂತರ, ತನ್ನ ಜವಾಬ್ದಾರಿಯನ್ನು ಸರ್ಕಾರಿ ಶಾಲಾ ಶಿಕ್ಷಕರಿಗೆ ವರ್ಗಾಯಿಸಲು ಪ್ರಯತ್ನಿಸಿದೆ. ಅವರು ಕೈಚೆಲ್ಲಿದ ನಂತರ ಬೇರೆ ದಾರಿಯಿಲ್ಲದೆ ಅನುದಾನರಹಿತ ಶಾಲಾ ಶಿಕ್ಷಕರಿಗೆ ತಲಾ ₹ 5 ಸಾವಿರ ನೆರವನ್ನು ಪ್ರಕಟಿಸಿದೆ. ಹದಿನಾಲ್ಕು ತಿಂಗಳ ನಂತರ ಘೋಷಿಸಿರುವ ಈ ನೆರವಿನ ಮೊತ್ತ ತೀರಾ ಕನಿಷ್ಠವಾದುದು. ಮಕ್ಕಳಲ್ಲಿ ಆತ್ಮವಿಶ್ವಾಸ ತುಂಬಬೇಕಾದ ಶಿಕ್ಷಕರೇ ಬದುಕಿನ ಬಗ್ಗೆ ಭರವಸೆ ಕಳೆದುಕೊಳ್ಳುವ ಪರಿಸ್ಥಿತಿ ತಲೆದೋರಿರುವುದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು. ಹೊಸ ಶೈಕ್ಷಣಿಕ ವರ್ಷದಲ್ಲೂ ಶಿಕ್ಷಕರ ಸಂಕಷ್ಟಗಳು ಮುಂದುವರಿಯುವ ನಿರೀಕ್ಷೆಯಿದೆ. ಪ್ರಸಕ್ತ ವರ್ಷ ಕೂಡ ಖಾಸಗಿ ಶಾಲೆಗಳು ಪೋಷಕರ ಬೆಂಬಲವನ್ನು ನಿರೀಕ್ಷಿಸುವುದು ಕಷ್ಟ. ಇಂಥ ಸಂದಿಗ್ಧ ಸಂದರ್ಭದಲ್ಲಿ, ಬಾಯಿಮಾತಿನ ಉಪಚಾರವನ್ನು ಕೈಬಿಟ್ಟು ಖಾಸಗಿ ಶಾಲಾ ಶಿಕ್ಷಕರ ಹಿತಾಸಕ್ತಿ ರಕ್ಷಣೆಗೆ ಸರ್ಕಾರ ಪ್ರಾಮಾಣಿಕ ಪ್ರಯತ್ನ ಮಾಡಬೇಕಾಗಿದೆ ಹಾಗೂ ಶಿಕ್ಷಕರನ್ನು ಘನತೆಯಿಂದ ನಡೆಸಿಕೊಳ್ಳಬೇಕಾಗಿದೆ.

ದಿನದ ಟ್ವೀಟ್

ಧನ್ಯವಾದಗಳು

18 ವರ್ಷಕ್ಕಿಂತ ಹೆಚ್ಚು ವಯಸ್ಸಿನ ಎಲ್ಲ ಪ್ರಜೆಗಳಿಗೆ ಉಚಿತವಾಗಿ ಕೊರೊನಾ ಲಸಿಕೆ ನೀಡುವುದಾಗಿ @PMOIndia ಘೋಷಿಸಿದ್ದಾರೆ.
ಘನತೆವೆತ್ತ ಸುಪ್ರೀಂ ಕೋರ್ಟ್‌ಗೆ ಧನ್ಯವಾದಗಳು.
#CoronaVaccination

ಸಿದ್ದರಾಮಯ್ಯ, ವಿಧಾನಸಭೆ ವಿರೋಧ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಶನಿವಾರ, 8-6-1996

- **ಪ್ರಧಾನಿಗೆ ದೂರು- ಅತೃಪ್ತರ ತೀರ್ಮಾನ**

ಬೆಂಗಳೂರು, ಜೂನ್ 7– ರಾಜ್ಯ ಜನತಾ ದಳದ ಕೆಲವು ‘ಭಿನ್ನಮತೀಯ’ ಶಾಸಕರು ಜೆ.ಎಚ್.ಪಟೇಲ್ ನೇತೃತ್ವದ ಸಂಪುಟ ರಚನೆ ಹಂತದಲ್ಲಿ ತಮಗಾಗಿರುವ ರಾಜಕೀಯ ಅನ್ಯಾಯಕ್ಕೆ ಪರಿಹಾರ ಕೋರಿ ಪ್ರಧಾನಿ ಎಚ್.ಡಿ. ದೇವೇಗೌಡರನ್ನೇ ಭೇಟಿ ಮಾಡಿ ದೂರು ಸಲ್ಲಿಸುವ ತೀರ್ಮಾನಕ್ಕೆ ಬಂದಿದ್ದಾರೆ.

ರಾಜ್ಯದಲ್ಲಿ ಅಸ್ತಿತ್ವಕ್ಕೆ ಬಂದಿರುವ ಗಜಗಾತ್ರದ ಸಂಪುಟ ಪ್ರಾದೇಶಿಕ ಅಸಮತೋಲನದ ಅಪ್ಪಟ ನಿದರ್ಶನವಾಗಿದೆ. ದಳ ಶಾಸಕಾಂಗ ಪಕ್ಷದ ಪ್ರಾತಿನಿಧಿಕ ಸ್ವರೂಪವೂ ಈ ಸಂಪುಟಕ್ಕೆ ಇಲ್ಲ ಎಂದು ವಾದಿಸಿರುವ ಈ ‘ಭಿನ್ನಮತೀಯರು’ ಒಬ್ಬೊಬ್ಬರಾಗಿ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡುವ ಮುಂಚಿನ ನಿಲುವನ್ನು ಬದಲಾಯಿಸಿದ್ದು, ಇಲ್ಲಿ ಆಗಿರುವ ಅನ್ಯಾಯದತ್ತ ‘ದಿಲ್ಲಿ ದೊರೆ’ಯ ಗಮನ ಸೆಳೆಯುವ ನಿರ್ಧಾರ ಕೈಗೊಂಡಿದ್ದಾರೆ.

ಭಾವನಾತ್ಮಕ ಉದ್ವೇಗಕ್ಕೆ ಒಳಗಾಗಿ ಅಥವಾ ಸಿಟ್ಟಿನ ಕೈಗೆ ಮನಸ್ಸನ್ನು ಕೊಟ್ಟು ವಿಧಾನಸಭೆಯಿಂದ ನಿರ್ಗಮಿಸಿದರೆ ಸರ್ಕಾರಕ್ಕೆ ಅಪಾಯ ತಟ್ಟಬಹುದು. ಸರ್ಕಾರ ಉರುಳಲೂಬಹುದು. ಆದರೆ ತಮ್ಮ ಉದ್ದೇಶ ಸರ್ಕಾರವನ್ನು ಉರುಳಿಸುವುದಲ್ಲ, ಬದಲಿಗೆ ಉಳಿಸುವುದು ಎಂದು ‘ಭಿನ್ನಮತೀಯ’ ಶಾಸಕರೊಬ್ಬರು ‘ಪ್ರಜಾವಾಣಿ’ಗೆ ವಿವರಿಸಿದರು.

- **ಕಲ್ಬುರ್ಗಿ ವಿ.ವಿ ನಾಮಕರಣ– ಮೂಡದ ಒಮ್ಮತ**

ಬೆಂಗಳೂರು, ಜೂನ್ 7– ಗುಲ್ಬರ್ಗ ವಿಶ್ವವಿದ್ಯಾಲಯಕ್ಕೆ ಪುನರ್ ನಾಮಕರಣ ಮಾಡುವ ವಿಚಾರದಲ್ಲಿ ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರು ದಲಿತ ಸಂಘಟನೆಗಳು ಹಾಗೂ ಬಸವ ದಳದ ಮುಖಂಡರ ಜತೆಗೆ ಇಂದು ಇಲ್ಲಿ ಪ್ರತ್ಯೇಕವಾಗಿ ನಡೆಸಿದ ಚರ್ಚೆ ಫಲಕಾರಿಯಾಗದೆ ಅಂತಿಮ ನಿರ್ಧಾರಕ್ಕೆ ಬರಲು ಆಗಲಿಲ್ಲ.

ಗುಲ್ಬರ್ಗ ಪ್ರದೇಶ ಬಸವೇಶ್ವರರ ಕಾರ್ಯಕ್ಷೇತ್ರವಾಗಿದ್ದುದರಿಂದ ಈ ವಿಶ್ವವಿದ್ಯಾಲಯಕ್ಕೆ ಬಸವೇಶ್ವರರ ಹೆಸರಿಡಬೇಕು ಎಂದು ಬಸವದಳ, ಈ ಪ್ರದೇಶದಲ್ಲಿ ದಲಿತರು, ಹಿಂದುಳಿದವರು ಹೆಚ್ಚಿನ ಪ್ರಮಾಣದಲ್ಲಿರುವುದರಿಂದ ಡಾ. ಅಂಬೇಡ್ಕರ್ ಹೆಸರಿಡಬೇಕು ಎಂದು ದಲಿತ ಸಂಘಟನೆಗಳ ಮುಖಂಡರು ಹಿಡಿದ ಪಟ್ಟು ಸಡಿಲಿಸದಿದ್ದುದರಿಂದ ಅಂತಿಮ ತೀರ್ಮಾನ ತೆಗೆದುಕೊಳ್ಳಲು ಸಾಧ್ಯವಾಗಲಿಲ್ಲ.

50 ವರ್ಷಗಳ ಹಿಂದೆ

ಮಂಗಳವಾರ, 8-6-1971

- **ಬಾಂಗ್ಲಾ ದೇಶದ ಬಗ್ಗೆ ವಿಶ್ವದ ಗಮನ ಸೆಳೆಯಲು ಸರ್ವ ಯತ್ನ**

ನವದೆಹಲಿ, ಜೂನ್ 7– ಸರ್ಕಾರವು ‘ಪಶ್ಚಿಮ ಪಾಕಿಸ್ತಾನವನ್ನು ಸಂತೈಸುತ್ತಿದೆ’ ಎಂಬ ಆರೋಪವನ್ನು ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿ ಅವರು ಇಂದು ಲೋಕಸಭೆಯಲ್ಲಿ ಅಲ್ಲಗಳೆದರು.

ಪೂರ್ವ ಬಂಗಾಳದ ನಿರಾಶ್ರಿತರಲ್ಲಿ ಕಾಲರಾ ಹಬ್ಬಿರುವ ಬಗೆಗೆ ಬಂದಿದ್ದ ಗಮನ ಸೆಳೆಯುವ ಸೂಚನೆ ಸಂಬಂಧದಲ್ಲಿ ಪ್ರಧಾನಿ ಮಾತನಾಡಿ, ‘ಪ್ರತ್ಯಕ್ಷವಾಗಿಯಾಗಲಿ ಅಥವಾ ಪರೋಕ್ಷವಾಗಿಯಾಗಲಿ ನಾವು ಅವರಿಗೆ (ಪಶ್ಚಿಮ ಪಾಕಿಸ್ತಾನೀಯರಿಗೆ) ಪ್ರೋತ್ಸಾಹ ಕೊಡುತ್ತಿಲ್ಲ ಎಂದರು.

‘ಅಲ್ಲಿನ ನಿಜವಾದ ಸ್ಥಿತಿಗತಿ ಕಡೆಗೆ ವಿಶ್ವದ ಗಮನ ಸೆಳೆಯುವುದರಲ್ಲಿ ನಾವು ಬಹಳ ಕಾರ್ಯನಿರತರಾಗಿದ್ದೇವೆ’ ಎಂದರವರು.

- **ಸಮಗ್ರ ಪ್ರದೇಶ ಅಭಿವೃದ್ಧಿ ಯೋಜನೆ ವ್ಯಾಪ್ತಿಗೆ ತುಂಗಭದ್ರಾ**

ನವದೆಹಲಿ, ಜೂನ್ 7– ಕೇಂದ್ರ ಸರ್ಕಾರ ರೂಪಿಸಿರುವ ಸಮಗ್ರ ಪ್ರಾದೇಶಿಕ ಅಭಿವೃದ್ಧಿ ಯೋಜನೆಯೊಂದನ್ನು ರಾಷ್ಟ್ರದಲ್ಲಿ ಆಯ್ಕೆ ಮಾಡಲ್ಪಟ್ಟ ಹತ್ತು ಭಾರಿ ನೀರಾವರಿ ಪ್ರದೇಶಗಳಲ್ಲಿ ಅನುಷ್ಠಾನಕ್ಕೆ ತರಲಾಗುವುದೆಂದು ಕೃಷಿ ಸ್ಟೇಟ್ ಸಚಿವ ಶೇರ್‌ಸಿಂಗ್ ಅವರು ಇಂದು ಇಲ್ಲಿ ಪತ್ರಕರ್ತರಿಗೆ ತಿಳಿಸಿದರು.

ಈ ಬೃಹತ್ ಯೋಜನೆಗೆ ಆಯ್ಕೆ ಮಾಡಲ್ಪಟ್ಟ ಭಾರಿ ನೀರಾವರಿಯ ಹತ್ತು ಕೇಂದ್ರಗಳಲ್ಲಿ ಮೈಸೂರು ರಾಜ್ಯದ ತುಂಗಭದ್ರಾ ಪ್ರದೇಶವೂ ಒಂದಾಗಿದೆ.

ರಾಜಕೀಯ ಹಿತಾಸಕ್ತಿಯಾಚೆ ನಡೆಯಬೇಕಾಗಿದೆ ಪಾರದರ್ಶಕ ತನಿಖೆ

ಕೊರೊನಾ ಮೂಲ: ಉತ್ತರ ಸಿಕ್ಕೀತೆ?

ಸೀಮೋಲ್ಲಂಘನ

ಸುಧೀಂದ್ರ ಬುಧ್ಯ

ಕೊರೊನಾ ಮೂಲ ಯಾವುದು ಎಂಬ ಪ್ರಶ್ನೆಗೆ ಹದಿನೆಂಟು ತಿಂಗಳು ಕಳೆದರೂ ನಿಖರವಾದ ಉತ್ತರ ದೊರೆತಿಲ್ಲ. ಜಗತ್ತನ್ನು ಆವರಿಸಿಕೊಂಡಿರುವ ಕೊರೊನಾ ವೈರಾಣು ನಿಜಕ್ಕೂ ನೈಸರ್ಗಿಕವಾದದ್ದೇ ಅಥವಾ ಮಾನವ ಸೃಷ್ಟಿಯೇ ಎಂಬ ಪ್ರಶ್ನೆಗೆ ಪುರಾವೆಗಳೊಂದಿಗೆ ಯಾರೂ ಉತ್ತರಿಸುತ್ತಿಲ್ಲ. ಆರಂಭದಲ್ಲಿ ಹತ್ತಾರು ವಿಜ್ಞಾನಿಗಳು, ಇದು ವುಹಾನ್ ಪ್ರಯೋಗಾಲಯದಲ್ಲಿ ಸೃಷ್ಟಿಯಾದದ್ದಲ್ಲ ಎಂದರಾದರೂ ತಮ್ಮ ವಾದವನ್ನು ಅಲ್ಲಗಳೆಯಲು ಸಾಧ್ಯವಾಗದಂತಹ ಪುರಾವೆ ಒದಗಿಸಲಿಲ್ಲ.

ಈಗ ವಿವಿಧ ದೇಶಗಳ ಕೆಲವು ವಿಜ್ಞಾನಿಗಳು ‘ಇದು ಮಾನವ ಸೃಷ್ಟಿಯೇ ಇರಬೇಕು’ ಎಂದು ಚೀನಾದ ವುಹಾನ್ ಪ್ರಯೋಗಾಲಯದತ್ತ ಅನುಮಾನದ ಕಣ್ಣುಗಳಿಂದ ನೋಡುತ್ತಿದ್ದಾರೆ. ಅತ್ತ ಅಮೆರಿಕದಲ್ಲಿ ಸಾಂಕ್ರಾಮಿಕ ರೋಗ ತಜ್ಞ ಡಾ. ಆಂತೋನಿ ಫಾಸಿ, 2020ರ ಜನವರಿಯಿಂದ ಜೂನ್‌ವರೆಗೆ ನಡೆಸಿದ ಇ-ಮೇಲ್ ಸಂವಹನದ ವಿವರಗಳು ಬಹಿರಂಗಗೊಂಡು ಈ ಚರ್ಚೆಗೆ ಮತ್ತಷ್ಟು ಹೂರಣ ಒದಗಿಸಿವೆ.

2020ರ ಜನವರಿಯಲ್ಲಿ ಅಮೆರಿಕದ ಜೈವಿಕ ವಿಜ್ಞಾನ ಸಂಶೋಧನಾ ಕೇಂದ್ರದ ನಿರ್ದೇಶಕರೊಬ್ಬರು ಡಾ. ಫಾಸಿ ಅವರಿಗೆ ಇ-ಮೇಲ್ ಮಾಡಿ, ‘ಕೊರೊನಾ ವೈರಾಣುವಿನ ಅಸಾಮಾನ್ಯ ಚರ್ಯೆ, ಅದು ಸೃಷ್ಟಿಸಲಾಗಿರುವ ವೈರಾಣು ಎನ್ನುವುದನ್ನು ಸೂಚಿಸುತ್ತದೆ’ ಎಂದು ತಿಳಿಸುತ್ತಾರೆ. ಅದಕ್ಕೆ ಡಾ. ಫಾಸಿ, ದೂರವಾಣಿ ಮೂಲಕ ತಮ್ಮನ್ನು ಸಂಪರ್ಕಿಸುತ್ತೇನೆ ಎಂದು ಪ್ರತಿಕ್ರಿಯಿಸುತ್ತಾರೆ. ಮುಂದೇನಾಯಿತು ಆ ವಿವರ ಲಭ್ಯವಿಲ್ಲ. ಡಾ. ಫಾಸಿ ‘ಕೊರೊನಾ ವೈರಸ್ ಚೀನಾದ ಪ್ರಯೋಗಾಲಯದಿಂದ ಬಂದದ್ದಲ್ಲ’ ಎಂದು ಸಾರ್ವಜನಿಕವಾಗಿ ಹೇಳಿದಾಗ, ವುಹಾನ್ ಪ್ರಯೋಗಾಲಯಕ್ಕೆ ಆರ್ಥಿಕ ನೆರವು ನೀಡುತ್ತಿದ್ದ ಸಂಸ್ಥೆಯ ಮುಖ್ಯಸ್ಥರಿಂದ ‘ನಿಮ್ಮ ಧೈರ್ಯವನ್ನು ಮೆಚ್ಚುತ್ತೇನೆ. ಧನ್ಯವಾದಗಳು’ ಎಂಬ ಇ-ಮೇಲ್ ಸಂದೇಶ ಬರುತ್ತದೆ.

2020ರ ಫೆಬ್ರುವರಿ 1ರಂದು ಸ್ಕ್ರಿಪ್ಸ್ ಸಂಶೋಧನಾ ಸಂಸ್ಥೆಯ ಕ್ರಿಸ್ಟಿಯನ್ ಆ್ಯಂಡರ್ಸನ್ ‘ವಿಕಸನ ಸಿದ್ಧಾಂತದ ನಿರೀಕ್ಷೆಗಳಿಗೆ ಹೊಂದಿಕೆಯಾಗದ ಜೀನೋಮ್ ಅನ್ನು ನಾವು ಕೊರೊನಾ ವೈರಾಣುವಿನಲ್ಲಿ ಕಂಡಿದ್ದೇವೆ. ಆದ್ದರಿಂದ ಇದರ ಎಲ್ಲಾ ಅನುಕ್ರಮಗಳನ್ನು ಹತ್ತಿರದಿಂದ ನೋಡುವ ಅಗತ್ಯವಿದೆ’ ಎಂದು ಫಾಸಿ ಅವರಿಗೆ ಬರೆಯುತ್ತಾರೆ. ಇದೇ ಆ್ಯಂಡರ್ಸನ್ ನಂತರ ‘ನೇಚರ್ ಮೆಡಿಸಿನ್’ ಪತ್ರಿಕೆಯಲ್ಲಿ ‘ಕೋವಿಡ್-19 ಸೃಷ್ಟಿಸಿರುವ ವೈರಾಣು ಪ್ರಯೋಗಾಲಯದಿಂದ ಸೋರಿಕೆಯಾದದ್ದಲ್ಲ’ ಎಂದು ಬರೆಯುತ್ತಾರೆ. ಬಿಡಿಬಿಡಿಯಾಗಿ ಕಾಣುವ ಈ ಸಂಗತಿಗಳು ಕೇವಲ ಕೊರೊನಾ ಮೂಲದ ಕುರಿತಷ್ಟೇ ಅಲ್ಲದೆ ಅಮೆರಿಕ- ಚೀನಾ ನಡುವಿನ ಸಖ್ಯದ ಬಗ್ಗೆಯೂ ಪ್ರಶ್ನೆ ಎಬ್ಬಿಸಿವೆ.

ಮೊದಲಿಗೆ, ಕೊರೊನಾದ ಹೊಸ ತಳಿಯ ವೈರಾಣು ಉದ್ಭವಿಸಿದ್ದು ಎಲ್ಲಿ ಎಂಬ ಪ್ರಶ್ನೆಗೆ ಚೀನಾ, ವುಹಾನಿನ ತೇವ ಮಾರುಕಟ್ಟೆಯಿಂದ ಇದು ಬಂದಿರಬೇಕು, ಬಾವಲಿಗಳಿಂದ ಮನುಷ್ಯನಿಗೆ ತಗುಲಿರಬೇಕು, ಶೀತಲೀಕರಿಸಿದ ಆಹಾರ ಪೊಟ್ಟಣಕ್ಕೆ ಅಂಟಿಕೊಂಡ ವೈರಾಣು ಮನುಷ್ಯನ ಒಳಹೊಕ್ಕಿರಬೇಕು ಎಂದಿತ್ತು. ಆದರೆ ಆಧಾರ ನೀಡಲಿಲ್ಲ. ನಂತರ ಮತ್ತೊಂದು ವಾದ ಕೇಳಿಬಂತು. ದಕ್ಷಿಣ ಚೀನಾದ ಯೂನಾನ್ ಗುಹೆಗಳಲ್ಲಿರುವ ಬಾವಲಿಗಳಲ್ಲಿ ಕೊರೊನಾ ರೋಗಕಾರಕಗಳು ಹೆಚ್ಚಾಗಿ ಕಂಡುಬರುತ್ತವೆ. ಈ ರೋಗಕಾರಕಗಳು 1,800 ಕಿ.ಮೀ ದಾಟಿ ಬಂದು ವುಹಾನಿನಲ್ಲಿ ಮೊದಲಿಗೆ ಮನುಷ್ಯನಿಗೆ ತಗುಲಿದವೇ? ವುಹಾನಿನ ಪ್ರಯೋಗಾಲಯದಲ್ಲಿ ಕೊರೊನಾ ವೈರಾಣುಗಳ ಬಗ್ಗೆ ಅಧ್ಯಯನ ನಡೆಯುತ್ತಿತ್ತು. ಇದರ ನೇತೃತ್ವ ವಹಿಸಿರುವ ಶೀ ಝೆಂಗ್ಲೀ 2015ರಲ್ಲಿ ಯೂನಾನ್ ಗುಹೆಗಳಿಗೆ ಭೇಟಿ ಕೊಟ್ಟು ಅಲ್ಲಿಂದ ನೂರಾರು ಬಗೆಯ ಕೊರೊನಾ ವೈರಾಣುಗಳನ್ನು ತಂದು ಅಧ್ಯಯನ ಮಾಡುತ್ತಿದ್ದರು, ಈ ವೇಳೆ ಪ್ರಯೋಗಾಲಯದಿಂದ ವೈರಾಣು ಸೋರಿಕೆಯಾಗಿರಬಹುದು ಎಂಬ ವಾದ ಕೇಳಿಬಂತು. ಆದರೆ ಇದನ್ನು ಆಧಾರರಹಿತ ಪಿತೂರಿ ಸಿದ್ಧಾಂತ ಎಂದು ತಳ್ಳಿಹಾಕಲಾಯಿತು.

ಇದೇ ಹೊತ್ತಿಗೆ, ‘ದಿ ಲ್ಯಾನ್ಸೆಟ್’ ಎಂಬ ಪ್ರತಿಷ್ಠಿತ ಪತ್ರಿಕೆಯಲ್ಲಿ ವಿಜ್ಞಾನಿಗಳ ಹೇಳಿಕೆ ಪ್ರಕಟವಾಯಿತು. ‘ಪ್ರಯೋಗಾಲಯದಿಂದ ಸೋರಿಕೆಯಾಗಿದೆ ಎನ್ನುವ ವಾದದಲ್ಲಿ ಹುರುಳಿಲ್ಲ. ಚೀನಾದ ವಿಜ್ಞಾನಿಗಳು ಮತ್ತು ಆರೋಗ್ಯ ವೃತ್ತಿಪರರೊಂದಿಗೆ ನಾವಿದ್ದೇವೆ’ ಎನ್ನುವ ಹೇಳಿಕೆಗೆ 27 ವಿಜ್ಞಾನಿಗಳು ಸಹಿ ಹಾಕಿದ್ದರು. ಈ ಹೇಳಿಕೆ ಪ್ರಕಟವಾಗಿದ್ದು 2020ರ ಫೆಬ್ರುವರಿ 19ರಂದು. ಕೊರೊನಾ ಮೂಲ ಕುರಿತು ದೊಡ್ಡ ಮಟ್ಟದ ಚರ್ಚೆ, ಅಧ್ಯಯನ ಆರಂಭವಾಗುವ ಮುನ್ನವೇ ಪ್ರತಿಷ್ಠಿತ ಪತ್ರಿಕೆಯಿಂದ ಹೊರಟ ಈ ಹೇಳಿಕೆಗೆ ವಿಜ್ಞಾನ ವಲಯ ಆತುಕೊಂಡಿತು. ಈ ಹೇಳಿಕೆಗೆ ಸಹಿ ಮಾಡಿದ್ದ ಮತ್ತು ಇತರ ವಿಜ್ಞಾನಿಗಳನ್ನು ಸಂಘಟಿಸಿ ಸಹಿ ಪಡೆದಿದ್ದ ಪ್ರಾಣಿಶಾಸ್ತ್ರಜ್ಞ ಪೀಟರ್ ಡಜಾಕ್, ನ್ಯೂಯಾರ್ಕ್ ಮೂಲದ ‘ಎಕೋ ಹೆಲ್ತ್ ಅಲಯನ್ಸ್’ ಸಂಸ್ಥೆಯ ಅಧ್ಯಕ್ಷ ಮತ್ತು ಈ ಸಂಸ್ಥೆ ವುಹಾನ್ ಪ್ರಯೋಗಾಲಯದಲ್ಲಿ ನಡೆಯುತ್ತಿದ್ದ ಕೊರೊನಾ ರೋಗಕಾರಕಗಳ ಕ್ರಿಯಾ ವೃದ್ಧಿ (ಗೈನ್ ಆಫ್ ಫಂಕ್ಷನ್) ಅಧ್ಯಯನಕ್ಕೆ ಆರ್ಥಿಕ ನೆರವು ನೀಡುತ್ತಿದೆ ಎನ್ನುವುದು ಗೌಣವಾಯಿತು.

ಕೆಲವು ತಿಂಗಳುಗಳ ಬಳಿಕ ವಿಶ್ವ ಆರೋಗ್ಯ ಸಂಸ್ಥೆಯು ಕೊರೊನಾ ಮೂಲದ ಬಗ್ಗೆ ತನಿಖೆ ನಡೆಸಿತು. ಆ ತಂಡದಲ್ಲಿ ಪೀಟರ್ ಡಜಾಕ್ ಸ್ಥಾನ ಪಡೆದಿದ್ದರು. ತನಿಖೆಯ ವರದಿಯು ಸಾಧ್ಯಾಸಾಧ್ಯತೆಗಳ ಬಗ್ಗೆ ಹೇಳಿತೇ ಹೊರತು, ಕೋವಿಡ್-19 ರೋಗಕಾರಕದ ಮೂಲದ ಬಗ್ಗೆ ಖಚಿತವಾಗಿ ಹೇಳಲಿಲ್ಲ. ವುಹಾನ್ ಪ್ರಯೋಗಾಲಯದಲ್ಲಿ ನಡೆದಿದ್ದ ಸಂಶೋಧನೆಗೆ ಶೀ ಝೆಂಗ್ಲೀ ಮತ್ತು ತಂಡಕ್ಕೆ ಒಪ್ಪಂದದ ಮೂಲಕ ಈ ಕೆಲಸವನ್ನು ವಹಿಸಿದ್ದು ಪೀಟರ್ ಡಜಾಕ್ ಎಂಬುದು ಗೋಪ್ಯವಾಗಿ ಇರಲಿಲ್ಲ.

ಇನ್ನು, ರೋಗಕಾರಕಗಳ ಕ್ರಿಯಾವೃದ್ಧಿ ಅಧ್ಯಯನದ ಕುರಿತು ಮೊದಲಿನಿಂದಲೂ ಪರ, ವಿರೋಧದ ವಾದ ಇದೆ. ಇಂತಹ ಅಧ್ಯಯನದಲ್ಲಿ ರೋಗಕಾರಕಗಳನ್ನು ಹೆಚ್ಚು ಪ್ರಸರಣಗೊಳ್ಳುವಂತೆ, ವಿಷಪೂರಿತಗೊಳ್ಳುವಂತೆ ಮಾರ್ಪಾಡು ಮಾಡಿ, ಅವು ಹೇಗೆ ಪರಿವರ್ತನೆಗೊಳ್ಳುತ್ತವೆ (ಮ್ಯುಟೇಟ್) ಎಂದು ಅಭ್ಯಾಸ ಮಾಡಲಾಗುತ್ತದೆ. ಒಂದೊಮ್ಮೆ ಅತಿ ವೇಗವಾಗಿ ಪ್ರಸರಣಗೊಳ್ಳುವ ಸೋಂಕು ಮುಂದೆ ಸ್ವಾಭಾವಿಕವಾಗಿ ಕಾಣಿಸಿಕೊಂಡರೆ, ಅದಕ್ಕೆ ಪ್ರತಿಯಾಗಿ ಚುಚ್ಚುಮದ್ದು ತಯಾರಿಸಲು ನಾವು ಸನ್ನದ್ಧಗೊಂಡಿರುತ್ತೇವೆ ಎಂಬುದು ಇದನ್ನು ಬೆಂಬಲಿಸುವವರ ವಾದ. ಆದರೆ ಇದು ತೀರಾ ಅಪಾಯಕಾರಿ ಪ್ರಕ್ರಿಯೆ. ಕೊಂಚ ಎಚ್ಚರ ತಪ್ಪಿದರೂ ಮುಂದೆಂದೋ ಬರಬಹುದಾದ ಸೋಂಕನ್ನು ನಾವೇ ಆಹ್ವಾನಿಸಿಕೊಂಡಂತೆ ಎನ್ನುವುದು ವಿರೋಧಿಸುವವರ ಅಂಬೋಣ. ಹಾಗಾಗಿ ಒಂದು ಹಂತದಲ್ಲಿ ಅಮೆರಿಕ ಈ ಬಗೆಯ ಸಂಶೋಧನೆಯನ್ನು ಉತ್ತೇಜಿಸುವುದಿಲ್ಲ ಎಂದು ನಿರ್ಧರಿಸಿತ್ತು. ಆದರೆ 2015ರಲ್ಲಿ ವುಹಾನ್ ಪ್ರಯೋಗಾಲಯಕ್ಕೆ ಇಂತಹ ಅಧ್ಯಯನ ನಡೆಸಲು ಬರಾಕ್ ಒಬಾಮ ಆರ್ಥಿಕ ನೆರವು ಆರಂಭಿಸಿದ್ದರು ಮತ್ತು ಅದು 2019ರವರೆಗೆ ಮುಂದುವರಿದಿತ್ತು ಎಂದು ಫಾಕ್ಸ್ ಸುದ್ದಿವಾಹಿನಿ ವರದಿ ಮಾಡಿದೆ.

ಈ ಎಲ್ಲಾ ಅಂಶಗಳು ‘ಲ್ಯಾಬ್ ಲೀಕ್’ ಥಿಯರಿಗೆ ಪುಷ್ಟಿ ನೀಡಿವೆ. ಇದೀಗ ಡಾ. ಫಾಸಿ ಮತ್ತು ವಿಶ್ವ ಆರೋಗ್ಯ ಸಂಸ್ಥೆಯ ಮುಖ್ಯಸ್ಥ ಡಾ. ಟೆಡ್ರೋಸ್ ‘ಕೊರೊನಾ ಮೂಲದ ಕುರಿತು ಹೆಚ್ಚಿನ ಅಧ್ಯಯನ ಮತ್ತು ತನಿಖೆಯ ಅಗತ್ಯ ಇದೆ’ ಎಂದು ಅಡ್ಡಗೋಡೆಯ ಮೇಲೆ ಮತ್ತೊಮ್ಮೆ ದೀಪ ಇಟ್ಟಿದ್ದಾರೆ.

ಆದರೆ, ಕೊರೊನಾ ಮೂಲ ಕುರಿತ ಪ್ರಶ್ನೆ ಸುಲಭಕ್ಕೆ ಬಗೆಹರಿಯುವಂತೆ ಕಾಣುತ್ತಿಲ್ಲ. ಜಾಗತಿಕ ಮಟ್ಟದ, ವಿವಿಧ ರಾಷ್ಟ್ರಗಳ ಸಹಭಾಗಿತ್ವದಲ್ಲಿ, ರಾಜಕೀಯ ಹಿತಾಸಕ್ತಿಯಾಚೆ ನಡೆಯುವ ಪಾರದರ್ಶಕ ತನಿಖೆ ಮಾತ್ರ ಕೊರೊನಾದ ಮೂಲವನ್ನು ಕಾಣಿಸಬಹುದು. ಮುಖ್ಯವಾಗಿ ಅಮೆರಿಕ ಮತ್ತು ಚೀನಾವನ್ನು ಹೊರತುಪಡಿಸಿದ ರಾಷ್ಟ್ರವೊಂದು ತನಿಖೆಯ ನೇತೃತ್ವ ವಹಿಸಿಕೊಳ್ಳಬೇಕು ಮತ್ತು ಈ ಎರಡು ದೇಶಗಳು ಅದಕ್ಕೆ ಪ್ರಾಮಾಣಿಕವಾಗಿ ಸಹಕರಿಸಬೇಕು. ಆದರೆ ಅದು ಅಷ್ಟು ಸುಲಭವಾಗಲಾರದು.

ಒಟ್ಟಿನಲ್ಲಿ, ಕೊರೊನಾ ಮೂಲದ ರಹಸ್ಯ ಭೇದಿಸುವ ಅವಶ್ಯಕತೆಯಂತೂ ಇದೆ. ಒಂದೊಮ್ಮೆ ಕೊರೊನಾ ಸೋಂಕು ಬಾವಲಿಗಳಿಂದ ನೇರವಾಗಿ ಅಥವಾ ಮಧ್ಯವರ್ತಿಯ ಮೂಲಕ ಮನುಷ್ಯನಿಗೆ ಬಂದಿದೆ ಎಂಬುದು ಖಚಿತವಾದರೆ, ಮುಂದೆ ಏನೆಲ್ಲಾ ಎಚ್ಚರಿಕೆ ವಹಿಸಬೇಕು ಎಂಬುದು ತಿಳಿಯುತ್ತದೆ. ಪ್ರಯೋಗಾಲಯದಲ್ಲಿ ಅವಘಡವಾಗಿ ಸೋರಿಕೆಯಾಗಿದೆ ಎಂಬುದು ತಿಳಿದರೆ, ಪುನರಾವರ್ತನೆಯಾಗದಂತೆ ನೋಡಿಕೊಳ್ಳಲು ಅನುವಾಗುತ್ತದೆ. ಮನುಷ್ಯನ ಸ್ವಾರ್ಥ, ಯಾವುದೋ ರಾಷ್ಟ್ರದ ಆರ್ಥಿಕ, ರಾಜಕೀಯ ಮಹತ್ವಾಕಾಂಕ್ಷೆ ಇಂತಹ ದುಷ್ಕೃತ್ಯಕ್ಕೆ ಕಾರಣವಾಗಿದ್ದರೆ, ಮನುಷ್ಯನ ನೈತಿಕ ಅಧಃಪತನದ ದರ್ಶನ ಆಗುವುದರ ಜೊತೆಗೆ ನಮ್ಮ ನಾಳೆಗಳು ಹೇಗಿರಬಹುದು ಎಂಬ ಕಲ್ಪನೆ ದೊರೆಯುತ್ತದೆ.

ಚುರುಮುರಿ

ಪರೀಕ್ಷೆ ಸಮಯ

• ಲಿಂಗರಾಜು ಡಿ.ಎಸ್.

‘ಊರುಮ್ಯಾಲೆ ಊರು ಬಿದ್ರೂ ಎಸ್ಸೆಸ್ಸೆಲ್ಸಿ ಪರೀಕ್ಷೆ ಮಾಡದೇಯ ಅಂತ ಸೂರೇಶಣ್ಣ ಅಡರಗಾಲಾಕ್ಯಂಡು ಕೂತದಲ್ಲಾ ಸಾ!’ ಅಂತ ಕೇಳಿದೆ.

‘ಆಚಾರ ಕೆಟ್ರೂ ಆಕಾರ ಕೆಡಬಾರದು ಅಂತ ಈಗ ಎಸ್ಸೆಸ್ಸೆಲ್ಸಿ ಮಕ್ಕಳ ಗ್ಯಾಮಾಳೆ ಅದುಮಿಕ್ಯಂಡು ಕೂತವರೆ! ದೇಸದೇಲಿ ಇನ್ನೂ ಥರಾವರಿ ಪರೀಕ್ಷೆಗಳು ನಡಿತಾ ಅವೆ. ಅವುನ್ನೂ ತಿಳಕಂಡು ಜೆನರಲ್ ನಾಲೆಡ್ಜ್ ಜಾಸ್ತಿ ಮಾಡಿಕ್ಯಳ್ರೋ!’ ಅಂದ್ರು ತುರೇಮಣೆ.

‘ಕೊರೊನಾ ಪರ್ಸೆಂಟೇಜು ಐದಕ್ಕಿಳಿಸಬೇಕು ಅಂತ ಬಿಬಿಎಂಪಿಗೆ ಪರೀಕ್ಸೆ ಕೊಟ್ಟಿರದ ಕಂಡು ಜನ ಕೊರೊನಾ ಪರೀಕ್ಷೆ ಮಾಡಿಸ್ಕಳಕೇ ಹೆದರಿ ವಾಟವೊಡೀತಾವ್ರೆ!’ ಅಂದ್ರು ಯಂಟಪ್ಪಣ್ಣ.

‘ಮೋದಿಗೂ ದೀದಿಗೂ ರಾಜತಂತ್ರದ ಬಡಾಯಿ ಪರೀಕ್ಷೆ ನಡೀತಾ ಅದೆ! ರಾಜಾವುಲಿ ಇನ್ನೊಂದ್ಸಾರಿ ಸಿಎಂ ಪರೀಕ್ಷೆ ಕಟ್ಟಿ ಪಾಸು ಮಾಡಬೇಕು ಅಂತ ಸಿಎಂ ಪದವಿ ಪರೀಕ್ಷಾ ಮಂಡಲಿ ಹೇಳ್ಯದಂತೆ. ಮರಿರಾಜಾವುಲಿ ‘ನಂಗೂ ಏಜಾಗ್ಯದೆ, ಅದ್ಯಕ್ಸರ ಪರೀಕ್ಷೆ ಬರೀತೀನಿ’ ಅಂತ ಅರ್ಜಿ ವಗಾಯ್ತಿರದು ನೋಡಿದ ಕಟೀಲಣ್ಣ ‘ಸೀಟು ಖಾಲಿ ಇಜ್ಜಿ ಮಾರಾಯ! ಆ ಜೋಕ್ಲಿಗೆ ಯಂತ ಗೊತ್ತಾಪುಂಡು!’ ಅಂತ ನಷ್ಪೋತ್ತರ ಹಾಡ್ತಾವ್ರಂತೆ! ಡಿಕೆ, ಹುಲಿಯಾ, ಕುಮಾರಣ್ಣ ಸಿಎಂ ಎಂಟ್ರೆನ್ಸ್ ಟೆಸ್ಟೇಲಿ ಪಸ್ಟು ಬರಬೇಕು ಅಂತ ಕಾಪಿಚೀಟಿ ಬರಕಂದು ಕೂತವ್ರೆ. ಯತ್ನಾಳಣ್ಣ ಬಿಜೆಪಿ ಹಾಲ್‌ಟಿಕೇಟ ಹರಿದಾಕಿ ಕೂತದೆ! ಅಡಗೂರು ಇಸ್ವಣ್ಣ ‘ನನಗೇನು ಏಜ್‌ಬಾರಾಗಿಲ್ಲ, ಗಾಂಧಿ ಪಾಸ್ ಮಾಡಿ ಮಂತ್ರಿ ಮಾಡಿ’ ಅಂತ ಮುಲುಕ್ತಾ ಅದೆ!’ ಅಂದ್ರು.

ನಾನು ಮಧ್ಯ ಬಾಯಿ ಹಾಕಿ ‘ಸಾ, ಇವೆಲ್ಲಾ ಕಾಲು-ಬಾಯಿ ಜ್ವರ ಅಲ್ಲುವುರಾ?’ ಕೇಳಿದೆ.

‘ಆಯ್ತು ಕನಪ್ಪಾ ಸರದಾರ, ಇದರಗೆಲ್ಲಾ ನಿಜವಾದ ಪರೀಕ್ಸೆ ಯಾರಿಗೆ?’ ಅಂತು ಯಂಟಪ್ಪಣ್ಣ.

‘ಯಂಟಪ್ಪಣ್ಣ, 365 ದಿನವೂ ಒಂದಲ್ಲಾ ಒಂದು ಪರೀಕ್ಸೆ ಸತ್ರ ಜೆಗಳಿಗೇ ಅಲ್ಲುವರಾ? ಅದೇಟು ಪಡಿಪಾಟಲು ಬಿದ್ರೂ ಅವರೇ ಪೇಲಾಗದು!’ ಕುರಿತೇಟಾದ ಮಾತು ಕೇಳಿ ತಲೆ ತಿಪುರಚಂಡಾಗೋಯ್ತು!

ಚರ್ಚೆ

ಪ್ರತಿಭೆಗಳು ಬೇಕು, ಹಾಗಾಗಿ ಪರೀಕ್ಷೆಯೂ

ವಿದ್ಯಾರ್ಥಿಗಳ ಅಭ್ಯುದಯಕ್ಕಾಗಿ ವ್ಯವಸ್ಥೆಯು ಪರೀಕ್ಷೆಯ ಪರವಾದ ಧೋರಣೆಯನ್ನು ತಳೆಯಬೇಕಾದ ಅಗತ್ಯವಿದೆ

• ಎನ್.ಎಂ.ಬಿರಾದಾರ

ಹಿಂದಿನ ವರ್ಷ ಐಸಿಎಸ್‌ಇ ಪರೀಕ್ಷೆಯಲ್ಲಿ ಎರಡು ಪತ್ರಿಕೆಗಳ ಪರೀಕ್ಷೆಯನ್ನು ರದ್ದುಪಡಿಸಿ ಆಂತರಿಕ ಮೌಲ್ಯಮಾಪನದ ಆಧಾರದಲ್ಲಿ ಉತ್ತೀರ್ಣಗೊಳಿಸಿದ್ದರಿಂದ, ನನ್ನ ಮಗಳು ಎಸ್‌ಎಸ್‌ಎಲ್‌ಸಿ ಉತ್ತೀರ್ಣಳಾದರೂ ಆಕೆಯಲ್ಲಿ ಹುಟ್ಟಿಕೊಂಡ ಕೀಳರಿಮೆ ಅನುಭವಕ್ಕೆ ಬಂದಿದೆ. ಪರೀಕ್ಷೆ ಇಲ್ಲದೆ ಉತ್ತೀರ್ಣರಾದಾಗ ಕೆಲವು ಪ್ರತಿಭಾವಂತ ವಿದ್ಯಾರ್ಥಿಗಳಲ್ಲಿ ಕೀಳರಿಮೆ ಬೆಳೆಯುತ್ತದೆ. ಏಕೆಂದರೆ ತಾನು ಏನು ಎಂಬುದನ್ನು ಸಾಬೀತುಪಡಿಸಿಕೊಳ್ಳಲು ಮತ್ತು ಸಾಬೀತು ಮಾಡಲು ಅವರಿಗೆ ಅವಕಾಶವೇ ಸಿಕ್ಕಿರುವುದಿಲ್ಲ. ರಾಷ್ಟ್ರದ ವಿಕಾಸಕ್ಕೆ ಪ್ರತಿಭಾವಂತರು ಬೇಕೇಬೇಕು. ಆದ್ದರಿಂದ ಪರೀಕ್ಷೆಯೂ ಬೇಕು.

ಪಬ್ಲಿಕ್ ಪರೀಕ್ಷೆ ಎನ್ನುವುದು ಒಂದು ಕಲಿಕಾ ಅನುಭವವಾಗಿರುತ್ತದೆ. ನಿಗದಿತ ಸಮಯದಲ್ಲಿ, ನಿಗದಿತ ವಿಚಾರವನ್ನು ವ್ಯವಸ್ಥಿತವಾಗಿ ಬರೆಯುವ ಅನುಭವವು ಪರೀಕ್ಷೆಯಲ್ಲೇ ದೊರಕುವುದು. ಪರೀಕ್ಷೆಯನ್ನು ಎದುರಿಸದೆ ಮುಂದಿನ ಹಂತಕ್ಕೆ ಹೋಗುವ ವಿದ್ಯಾರ್ಥಿಗಳಿಗೆ ಅವರ ವಿಕಾಸಕ್ಕೆ ಪೂರಕವಾದ ಈ ಅನುಭವ ದೊರಕುವುದಿಲ್ಲ. ಅಧ್ಯಯನ ಮಾಡಿದ ವಿಷಯಗಳಲ್ಲಿ ಪರೀಕ್ಷೆಯಲ್ಲಿ ಪ್ರಮಾಣೀಕೃತ ಪ್ರಶ್ನೆಗಳಿಗೆ ಉತ್ತರಿಸುವ ಮೂಲಕವೇ ಸ್ಪಷ್ಟವಾಗುವಂತಹವು ಇರುತ್ತವೆ. ಪರೀಕ್ಷೆ ಬರೆಯದಿದ್ದರೆ ಈ ಗೊಂದಲಗಳು ಹಾಗೆಯೇ ಉಳಿದುಕೊಳ್ಳುತ್ತವೆ.

ಪಬ್ಲಿಕ್ ಪರೀಕ್ಷೆ ಇಲ್ಲದೆ ಉತ್ತೀರ್ಣಗೊಳಿಸುವುದು ವಿದ್ಯಾರ್ಥಿಯ ಕಲಿಕಾ ವರ್ಷವನ್ನು ಹಾಳುಗೆಡಹುವುದಿಲ್ಲ ಎಂಬುದು ನಿಜ. ಆದರೆ ಪರೀಕ್ಷೆಯ ಮೂಲಕ ತೋರಿಸುವ ನೈಜ ಪ್ರತಿಭೆಗೆ ಅವಕಾಶ ಇಲ್ಲವಾಗುತ್ತದೆ. ಮುಂದಿನ ದಿನಗಳಲ್ಲಿ ಅದು, ಪರೀಕ್ಷೆ ಬರೆದು ಉತ್ತೀರ್ಣರಾದವರು- ಪರೀಕ್ಷೆ ಬರೆಯದೆ ಉತ್ತೀರ್ಣರಾದವರು ಎಂಬ ಎರಡು ವರ್ಗಗಳನ್ನು ಸೃಷ್ಟಿಸಿ, ತಾರತಮ್ಯ ಮತ್ತು ಕೀಳರಿಮೆಗೆ ಕಾರಣವಾಗಲಿದೆ. ಅಲ್ಲದೆ, ಕೆಲವು ಸರ್ಕಾರಿ ಮತ್ತು ಅರೆ ಸರ್ಕಾರಿ ನೇಮಕಾತಿಗಳು ಪಿಯು ಪರೀಕ್ಷೆಯ ಅಂಕಗಳನ್ನು ಆಧರಿಸಿರುತ್ತವೆ. ಪರೀಕ್ಷೆ ಇಲ್ಲದೆ ಉತ್ತೀರ್ಣರಾದಾಗ ಈ ನೇಮಕಾತಿಗಳಿಗೆ ಯಾವ ಆಧಾರವನ್ನು ಪರಿಗಣಿಸಬೇಕು ಎಂಬ ಸಮಸ್ಯೆ ಎದುರಾಗಲಿದೆ.

ಪರೀಕ್ಷೆಗಾಗಿ ಮಾಡಿದ ಅಧ್ಯಯನವು ವೃತ್ತಿಪರ ಪ್ರವೇಶ ಪರೀಕ್ಷೆಗಳಿಗೆ ಪೂರಕವಾಗಿರುತ್ತದೆ. ಪರೀಕ್ಷೆ ಇಲ್ಲವಾದಾಗ ವಿದ್ಯಾರ್ಥಿಗಳಲ್ಲಿ ಸಹಜವಾಗಿ ಕುಸಿಯುವ ಅಧ್ಯಯನಶೀಲತೆಯು ಪ್ರವೇಶ ಪರೀಕ್ಷೆಗಳ ಮೇಲೂ ನಕಾರಾತ್ಮಕ ಪರಿಣಾಮವನ್ನು ಉಂಟುಮಾಡುತ್ತದೆ. ಈ ರೀತಿಯ ಪ್ರವೇಶ ಪರೀಕ್ಷೆಯು ರಾಷ್ಟ್ರೀಯ ಮಟ್ಟದ್ದಾದಾಗ ಅಕಡೆಮಿಕ್ ಪರೀಕ್ಷೆಗಳು ನಡೆದ ರಾಜ್ಯಗಳ ವಿದ್ಯಾರ್ಥಿಗಳ ಮುಂದೆ ಅಕಡೆಮಿಕ್ ಪರೀಕ್ಷೆಗಳು ನಡೆಯದ ರಾಜ್ಯಗಳ ವಿದ್ಯಾರ್ಥಿಗಳು ಹಿನ್ನಡೆಯನ್ನು ಅನುಭವಿಸಬೇಕಾಗುತ್ತದೆ.

ಪರೀಕ್ಷೆಯಲ್ಲಿ ಪಡೆದ ಅಂಕಗಳ ಆಧಾರ ಇಲ್ಲವಾದಾಗ, ವೃತ್ತಿಪರ ಕೋರ್ಸುಗಳಲ್ಲಿ ಸೀಟುಗಳು ಬಹು ಸುಲಭವಾಗಿ ಹಣ ಇದ್ದವರ ಪಾಲಾಗಿಬಿಡುತ್ತವೆ. ಬಹಳಷ್ಟು ವಿದ್ಯಾರ್ಥಿಗಳು ತಮ್ಮ ಮುಂದಿನ ಕೋರ್ಸುಗಳ ಆಯ್ಕೆಯನ್ನು ಪಬ್ಲಿಕ್ ಪರೀಕ್ಷೆಯಲ್ಲಿ ಪಡೆದ ಅಂಕಗಳ ಆಧಾರದಲ್ಲಿ ಮಾಡಿಕೊಳ್ಳುತ್ತಾರೆ. ಪರೀಕ್ಷೆಯೇ ಇಲ್ಲದಿದ್ದರೆ ಆಯ್ಕೆಯ ಈ ಮಾನದಂಡವು ಇಲ್ಲವಾಗುತ್ತದೆ.

ಪರೀಕ್ಷೆಯೇ ಕಲಿಕೆಯ ನಿರ್ಧಾರಕ ಅಲ್ಲ. ಆದರೆ ಸ್ಥಾಪಿತ ವ್ಯವಸ್ಥೆಯಲ್ಲಿ ವಿದ್ಯಾರ್ಥಿಗಳ ಅಧ್ಯಯನ ಶೀಲತೆಯು ಪರೀಕ್ಷೆಯನ್ನು ಅವಲಂಬಿಸಿದೆ. ಪರೀಕ್ಷೆಯೇ ಇಲ್ಲವೆಂದಾಗ ಅಧ್ಯಯನದ ಆಸಕ್ತಿಯೂ ಕುಸಿಯುತ್ತದೆ. ಪರೀಕ್ಷೆಯು ವಿದ್ಯಾರ್ಥಿಗಳ ಅಧ್ಯಯನ ಮತ್ತು ವ್ಯಕ್ತಿತ್ವದ ವಿಕಾಸದಲ್ಲಿ ಶಿಸ್ತನ್ನು ತರುವ ಸಾಧನವಾಗಿದೆ. ಅಷ್ಟೇ ಅಲ್ಲದೆ ಉಪನ್ಯಾಸಕರು ವಹಿಸಿದ ಶ್ರಮಕ್ಕೆ ಗೌರವ ಸಲ್ಲಬೇಕಾದರೆ ವಿದ್ಯಾರ್ಥಿಗಳು ಪರೀಕ್ಷೆಯ ಮುಖಾಂತರ ಉತ್ತೀರ್ಣರಾಗಬೇಕು.

ಆದರ್ಶಗಳು ಏನೇ ಇದ್ದರೂ ವ್ಯಾವಹಾರಿಕ ಬದುಕು ಜಗತ್ತಿನಾದ್ಯಂತ ಸ್ಪರ್ಧಾತ್ಮಕತೆಯನ್ನು ಅವಲಂಬಿಸಿದೆ. ಹಾಗಿರುವಾಗ, ನಾವು ಹೇಳುವ ಆದರ್ಶಗಳೇ ಜಗತ್ತಿನ ಧೋರಣೆಯಾಗುವತನಕ ಸ್ಪರ್ಧಾತ್ಮಕವಾಗಿ ವಿಕಾಸಗೊಳ್ಳಲು ನಮ್ಮ ಮಕ್ಕಳಿಗೆ ಇರುವ ಅವಕಾಶವನ್ನು ನಿರಾಕರಿಸುವುದು ಸರಿಯಲ್ಲ. ಆದ್ದರಿಂದ ಪರೀಕ್ಷೆ ನಡೆಯಬೇಕು.

ಹಾಗಿದ್ದರೆ ಪರೀಕ್ಷೆಯೇ ಮುಖ್ಯವೇ ಎಂದು ಕೇಳಬಹುದು. ಒಂದು ಕ್ಷಣಕ್ಕೆ ಈ ವಾದವನ್ನು ಒಪ್ಪಿಕೊಳ್ಳೋಣ. ಪರೀಕ್ಷೆ ಮುಖ್ಯ ಅಲ್ಲ ಎನ್ನುವ ಹಾಗಿಲ್ಲ. ಕೊರೊನಾ ಇಲ್ಲದ ಸಮಯದಲ್ಲಿ ಕೋಟ್ಯಂತರ ರೂಪಾಯಿ ಖರ್ಚು ಮಾಡಿಕೊಂಡು, ಅಷ್ಟೆಲ್ಲ ಸಿಬ್ಬಂದಿ ಸಂಯೋಜನೆ ಮಾಡಿಕೊಂಡು ಪರೀಕ್ಷೆಯನ್ನು ನಡೆಸುವುದೇಕೆ? ಅಂದರೆ ಪರೀಕ್ಷೆ ಮುಖ್ಯವೆಂದೇ ಆಯಿತು.

ಪರೀಕ್ಷೆ ಮುಖ್ಯವೇ, ಜೀವ ಮುಖ್ಯವೇ ಎಂದು ಕೇಳಿದಾಗ, ಜೀವವೇ ಮುಖ್ಯ ಎನ್ನುವುದರ ಬಗ್ಗೆ ವಿವಾದವಿಲ್ಲ. ಆದರೆ ಪರೀಕ್ಷೆ ಮಾಡಿದರೆ ಜೀವ ಉಳಿಯುವುದಿಲ್ಲ ಎಂಬ ಭಾವನೆಯೇ ತಪ್ಪು. ಜೀವ ಉಳಿಯುವ ಹಾಗೆ ಪರೀಕ್ಷೆಯನ್ನು ಹೇಗೆ ಮಾಡಬೇಕು ಎಂಬುದನ್ನು ಕಂಡುಕೊಳ್ಳಬೇಕು. ಪರೀಕ್ಷೆಯಲ್ಲಿ ಪಾಲ್ಗೊಳ್ಳುವ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳಿಗೆ ಲಸಿಕೆ ಹಾಕಿಸಿ, ಪರೀಕ್ಷಾ ಕೇಂದ್ರಗಳ ಸಂಖ್ಯೆಯನ್ನು ಹೆಚ್ಚಿಸಿ, ದೈಹಿಕ ಅಂತರವನ್ನು ಕಾಪಾಡಿಕೊಳ್ಳುವಂತೆ ನೋಡಿಕೊಂಡು ಪರೀಕ್ಷೆ ನಡೆಸಬೇಕು.

ವಿದ್ಯಾರ್ಥಿಗಳಿಗಾಗಿ ಪ್ರತ್ಯೇಕ ಬಸ್ ವ್ಯವಸ್ಥೆ ಮಾಡಬೇಕು. ತಾಲ್ಲೂಕು ಮಟ್ಟದಲ್ಲಿ ಮೌಲ್ಯಮಾಪನ ಕೇಂದ್ರಗಳನ್ನು ತೆರೆದು, ಸುರಕ್ಷತಾ ಕ್ರಮಗಳನ್ನು ತೆಗೆದುಕೊಂಡು ಮೌಲ್ಯಮಾಪನ ಕಾರ್ಯ ಕೈಗೊಳ್ಳಬೇಕು. ಆದರೆ ವಿದ್ಯಾರ್ಥಿಗಳ ಅಭ್ಯುದಯಕ್ಕಾಗಿ ಪರೀಕ್ಷೆಯ ಪರವಾದ ಧೋರಣೆಯನ್ನು ವ್ಯವಸ್ಥೆ ತಳೆಯಬೇಕಾದ ಅಗತ್ಯವಿದೆ.

ವಾಚಕರ ವಾಣಿ

ಅಂದು- ಇಂದು

ಅಂದು ಐಎಎಸ್ ಪದಾಧಿಕಾರಿಗಳ ಸಭೆಯಲ್ಲಿ ಅಧ್ಯಕ್ಷರ ಉವಾಚ: ‘ರೀ, ಗೌರವಾನ್ವಿತ ಸದಸ್ಯರೇ, ಸ್ವಲ್ಪ ನೋಡಿ ಮಾತನಾಡಿ. ಬಾಯಿಗೆ ಬಂದ ಹಾಗೆ ಮಾತನಾಡಿ ಕಚ್ಚಾಡ್ಲಿಕ್ಕೆ ಇದು ಗ್ರೂಪ್ ಡಿ ನೌಕರರ ಮೀಟಿಂಗ್ ಅಲ್ಲ, ಐಎಎಸ್ ಅಧಿಕಾರಿಗಳದ್ದು’.

ಇಂದು ಗ್ರೂಪ್ ಡಿ ನೌಕರರ ಸಭೆಯಲ್ಲಿ ಅಧ್ಯಕ್ಷರ ಉವಾಚ: ‘ರೀ ಗೌರವಾನ್ವಿತ ಸದಸ್ಯರೇ, ಸ್ವಲ್ಪ ನೋಡಿ ಮಾತನಾಡಿ, ಬಾಯಿಗೆ ಬಂದ ಹಾಗೆ ಮಾತನಾಡಿ ಕಚ್ಚಾಡ್ಲಿಕ್ಕೆ, ಇದು ಐಎಎಸ್ ಅಧಿಕಾರಿಗಳ ಮೀಟಿಂಗ್ ಅಲ್ಲ, ಗ್ರೂಪ್ ಡಿ ನೌಕರರದ್ದು’.

ಗಣಪತಿ ನಾಯ್ಕ್, ಕಾನಗೋಡ

ಜಗತ್ತಿನ ಎಲ್ಲ ಭಾಷೆಗಳೂ ಶ್ರೇಷ್ಠ

ಗೂಗಲ್ ಹುಡುಕುವಿಧಾನದಲ್ಲಿ ಕನ್ನಡವು ದೇಶದ ಅತ್ಯಂತ ಕೊಳಕು ಭಾಷೆ ಎಂದು ನಮೂದಿಸಿದ್ದ ಕುರಿತು ಬಹಳಷ್ಟು ಪ್ರತಿಕ್ರಿಯೆ ಬಂದದ್ದರಿಂದ, ಗೂಗಲ್ ಅದಕ್ಕೆ ಕೂಡಲೇ ಪ್ರತಿಕ್ರಿಯಿಸಿದ್ದು ಒಂದು ರೀತಿ ಒಳ್ಳೆಯದೇ ಆಯಿತು. ತಮ್ಮ ಭಾಷೆಯನ್ನು ಕೊಳಕು ಎಂದು ಕರೆದರೆ ಆ ಭಾಷೆಯ ಜನರಿಗೆ ನೋವಾಗುವುದು ಸಹಜವೇ. ವಾಸ್ತವವಾಗಿ ಪ್ರೊ. ಬರಗೂರು ರಾಮಚಂದ್ರಪ್ಪ ಅವರು ಹೇಳಿದ ಹಾಗೆ, ಯಾವುದೇ ಭಾಷೆಯನ್ನು ಅಸುಂದರ, ಕೊಳಕು ಎಂದೆಲ್ಲ ವಿಭಾಗಿಸುವುದೇ ಅವೈಜ್ಞಾನಿಕ. ಒಂದು ಭಾಷೆಯನ್ನು ಈ ರೀತಿಯಲ್ಲಿ ಮೌಲ್ಯಮಾಪನ ಮಾಡಲು ಯಾವುದೇ ಮಾನ್ಯ ಮಾನದಂಡಗಳಿಲ್ಲ. ಜಗತ್ತಿನ ಎಲ್ಲ ಭಾಷೆಗಳೂ ಶ್ರೇಷ್ಠವೆ.

ರಾಜ್ಯದಲ್ಲಿ ಬರೀ 165 ಜನ ಮಾತನಾಡುವ ವರ್ಲಿ ಅಥವಾ ಬರೀ 470 ಜನ ಮಾತನಾಡುವ ಚೆಂಚು ಎಂಬ ಭಾಷೆಗಳೂ ಶ್ರೇಷ್ಠವಾದವೆ. ಏಕೆಂದರೆ ಅದನ್ನು ಮಾತನಾಡುವ ಜನಸಮುದಾಯದ ಅಗತ್ಯಗಳನ್ನು ಪೂರೈಸುವುದೇ ಭಾಷೆಯ ಕಾರ್ಯ. ಅದನ್ನು ಅವು ಸಮರ್ಥವಾಗಿಯೇ ಮಾಡುತ್ತಿವೆ. ಇನ್ನು, ವಿನೋಬಾ ಭಾವೆಯವರು ಕನ್ನಡದ ಅಕ್ಷರಗಳನ್ನು ‘ಜಗತ್ತಿನ ಲಿಪಿಗಳ ರಾಣಿ’ ಎಂದು ಹೇಳಿದ್ದೂ ಅಭಿಮಾನದ ಹೊಗಳಿಕೆಯಷ್ಟೆ. ಎಲ್ಲ ಭಾರತೀಯ ಭಾಷೆಗಳ ಲಿಪಿಗಳೂ ಕನ್ನಡದ ಹಾಗೆಯೇ ಧ್ವನಿಲಿಪಿಗಳೇ. ಅರೇಬಿಕ್ ಲಿಪಿಯೂ ಆ ಭಾಷೆಯವರ ಬರಹದ ಅಗತ್ಯವನ್ನು ಪೂರೈಸುವುದರಿಂದ ಅದೂ ಶ್ರೇಷ್ಠವೇ. ಉಳಿದವರಿಗೆ ಅದು ಹೇಗೆ ಕಾಣುತ್ತದೆ, ಅನ್ಯಭಾಷೀಯರು ಕಲಿಯುವುದು ಸುಲಭವೇ ಕಷ್ಟವೇ ಎನ್ನುವ ನೆಲೆಯಲ್ಲಿ ಯಾವುದೇ ಭಾಷೆಯನ್ನು ಸುಂದರ ಅಥವಾ ಕೊಳಕು ಎನ್ನುವುದು ಖಂಡಿತವಾಗಿಯೂ ಅವೈಜ್ಞಾನಿಕ. ನಾವು ಈ ಗೊಂದಲದಲ್ಲಿ ಬೀಳುವುದು ಅನಗತ್ಯ.

ಪ್ರೊ. ಎಂ.ಅಬ್ದುಲ್ ರೆಹಮಾನ್ ಪಾಷ, ಬೆಂಗಳೂರು

ಪುಸ್ತಕ ಪಡೆಯಲು ಇರಲಿ ಅವಕಾಶ

ಮುಂಬರುವ ದಿನಗಳಲ್ಲಿ ಪೊಲೀಸ್ ಕಾನ್‌ಸ್ಟೆಬಲ್‌ನಂತಹ ಸ್ಪರ್ಧಾತ್ಮಕ ಪರೀಕ್ಷೆಗಳು ನಡೆಯಲಿವೆ. ಹೀಗಾಗಿ, ವಿದ್ಯಾರ್ಥಿಗಳಾದ ನಾವು ಈಗಿರುವ ಸಮಯಾವಕಾಶವನ್ನು ಬಳಸಿಕೊಂಡು ತಯಾರಿ ನಡೆಸಲು ಪುಸ್ತಕಗಳು ಹೆಚ್ಚು ಉಪಯುಕ್ತ. ಜೊತೆಗೆ ಕೊರೊನಾ ಕಾರಣದಿಂದ ಹೆಚ್ಚಾಗಿ ಹೊರಗೆ ಹೋಗದೆ ಮನೆಗಳಲ್ಲೇ ಉಳಿದಿರುವುದರಿಂದ, ಇತರ ಪುಸ್ತಕಗಳನ್ನು ಓದಲು ಸಹ ಸಮಯಾವಕಾಶ ದೊರೆತಿದೆ. ಹೀಗಾಗಿ ಲಾಕ್‌ಡೌನ್ ನಿಯಮಾನುಸಾರ ಪುಸ್ತಕಗಳನ್ನು ಕೊಳ್ಳಲು ಅವಕಾಶ ಮಾಡಿಕೊಡುವುದು ಸೂಕ್ತ.

ಜಗದೀಶ್ ಭಟ್, ನರಸಿಂಹರಾಜಪುರ

ಪ್ರಜಾಪ್ರಭುತ್ವದಲ್ಲಿ ಪ್ರಜೆಗಳೇ ಹೈಕಮಾಂಡ್

‘ಪಕ್ಷದ ಹೈಕಮಾಂಡ್ ಸೂಚಿಸಿದರೆ ತಕ್ಷಣ ರಾಜೀನಾಮೆ ನೀಡುತ್ತೇನೆ’ ಎಂದು ನಾಯಕತ್ವ ಬದಲಾವಣೆ ಕುರಿತು ಮುಖ್ಯಮಂತ್ರಿ ಹೇಳಿದ್ದಾರೆ (ಪ್ರ.ವಾ., ಜೂನ್ 7). ಈ ಹೈಕಮಾಂಡ್ ಸಂಸ್ಕೃತಿಯು ಕಾಂಗ್ರೆಸ್ ಪಕ್ಷದ ಕಾರ್ಯಾಚರಣೆಯ ವಿಧಾನವನ್ನು ವಿವರಿಸಲು ಇಲ್ಲಿಯವರೆಗೆ ಬಳಸಲಾಗುತ್ತಿದ್ದ ಪದ. ಇಂದು ಬಿಜೆಪಿ ಕೂಡ ಇದಕ್ಕೆ ಹೊರತಾಗಿಲ್ಲ.

ರಾಷ್ಟ್ರೀಯ ಪಕ್ಷಗಳು ತಮ್ಮ ಪ್ರಾದೇಶಿಕ ಮುಖ್ಯಸ್ಥರು ಏನು ಮಾಡಬೇಕೆಂದು ಸೂಚಿಸುವ ಕಮಾಂಡಿಂಗ್ ವ್ಯವಸ್ಥೆಯು ಜನರಿಂದ ಚುನಾಯಿತನಾದ ಒಬ್ಬ ನಾಯಕನಿಗೆ ಸ್ವಂತ ಅಭಿಪ್ರಾಯ ಮತ್ತು ಸ್ಥಳೀಯ ಮಟ್ಟದಲ್ಲಿ ನಿರ್ಧಾರಗಳನ್ನು ತೆಗೆದುಕೊಳ್ಳಲು ಅನುಮತಿಸುವುದಿಲ್ಲ. ಪ್ರಜಾಪ್ರಭುತ್ವದಲ್ಲಿ ಪ್ರಜೆಗಳೇ ಹೈಕಮಾಂಡ್. ಇದು ಚುನಾವಣೆ ಪೂರ್ವದಲ್ಲಿ ಅನುಸರಿಸಲು ಮಾತ್ರ ಸೀಮಿತವಾಗಿದೆ. ಒಬ್ಬ ನಾಯಕ ಅಥವಾ ಆಯ್ದ ಕೆಲವರು ಎಲ್ಲಾ ರಾಜಕೀಯ ಮತ್ತು ಆಡಳಿತಾತ್ಮಕ ನಿರ್ಧಾರಗಳನ್ನೂ ತೆಗೆದುಕೊಳ್ಳುವ ಹೈಕಮಾಂಡ್ ಆಗಿರುತ್ತಾರೆ ಎಂಬುದು ಪ್ರಜಾಪ್ರಭುತ್ವಕ್ಕೆ ಅಂಟಿದ ಶಾಪ.

ಪ್ರವೀಣ ನಾಗಪ್ಪ ಯಲವಿಗಿ, ಹಾವೇರಿ

ಭಾವಚಿತ್ರ ಬಳಸುವುದೇ ‘ಪ್ರತಿಷ್ಠೆಯ ಕಣ’ವಾದರೆ...

ಪಶ್ಚಿಮ ಬಂಗಾಳದಲ್ಲಿ ಲಸಿಕೆ ಪಡೆದುಕೊಂಡ 18ರಿಂದ 44 ವರ್ಷ ವಯೋಮಾನದವರಿಗೆ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ಭಾವಚಿತ್ರವಿರುವ ಪ್ರಮಾಣಪತ್ರವನ್ನು ನೀಡಲಾಗುತ್ತಿದೆ (ಪ್ರ.ವಾ., ಜೂನ್ 6). ಇನ್ನು ಸದ್ಯಕ್ಕೆ ದೇಶದ ಉಳಿದವರಿಗೆ ಪ್ರಧಾನಿಯವರ ಭಾವಚಿತ್ರವಿರುವ ಪ್ರಮಾಣಪತ್ರ ಸಿಗುತ್ತಿದೆ. ಪಕ್ಷಗಳು ಯಾವುದೇ ಆಗಿರಲಿ ತಾವು ಆಡಳಿತ ನಡೆಸುವಾಗ ಸರ್ಕಾರದ ಜಾಹೀರಾತುಗಳಲ್ಲಿ ಜನಪ್ರತಿನಿಧಿಗಳ ಭಾವಚಿತ್ರ ಬಳಸುವ ಕ್ರಮ ಹೊಸತೇನೂ ಅಲ್ಲ. ಆದರೆ, ಭಾವಚಿತ್ರ ಬಳಸುವುದೇ ‘ಪ್ರತಿಷ್ಠೆಯ ಕಣ’ವಾದರೆ ಸರ್ಕಾರದ ಖರ್ಚಿನಲ್ಲಾಗುವ ಇಂಥ ಪ್ರಚಾರವನ್ನು ಮುಂದುವರಿಸುವುದು ಸರಿಯೇ?

ಜನರಲ್ಲಿ ರಾಜಕೀಯ ಪ್ರಜ್ಞೆಯು ಹೆಚ್ಚುತ್ತಿರುವಾಗ ಇಂಥ ಭಾವಚಿತ್ರಗಳು ಕೂಡ ಪ್ರಸ್ತುತವಾಗಿ ಉಳಿಯುವುದಿಲ್ಲ. ಅಷ್ಟಕ್ಕೂ ಜನರಿಗೆ ಲಸಿಕೆಯಿಂದ ಹೆಚ್ಚು ಪ್ರಯೋಜನವೇ ಹೊರತು ನಾಯಕರ ಭಾವಚಿತ್ರಗಳಿಂದಲ್ಲ. ಶತಮಾನಗಳಿಂದ ವಿಜ್ಞಾನ-ತಂತ್ರಜ್ಞಾನದ ಬೆಳವಣಿಗೆಗೆ ವಿಜ್ಞಾನಿಗಳು ವಿಶ್ವಕ್ಕೆ ನೀಡಿದ ಕೊಡುಗೆಯ ಪ್ರಯೋಜನ ಪಡೆಯುತ್ತಿದ್ದೇವೆ. ಅಂಥ ವಿಜ್ಞಾನಿಗಳನ್ನು ದಿನನಿತ್ಯ ನೆನೆಯುವುದೇ ಇಲ್ಲ. ಲಸಿಕೆಯ ಆವಿಷ್ಕಾರದ ಹಿಂದೆ ಕೂಡ ಅಂಥವರ ನಿಸ್ವಾರ್ಥ ಸೇವೆ ಇದೆ ಅಲ್ಲವೇ?

ಡಾ. ಜಿ.ಬೈರೇಗೌಡ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ದಿನ ದಿನವೂ ಏರುತ್ತಲೇ ಇರುವ ಪೆಟ್ರೋಲ್ ಮತ್ತು ಡೀಸೆಲ್ ದರವು ಜನರನ್ನು ಹೈರಾಣಾಗಿಸಿದೆ. ಕರ್ನಾಟಕವೂ ಸೇರಿ ಹಲವು ರಾಜ್ಯಗಳಲ್ಲಿ ಲೀಟರ್ ಪೆಟ್ರೋಲ್ ದರವು ₹100ರ ಗಡಿ ದಾಟಿದೆ. ತೈಲೋತ್ಪನ್ನಗಳ ಬೆಲೆ ಏರಿಕೆಯು ಜನ ಜೀವನದ ಎಲ್ಲ ಚಟುವಟಿಕೆಗಳ ಮೇಲೆಯೂ ಪರಿಣಾಮ ಬೀರುತ್ತದೆ. ಕೋವಿಡ್ ಸಾಂಕ್ರಾಮಿಕದಿಂದಾಗಿ ಆದಾಯ ನಷ್ಟ ಅಥವಾ ಕಡಿತವಾಗಿರುವ ಈ ಸಂದರ್ಭದಲ್ಲಿ ಪೆಟ್ರೋಲ್ ಬೆಲೆಯೂ ಏರಿಕೆಯಾಗಿ ಜನ ಜೀವನವನ್ನು ಇನ್ನಷ್ಟು ದುಸ್ತರಗೊಳಿಸಿದೆ

ತೈಲ ಕೋಲಾಹಲ

ಸರ್ಕಾರಗಳ ಬೊಕ್ಕಸ ತುಂಬಿಸುತ್ತಿರುವ ತೈಲ ತೆರಿಗೆ

ತೈಲೋತ್ಪನ್ನ ದರ ನಿಯಂತ್ರಣ ಜಿಗಿದ ಹಾಗೆ ಏರಿಕೆಯಾಗುತ್ತಿದ್ದರೆ, ಅತ್ತ ಸರ್ಕಾರದ ಬೊಕ್ಕಸವೂ ಭರ್ತಿಯಾಗುತ್ತಿದೆ. ಕಳೆದ 6 ವರ್ಷಗಳಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ತೆರಿಗೆ ಸಂಗ್ರಹ ಶೇ 300ರಷ್ಟು ಏರಿಕೆಯಾಗಿದೆ. ಇದು ಲೋಕಸಭೆಗೆ ಸರ್ಕಾರವೇ ನೀಡಿದ ಮಾಹಿತಿ.

ನರೇಂದ್ರ ಮೋದಿ ನೇತೃತ್ವದ ಸರ್ಕಾರದ ಮೊದಲ ವರ್ಷದಲ್ಲಿ (2014–15) ಕೇಂದ್ರವು ಪೆಟ್ರೋಲ್‌ನಿಂದ ₹29,279 ಕೋಟಿ, ಡೀಸೆಲ್‌ನಿಂದ ₹42,881 ಕೋಟಿ ಸಂಗ್ರಹಿಸಿತ್ತು.

2020–21ರ ಹಣಕಾಸು ವರ್ಷದ ಮೊದಲ ಹತ್ತು ತಿಂಗಳ ಅವಧಿಯಲ್ಲಿ ಕೇಂದ್ರ ಸರ್ಕಾರವು ಪೆಟ್ರೋಲ್, ಮತ್ತು ಡೀಸೆಲ್‌ನಿಂದ ₹2.94 ಲಕ್ಷ ಕೋಟಿ ಸಂಗ್ರಹಿಸಿದೆ. ಸಚಿವ ಅನುರಾಗ್ ಠಾಕೂರ್ ಅವರು ಲೋಕಸಭೆಗೆ ನೀಡಿದ ಲಿಖಿತ ಉತ್ತರದಲ್ಲಿ ಈ ಮಾಹಿತಿ ಇದೆ.

ಅದೇ ರೀತಿ ನೈಸರ್ಗಿಕ ಅನಿಲದ ಮೇಲಿನ ತೆರಿಗೆಯಿಂದಲೂ ದೊಡ್ಡ ಮೊತ್ತದ ಸಂಪನ್ಮೂಲ ಸಂಗ್ರಹವಾಗಿದೆ. 2014-15ನೇ ಸಾಲಿನಲ್ಲಿ ₹74,158 ಕೋಟಿ ಇತ್ತು. ಇದು 2020 ಏಪ್ರಿಲ್‌ನಿಂದ 2021 ಜನವರಿ ಅವಧಿಯಲ್ಲಿ ₹2.95 ಲಕ್ಷ ಕೋಟಿಗೆ ಏರಿಕೆಯಾಗಿದೆ. ಏಳು ವರ್ಷಗಳ ಹಿಂದೆ ಶೇ 5.4ರಷ್ಟಿದ್ದ ವರಮಾನವು ಪ್ರಸ್ತುತ ಶೇ 12.2ಕ್ಕೆ ಏರಿಕೆಯಾಗಿದೆ.

2014ರಲ್ಲಿ ಪ್ರತೀ ಲೀಟರ್ ಪೆಟ್ರೋಲ್ ಮೇಲೆ ₹9.48 ಸುಂಕ ವಿಧಿಸಲಾಗುತ್ತಿತ್ತು. ಪ್ರಸ್ತುತ ಅದು ₹32.90ಕ್ಕೆ ಏರಿಕೆಯಾಗಿದೆ. ಡೀಸೆಲ್ ಸಹ ₹3.56ರಿಂದ ₹31.80ಗೆ ಏರಿಕೆ ಕಂಡಿದೆ. ಬಹುತೇಕ ಎಲ್ಲ ರಾಜ್ಯ ಸರ್ಕಾರಗಳೂ ಕೇಂದ್ರದ ಮಾದರಿಯನ್ನು ಅನುಸರಿಸುತ್ತಿವೆ. ಕೇಂದ್ರ ವಿಧಿಸುವ ತೆರಿಗೆಯ ಜೊತೆಗೆ ರಾಜ್ಯ ಸರ್ಕಾರಗಳೂ ವಿಧಿಸುವ ಮೂಲಕ ತಮ್ಮ ಬೊಕ್ಕಸವನ್ನು ತುಂಬಿಸಿಕೊಳ್ಳುತ್ತಿವೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡೂ ವಿಧಿಸುವ ತೆರಿಗೆಯನ್ನು ವಾಹನ ಸವಾರರು ಪಾವತಿಸಬೇಕಿದೆ. ಹೀಗಾಗಿ ಪ್ರತೀ ಲೀಟರ್ ಪೆಟ್ರೋಲ್ ಹಾಗೂ ಡೀಸೆಲ್ ಮೇಲೆ ಸರಿಸುಮಾರು ಶೇ 60ರಷ್ಟು ತೆರಿಗೆ ಇದೆ.

2020ರಲ್ಲಿ ಶುರುವಾದ ಕೋವಿಡ್ ಆರ್ಭಟದಿಂದ ಲಾಕ್‌ಡೌನ್ ಹೇರಬೇಕಾದ ಸ್ಥಿತಿ ನಿರ್ಮಾಣವಾಯಿತು. ವ್ಯಾಪಾರ, ಉದ್ದಿಮೆಗಳು ಸ್ಥಗಿತಗೊಂಡಿದ್ದರಿಂದ ಸರ್ಕಾರದ ವರಮಾನಕ್ಕೆ ಭಾರಿ ಪೆಟ್ಟು ಬಿದ್ದಿತು. ಹೀಗಾಗಿ ಸರ್ಕಾರವು ನೆಚ್ಚಿಕೊಂಡಿದ್ದು ತೈಲೋತ್ಪನ್ನ ಹಾಗೂ ಅಬಕಾರಿ ಸುಂಕವನ್ನು. ಜನರು ಕೋವಿಡ್ ಹಾಗೂ ಲಾಕ್‌ಡೌನ್‌ನಿಂದ ತೊಂದರೆ ಅನುಭವಿಸುತ್ತಿದ್ದರೂ ಸರ್ಕಾರ ತೈಲ ಬೆಲೆಯನ್ನು ಇಳಿಸುತ್ತಿಲ್ಲ. ಇರುವ ಅತಿಮುಖ್ಯ ವರಮಾನ ಮೂಲವನ್ನು ಕಳೆದುಕೊಳ್ಳಲು ಸರ್ಕಾರ ಸಿದ್ಧವಿಲ್ಲ ಎಂದು ತಜ್ಞರು ಹೇಳುತ್ತಾರೆ.

ಉತ್ಪಾದನೆ ಕಡಿತ

ನಮ್ಮ ಅಗತ್ಯದ ಶೇ 80ಕ್ಕೂ ಹೆಚ್ಚಿನ ತೈಲವನ್ನು ನಾವು ಆಮದು ಮಾಡಿಕೊಳ್ಳುತ್ತಿರುವುದರಿಂದ ವಿದೇಶಗಳಿಂದ ಕಚ್ಚಾತೈಲದ ಸಾಗಾಣಿಕೆಗೇ ದೊಡ್ಡ ವೆಚ್ಚ ತಗಲುತ್ತದೆ.

ಕೋವಿಡ್ ಸಂದರ್ಭದಲ್ಲಿ ಬೇಡಿಕೆ ಕುಸಿತ ಹಾಗೂ ಇನ್ನೂ ಹಲವು ಕಾರಣಗಳಿಂದ ತೈಲೋತ್ಪಾದನಾ ರಾಷ್ಟ್ರಗಳು ಉತ್ಪಾದನೆಯನ್ನು ಕಡಿತಗೊಳಿಸಿದ್ದರಿಂದ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚಿ, ಕಚ್ಚಾ ತೈಲದ ದರ ಏರಿದೆ.

ತೈಲ ದುಬಾರಿಯಾಗುತ್ತಿದ್ದರೂ ಕೇಂದ್ರ ಸರ್ಕಾರ ಸುಂಕ ಇಳಿಸಲು ನಿರಾಕರಿಸಿದೆ. ಬೆಲೆ ಏರಿಕೆಯಿಂದಾಗಿ ಗ್ರಾಹಕರಿಗೆ ಸ್ವಲ್ಪ ಸಾಂತ್ವನ ನೀಡಲು ಕೆಲವು ತಿಂಗಳ ಹಿಂದೆ ಒಂದೆರಡು ರಾಜ್ಯಗಳು ವ್ಯಾಟ್ ಅನ್ನು ಸ್ವಲ್ಪ ಮಟ್ಟಿಗೆ ಇಳಿಸಿದ್ದವು. ಆದರೆ, ಕೇಂದ್ರವು ತನ್ನ ನಿರ್ಧಾರದಲ್ಲಿ ಯಾವುದೇ ಬದಲಾವಣೆ ಮಾಡಲಿಲ್ಲ.

ವಿದೇಶಿ ವಿನಿಮಯ ದರದಲ್ಲಿ ಏರುಪೇರಾಗುತ್ತಿರುವುದು ಮತ್ತು ತೈಲ ಸಂಸ್ಕರಣಾ ಕಂಪನಿಗಳು ದಿನನಿತ್ಯವೂ ದರ ಪರಿಷ್ಕರಣೆ ಮಾಡುವುದು ಸಹ ಬೆಲೆ ಏರಿಕೆಗೆ ತನ್ನದೇ ಆದ ಕಾಣಿಕೆ ನೀಡಿವೆ.

ಶತಕ ಬಾರಿಸಿದ ಪೆಟ್ರೋಲ್

ದೇಶದ ಕೆಲವು ರಾಜ್ಯಗಳಲ್ಲಿ ಪೆಟ್ರೋಲ್ ದರವು ₹100 ಗಡಿ ದಾಟಿ ದಾಖಲೆ ಬರೆದಿದೆ. ರಾಜಸ್ಥಾನ, ಮಧ್ಯಪ್ರದೇಶ, ಮಹಾರಾಷ್ಟ್ರ, ಆಂಧ್ರಪ್ರದೇಶ ಹಾಗೂ ತೆಲಂಗಾಣ ಹಾಗೂ ಕೇಂದ್ರಾಡಳಿತ ಪ್ರದೇಶ ಲಡಾಖ್‌ನಲ್ಲಿ ಪೆಟ್ರೋಲ್ ಶತಕ ಬಾರಿಸಿದೆ. ವಿವಿಧ ರಾಜ್ಯಗಳಲ್ಲಿ ವ್ಯಾಟ್ ಮತ್ತು ಸಾರಿಗೆ ತೆರಿಗೆ ಭಿನ್ನವಾಗಿರುವ ಕಾರಣ, ದರದಲ್ಲಿ ವ್ಯತ್ಯಾಸವಿದೆ. ಹೀಗಾಗಿ ಚಿಲ್ಲರೆ ಮಾರಾಟದಲ್ಲಿ ರಾಜ್ಯಗಳ ನಡುವೆ ದರದಲ್ಲಿ ಭಿನ್ನತೆಯಿದೆ. ರಾಜಸ್ಥಾನದಲ್ಲಿ ಅತಿಹೆಚ್ಚು ವ್ಯಾಟ್ ವಿಧಿಸಲಾಗುತ್ತದೆ. ಹೀಗಾಗಿ ಬೆಲೆ ದುಬಾರಿ ಎನಿಸಿದೆ.

ತೈಲ ದರ ಎಲ್ಲಿ, ಎಷ್ಟು?

ರಾಜ್ಯ	ಪೆಟ್ರೋಲ್	ಡೀಸೆಲ್
ಮಧ್ಯಪ್ರದೇಶ	102.63	95.79
ರಾಜಸ್ಥಾನ	102.63	95.79
ಮಹಾರಾಷ್ಟ್ರ	101.26	95.59
ಆಂಧ್ರಪ್ರದೇಶ	101.26	95.59
ತೆಲಂಗಾಣ	99.21	94.12

*ಜೂನ್7, 2021ರ ಮಾಹಿತಿ *ಆಧಾರ: ಐಒಸಿ ಆ್ಯಪ್

ಇಂಧನ ಬೆಲೆ ನಿಯಂತ್ರಣಮುಕ್ತ ಎಂಬ ಪ್ರಹಸನ

ಭಾರತದಲ್ಲಿ ತೈಲ ದರವು ಸರ್ಕಾರದ ನಿಯಂತ್ರಣದಲ್ಲಿ ಇಲ್ಲ. ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ದರ, ವೆಚ್ಚ ಮತ್ತು ಲಾಭವನ್ನು ಲೆಕ್ಕ ಹಾಕಿ ಇಂಡಿಯನ್ ಆಯಿಲ್, ಎಚ್‌ಪಿಸಿಎಲ್‌ನಂತಹ ತೈಲ ಮಾರಾಟ ಕಂಪನಿಗಳೇ ಪೆಟ್ರೋಲ್, ಡೀಸೆಲ್ ದರ ನಿಗದಿ ಮಾಡುತ್ತವೆ. ತೈಲ ದರದ ನಿಯಂತ್ರಣವನ್ನು ಸರ್ಕಾರವು ಹಂತ ಹಂತವಾಗಿ ಕೈಬಿಟ್ಟಿದೆ. 2002ರಲ್ಲಿ ಎಟಿಎಫ್ (ವಿಮಾನದಲ್ಲಿ ಬಳಸುವ ತೈಲ), 2010ರಲ್ಲಿ ಪೆಟ್ರೋಲ್ ಮತ್ತು 2014ರಲ್ಲಿ ಡೀಸೆಲ್‌ನ ನಿಯಂತ್ರಣವನ್ನು ಸರ್ಕಾರ ಕೈಬಿಟ್ಟಿದೆ.

ಇದು ನಿಜವೇ ಆದರೂ ವಾಸ್ತವ ಹಾಗೆ ಇಲ್ಲ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ಭಾರಿ ಪ್ರಮಾಣದ ತೆರಿಗೆ, ಸೆಸ್ ವಿಧಿಸುತ್ತಿವೆ. ತೈಲ ದರ ಹೆಚ್ಚಾದಷ್ಟು ಸರ್ಕಾರಗಳಿಗೆ ಲಾಭ ಹೆಚ್ಚು. ತೈಲ ಬೆಲೆಯು ಸರ್ಕಾರದ ನಿಯಂತ್ರಣದಲ್ಲಿ ಇಲ್ಲ ಎಂಬುದರಿಂದ ಗ್ರಾಹಕನಿಗೆ ಯಾವ ಲಾಭವೂ ಇಲ್ಲ. ಏಕೆಂದರೆ, ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ದರ ಏರಿಕೆಯಾದ ಕೂಡಲೇ ತೈಲ ಮಾರಾಟ ಕಂಪನಿಗಳು ಪೆಟ್ರೋಲ್–ಡೀಸೆಲ್ ದರ ಏರಿಸುತ್ತವೆ. ಕಚ್ಚಾ ತೈಲದ ಬೆಲೆ ಇಳಿದಾಗ ಪೆಟ್ರೋಲ್–ಡೀಸೆಲ್ ದರ ಗಣನೀಯವಾಗಿ ಕುಸಿದ ನಿದರ್ಶನ ಇಲ್ಲ. ಒಂದು ವೇಳೆ ತೈಲ ದರ ಕಡಿಮೆಯಾದರೆ, ಸರ್ಕಾರಗಳು ತೆರಿಗೆ ದರ ಹೆಚ್ಚಿಸಿ ಪೆಟ್ರೋಲ್–ಡೀಸೆಲ್ ದುಬಾರಿಯಾಗಿಯೇ ಇರುವಂತೆ ಮಾಡುತ್ತವೆ.

ಪಶ್ಚಿಮ ಬಂಗಾಳ, ಅಸ್ಸಾಂ, ತಮಿಳುನಾಡು, ಕೇರಳ ಮತ್ತು ಪುದುಚೇರಿ ವಿಧಾನಸಭೆಗಳಿಗೆ ಏಪ್ರಿಲ್–ಮೇ ತಿಂಗಳಲ್ಲಿ ಚುನಾವಣೆ ನಡೆದಿದೆ. ಫೆಬ್ರುವರಿ 23ರಿಂದಲೇ ಪೆಟ್ರೋಲ್ ಮತ್ತು ಡೀಸೆಲ್ ದರ ಏರಿಕೆಗೆ ತಡೆ ಬಿದ್ದಿದೆ. ಮೇ 2ರಂದು ಚುನಾವಣೆಯ ಫಲಿತಾಂಶ ಹೊರಬಿತ್ತು. ಮೇ 4ರಂದು ಪೆಟ್ರೋಲ್ ಮತ್ತು ಡೀಸೆಲ್ ದರ ಏರಿಕೆ ಆರಂಭವಾಯಿತು. ಚುನಾವಣೆಯ ಸಂದರ್ಭದಲ್ಲಿ ಈ ಹಿಂದೆಯೂ ತೈಲ ದರ ಏರಿಕೆ ಸ್ಥಗಿತಗೊಂಡ ಉದಾಹರಣೆ ಇದೆ. ತೈಲ ದರವು ಸರ್ಕಾರದ ನಿಯಂತ್ರಣದಲ್ಲಿ ಇಲ್ಲದೇ ಇದ್ದರೂ ಇದು ಹೇಗೆ ಸಾಧ್ಯ ಎಂಬ ಪ್ರಶ್ನೆಗೆ ಉತ್ತರ ಇಲ್ಲ.



ಆಧಾರ: ಇಂಧನ ಸಚಿವಾಲಯದ ಪೆಟ್ರೋಲಿಯಂ ಬೆಲೆ ವಿಶ್ಲೇಷಣಾ ಘಟಕದ ವರದಿಗಳು

ಪ್ರಜಾವಾಣಿ ಗ್ರಾಫಿಕ್ಸ್

ಶಶಿಕಲಾ ಮರುಪ್ರವೇಶ ಚರ್ಚೆಗೆ ಬಿರುಸು

• ಇ.ಟಿ.ಬಿ. ಶಿವಪ್ರಿಯನ್

ಶಶಿಕಲಾ

ಚೆನ್ನೈ: ಎಐಎಡಿಎಂಕೆ ಉಚ್ಚಾಟಿತ ನಾಯಕಿ ವಿ.ಕೆ. ಶಶಿಕಲಾ ಅವರು ಕಳೆದವಾರ ಪಕ್ಷದ ಸದಸ್ಯರ ಜೊತೆ ದೂರವಾಣಿಯಲ್ಲಿ ನಡೆಸಿದ್ದ ಸಂಭಾಷಣೆಯ ತುಣುಕು ಹೊರಬಿದ್ದಿತ್ತು. ಈ ಪ್ರಕರಣ ಬಳಿಕ ತಮಿಳುನಾಡಿನಲ್ಲಿ ಪ್ರತಿದಿನ ಸಾಮಾಜಿಕ ಜಾಲತಾಣಗಳಲ್ಲಿ ಶಶಿಕಲಾ ಅವರ ರಾಜಕೀಯ ಮರುಪ್ರವೇಶದ ಕುರಿತು ಭಾರಿ ಚರ್ಚೆಗಳು ನಡೆಯುತ್ತಿವೆ. ಇದರಿಂದ ಅವರು ರಾಜಕೀಯದಲ್ಲಿ ಎರಡನೇ ಇನ್ನಿಂಗ್ಸ್ ಆರಂಭಿಸಲು ಸಿದ್ಧತೆ ನಡೆಸುತ್ತಿದ್ದಾರೆ ಎನ್ನಲಾಗುತ್ತಿದೆ.

ತಮಿಳುನಾಡು ವಿಧಾನಸಭೆ ಚುನಾವಣೆಗೂ ಮುನ್ನ, ಮಾರ್ಚ್ 3ರಂದು ಶಶಿಕಲಾ ಅವರು ತಾವು ರಾಜಕೀಯದಿಂದ ಹೊರಗುಳಿಯುವುದಾಗಿ ಹೇಳಿದ್ದರು. ಆದರೆ ಚುನಾವಣೆ ಫಲಿತಾಂಶ ಬರುತ್ತಿದ್ದಂತೆ ಅವರು ತಮ್ಮ ಬೆಂಬಲಿಗರ ಜೊತೆ ತಮ್ಮ ರಾಜಕೀಯಕ್ಕೆ ಮರಳುವ ಆಸಕ್ತಿ ಇದೆ ಎಂದು ಹೇಳಿಕೊಂಡಿದ್ದಾರೆ. ತಾವು ಅಂದಿನ ಮುಖ್ಯಮಂತ್ರಿ ಜಯಲಲಿತಾ ರೀತಿ ಎಐಎಡಿಎಂಕೆಗೆ ಮಾರ್ಗದರ್ಶನ ಮಾಡುತ್ತೇನೆ ಎಂದು ಅವರು ದೂರವಾಣಿಯಲ್ಲಿ ಹೇಳಿದ್ದೂ ಬಹಿರಂಗವಾಗಿತ್ತು.

ಆದರೆ, ಇದಕ್ಕೆ ಪಕ್ಷದ ಹಿರಿಯ ನಾಯಕರಿಂದ ಯಾವುದೇ ಸ್ಪಂದನೆ ದೊರೆತಿಲ್ಲ. ಎಡಪ್ಪಾಡಿ ಕೆ. ಪಳನಿಸ್ವಾಮಿ ಮತ್ತು ಒ. ಪನ್ನೀರಸೆಲ್ವಂ ಸೇರಿ ಎಐಎಡಿಎಂಕೆಯ ಪ್ರಮುಖ ಸ್ಥಾನದಲ್ಲಿರುವ ಹಲವು ನಾಯಕರು ಶಶಿಕಲಾ ಅವರಿಂದ ನೇಮಕ ಆದವರು. ಶಶಿಕಲಾ ಅವರ ದೂರವಾಣಿ ಸಂಭಾಷಣೆ ವೈರಲ್ ಆದ ಬಳಿಕ ಯಾರೂ ಈ ಕುರಿತು ಧನಾತ್ಮಕವಾಗಿ ಮಾತನಾಡಿಲ್ಲ. ಈ ಪ್ರಕರಣದ ಕುರಿತು ಪ್ರತಿಕ್ರಿಯೆ ನೀಡಿದ ಮಾಜಿ ಮುಖ್ಯಮಂತ್ರಿ ಪಳನಿಸ್ವಾಮಿ, ಶಶಿಕಲಾ ಸದ್ಯ ಪಕ್ಷದ ಸದಸ್ಯರಲ್ಲ ಎಂದಷ್ಟೇ ಹೇಳಿದ್ದಾರೆ.

2017ರಲ್ಲಿ ಶಶಿಕಲಾ ಅವರೇ ಪಳನಿಸ್ವಾಮಿ ಅವರನ್ನು ಮುಖ್ಯಮಂತ್ರಿ ಹುದ್ದೆಗೆ ಆಯ್ಕೆ ಮಾಡಿದ್ದರು. ಆದರೆ ಈಗ ಶಶಿಕಲಾ ಮರುಪ್ರವೇಶವನ್ನು ಅವರೇ ವಿರೋಧಿಸುತ್ತಿದ್ದಾರೆ. ಪಕ್ಷದ ಕಾರ್ಯಕರ್ತರನ್ನು ಶಶಿಕಲಾ ಫೋನ್ ಮೂಲಕ ಸಂಪರ್ಕಿಸಿರುವುದು ಎಐಎಡಿಎಂಕೆ ಒಳಗೆ ಅಸಮಾಧಾನ ಮೂಡಿಸಿದೆ ಎಂದೂ ಹೇಳಲಾಗುತ್ತಿದೆ.

ಶಶಿಕಲಾ ಮರಳುವ ವಿಶ್ವಾಸ: ಶಶಿಕಲಾ ರಾಜಕೀಯಕ್ಕೆ ಮರಳುವ ವಿಶ್ವಾಸವನ್ನು ಅವರ ಬೆಂಬಲಿಗರು ಹೊಂದಿದ್ದಾರೆ. 'ಇದೆಲ್ಲಾ ಕೇವಲ ಟ್ರೇಲರ್ ಅಷ್ಟೇ, ಮರೀನಾ ಕಡಲತೀರದಲ್ಲಿರುವ ಜಯಲಲಿತಾ ಸ್ಮಾರಕಕ್ಕೆ ಶಶಿಕಲಾ ಭೇಟಿ ನೀಡಿದ ಬಳಿಕ 'ಇಡೀ ಚಿತ್ರ ಆರಂಭವಾಗುತ್ತದೆ' ಎಂದು ಅವರ ಬೆಂಬಲಿಗರೊಬ್ಬರು ಹೇಳಿದ್ದಾರೆ. ಅವರು ತಮ್ಮ ರಾಜಕೀಯ ಪ್ರಯಾಣವನ್ನು ಅಮ್ಮನ (ಜಯಲಲಿತಾ) ವಿಶ್ರಾಂತಿ ಸ್ಥಳದಿಂದ ಆರಂಭಿಸಲಿದ್ದಾರೆ. ದಿನಾಂಕವನ್ನು ಇನ್ನೂ ನಿಗದಿಪಡಿಸಬೇಕಿದೆ ಎಂದು ಅವರು ಹೇಳಿದ್ದಾರೆ.

ಶಶಿಕಲಾ ಪರ ಪಕ್ಷದ ಸದಸ್ಯರು ಇಲ್ಲ: ಶಶಿಕಲಾ ಅವರ ದೂರವಾಣಿ ಸಂಭಾಷಣೆಯಿಂದ ಪಕ್ಷದ ಮೇಲೆ ಯಾವುದೇ ರೀತಿಯ ಪರಿಣಾಮ ಆಗಿಲ್ಲ ಎಂದು ಎಐಎಡಿಎಂಕೆಯ ಹಿರಿಯ ಮುಖಂಡರೊಬ್ಬರು ಹೇಳಿದ್ದಾರೆ. ಅದಲ್ಲದೇ ಎಐಎಡಿಎಂಕೆ ಪ್ರಮುಖ ಸ್ಥಾನಗಳಲ್ಲಿ 'ಇರುವ ಮುಖಂಡರು ಯಾರೂ ಶಶಿಕಲಾ ಅವರ ಪರವಾಗಿ ಮಾತನಾಡಿಲ್ಲ. ಅವರಿಗೆ ಪಕ್ಷದಲ್ಲಿ ಬೆಂಬಲಿಗರು 'ಇದ್ದದ್ದೇ ಆದರೆ ಅವರು ಈವರೆಗೆ ಹೊರ ಬಂದು ತಮ್ಮ ಬಲ ತೋರಬೇಕಿತ್ತು, ಆದರೆ ಅಂಥದ್ದೇನೂ ನಡೆಯುತ್ತಿಲ್ಲ. ಶಶಿಕಲಾ ತಮ್ಮ ಧ್ವನಿ ಜೋರಾಗಿ ಕೇಳುವಂತೆ ಮಾಡಲು ಪ್ರಯತ್ನಿಸುತ್ತಿದ್ದಾರೆ ಅಷ್ಟೇ. ಅವರು ನಿಧಾನವಾಗಿ ರಾಜಕೀಯದಿಂದ ನಿರ್ಗಮಿಸುತ್ತಾರೆ ಎಂದು ಅವರು ಹೇಳಿದ್ದಾರೆ.

ಮಮತಾ ವಿಧಾನಸಭೆ ಪ್ರವೇಶ ಕೋವಿಡ್ ಮೇಲೆ ಅವಲಂಬಿತ

ಪ್ರಜಾವಾಣಿ ವಾರ್ತೆ

ಮಮತಾ ಬ್ಯಾನರ್ಜಿ

ನವದೆಹಲಿ: ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ರಾಜ್ಯ ವಿಧಾನಸಭೆಗೆ ಪ್ರವೇಶಿಸುವುದು ರಾಜ್ಯದ ಕೋವಿಡ್ ಪರಿಸ್ಥಿತಿಯನ್ನು ಅವಲಂಬಿಸಿದೆ.

ಅವರು ರಾಜ್ಯದಲ್ಲಿ ಮೂರನೇ ಅವಧಿಗೆ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡು ಒಂದು ತಿಂಗಳು ಕಳೆದಿದೆ. ಹುದ್ದೆಯಲ್ಲಿ ಮುಂದುವರಿಯಬೇಕಾದರೆ, ಉಳಿದಿರುವ ಐದು ತಿಂಗಳೊಳಗೆ ಅವರು ರಾಜ್ಯ ವಿಧಾನಸಭೆಗೆ ಆರಿಸಿಬರಬೇಕಿದೆ.

ಆದರೆ ಮುಖ್ಯಮಂತ್ರಿ ಸ್ಪರ್ಧಿಸುವ ನಿರೀಕ್ಷೆಯಿರುವ ರಾಜ್ಯದ ಭವಾನಿಪುರ ವಿಧಾನಸಭಾ ಕ್ಷೇತ್ರದಲ್ಲಿ ಉಪಚುನಾವಣೆ ನಡೆಸುವ ಮೊದಲು ಚುನಾವಣಾ ಆಯೋಗವು ರಾಜ್ಯದ ಕೋವಿಡ್ ಪರಿಸ್ಥಿತಿಯನ್ನು ಪರಿಶೀಲಿಸುವ ಸಾಧ್ಯತೆಯಿದೆ.

ಉಪಚುನಾವಣೆ ನಿಗದಿಪಡಿಸುವ ಮೊದಲು ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರ ಮತ್ತು ಸಂಬಂಧಪಟ್ಟ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದಿಂದ ಚುನಾವಣಾ ಆಯೋಗವು ಪ್ರತಿಕ್ರಿಯೆ ಪಡೆದುಕೊಳ್ಳುವ ಸಾಧ್ಯತೆಯಿದೆ.

ಪಶ್ಚಿಮ ಬಂಗಾಳದಲ್ಲಿ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಭವಾನಿಪುರದಿಂದ ವಿಧಾನಸಭೆಗೆ ಆಯ್ಕೆಯಾಗಿದ್ದ ಟಿಎಂಸಿ ಪಕ್ಷದ ಸೋವನ್‌ದೇವ್ ಚಟ್ಟೋಪಾಧ್ಯಾಯ ಅವರು ರಾಜೀನಾಮೆ ನೀಡಿದ್ದು, ಮಮತಾ ಅವರ ಆಯ್ಕೆಗೆ ವೇದಿಕೆ ಒದಗಿಸಿದ್ದಾರೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

'ದೇಶದಲ್ಲಿ ಪೋಲಿಯೊ ಲಸಿಕೆ ಹಾಕಿಸುವಲ್ಲಿ ಆರ್‌ಎಸ್‌ಎಸ್ ಮತ್ತು ಸೇವಾಭಾರತಿ ಕಾರ್ಯ ಮಹತ್ವದ್ದು' ಎಂದು ಪೋಸ್ಟ್‌ಕಾರ್ಡ್ ಕನ್ನಡ ತನ್ನ ಫೇಸ್‌ಬುಕ್ ಪುಟದಲ್ಲಿ ಹೇಳಿದೆ. ಈ ಪೋಸ್ಟರ್‌ನಲ್ಲಿ ಔಟ್‌ಲುಕ್ ನಿಯತಕಾಲಿಕದ ಸುದ್ದಿಯೊಂದರ ಸ್ಕ್ರೀನ್‌ಶಾಟ್ ಲಗತ್ತಿಸಿದೆ. 'ಪೋಲಿಯೊ ನಿರ್ಮೂಲನೆಯಲ್ಲಿ ಆರ್‌ಎಸ್‌ಎಸ್ ಮತ್ತು ಸೇವಾ ಭಾರತಿ ಮಹತ್ವದ ಪಾತ್ರವಹಿಸಿವೆ: ವರ್ಧನ್' ಎಂದು ತಲೆಬರಹ ಆ ಸ್ಕ್ರೀನ್‌ಶಾಟ್‌ನಲ್ಲಿದೆ. 2019ರ ಅಕ್ಟೋಬರ್ 31ರಂದು ಈ ಸುದ್ದಿ ಪ್ರಕಟವಾಗಿದೆ. ಸುದ್ದಿಯ ಮೂಲ ಪಿಟಿಐ ಎಂಬ ವಿವರ ಆ ಸ್ಕ್ರೀನ್‌ಶಾಟ್‌ನಲ್ಲಿದೆ.

ಈ ಸ್ಕ್ರೀನ್‌ಶಾಟ್‌ನಲ್ಲಿ ಇರುವ ವಿವರ ತಪ್ಪಾಗಿದೆ. ಈ ಸ್ಕ್ರೀನ್‌ಶಾಟ್ ಅನ್ನು ಗೂಗಲ್ ಇಮೇಜ್‌ನಲ್ಲಿ ಹುಡುಕಿದಾಗ, ಅಂತಹ ಯಾವುದೇ ಚಿತ್ರ ಲಭ್ಯವಾಗಲಿಲ್ಲ. ಔಟ್‌ಲುಕ್ ನಿಯತಕಾಲಿಕದ ಜಾಲತಾಣದಲ್ಲಿ ತಲೆಬರಹ ಹಾಕಿ ಸುದ್ದಿಯನ್ನು ಹುಡುಕಿದಾಗ, ಒಂದೂ ಸುದ್ದಿ ಲಭ್ಯವಾಗಲಿಲ್ಲ. ಅಲ್ಲದೆ, ಸುದ್ದಿಯ ಮೂಲ ಪಿಟಿಐ ಎಂದು ಸ್ಕ್ರೀನ್‌ಶಾಟ್‌ನಲ್ಲಿದೆ. ಆದರೆ ಪಿಟಿಐನಲ್ಲಿ ಹುಡುಕಿದಾಗ ಈ ತಲೆಬರಹದ ಒಂದು ಸುದ್ದಿಯೂ ಲಭ್ಯವಿಲ್ಲ. ಪೋಲಿಯೊ ನಿರ್ಮೂಲನೆ, ಆರ್‌ಎಸ್‌ಎಸ್ ಮತ್ತು ಸೇವಾ ಭಾರತಿ ಎಂಬ ಪದಗಳ ಸಂಯೋಜನೆಯನ್ನು ಹುಡುಕಿದಾಗ ಒಂದೂ ಸುದ್ದಿ ಬರುತ್ತಿಲ್ಲ. 'ಪೋಲಿಯೊ ನಿರ್ಮೂಲನೆಯಲ್ಲಿ ಆರ್‌ಎಸ್‌ಎಸ್ ಮತ್ತು ಸೇವಾ ಭಾರತಿ ಮಹತ್ವದ ಪಾತ್ರವಹಿಸಿವೆ' ಎಂಬ ಅರ್ಥ ಬರುವ ಒಂದು ಹೇಳಿಕೆಯೂ ಸರ್ಚ್ ಎಂಜಿನ್‌ನಲ್ಲಿ ಲಭ್ಯವಿಲ್ಲ. ತಿರುಚಲಾದ ಸ್ಕ್ರೀನ್‌ಶಾಟ್ ಅನ್ನು ಬಳಸಿಕೊಂಡು ಪೋಸ್ಟ್‌ಕಾರ್ಡ್ ಕನ್ನಡ ಫೇಸ್‌ಬುಕ್ ಪುಟವು ಸುಳ್ಳು ಸುದ್ದಿಯನ್ನು ಹಂಚಿಕೊಂಡಿದೆ.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಮಹಾಪ್ರತಿಜ್ಞೆ

'ಬೋಧಿಸತ್ವ ಹುಟ್ಟಿದ ದಿನವೇ ಶಕ್ರನ ಆದೇಶದಂತೆ ಆಕಾಶದಲ್ಲಿ ಸಂಚರಿಸುವ ಸರ್ವಶ್ವೇತ ಬಿಳಿಯಾನೆ ತನ್ನ ಮರಿಯನ್ನು ತಂದು ಮಾಂಗಲಿಕ ಆನೆಯೆಂದು ಇಟ್ಟು ಹೋಯಿತು. ಅದೂ ಸರ್ವಲಕ್ಷಣ ಸಂಪನ್ನವಾದ ಬಿಳೀ ಆನೆ ಮರಿ. ಅದಕ್ಕೆ 'ಪ್ರತ್ಯಯ' ಎಂದು ನಾಮಕರಣ ಮಾಡಲಾಯಿತು. ರಾಜ ಬೋಧಿಸತ್ವನಿಗಾಗಿ ಅತ್ಯಂತ ಮಧುರವಾದ ಎದೆಹಾಲಿರುವ ಅರವತ್ನಾಲ್ಕು ದಾದಿಯರನ್ನು ನೇಮಿಸಿದ. ಅವನೊಂದಿಗೇ ರಾಜ್ಯದಲ್ಲಿ ಜನಿಸಿದ ಅರವತ್ತು ಸಾವಿರ ಮಕ್ಕಳೂ ಚೆನ್ನಾಗಿ ಬೆಳೆಯುತ್ತಿದ್ದರು.

ರಾಜ ಸಂಭ್ರಮದಿಂದ ಬೋಧಿಸತ್ವನಿಗೆ ಲಕ್ಷ ಬೆಲೆ ಬಾಳುವ ವಿಶೇಷವಾದ ಆಭರಣಗಳನ್ನು ಮಾಡಿಸಿದ. ಆದರೆ ಮಗು ಬೋಧಿಸತ್ವ ಅವುಗಳನ್ನು ದಾದಿಯರಿಗೆ ಕೊಟ್ಟುಬಿಟ್ಟ. ಮಗನ ದಾನಬುದ್ಧಿ ದೊಡ್ಡದು ಎಂದು ಎಲ್ಲರೂ ಕೊಂಡಾಡಿದರು. ರಾಜ ಕೂಡ ಅಷ್ಟು ಬೆಲೆಬಾಳುವ ಆಭರಣಗಳನ್ನು ಕೊಟ್ಟುಬಿಟ್ಟನಲ್ಲ ಎಂದು ಬೇಜಾರುಮಾಡಿಕೊಳ್ಳದೆ, 'ನನ್ನ ಮಗ ಕೊಡುಗೈದಾನಿ. ದಾನ ಮಾಡಿ ಒಳ್ಳೆಯ ಕೆಲಸ ಮಾಡಿದ. ಪುಟ್ಟ ಮಗು ಮಾಡುವುದು ಶ್ರೇಷ್ಠ ದಾನವೇ' ಎಂದು ಹೊಗಳಿದ.

ಬೋಧಿಸತ್ವನಾದ ವೆಸ್ಸಂತರ ಬೆಳೆದು ದೊಡ್ಡವನಾಗುತ್ತಿದ್ದ. ಅವನಿಗೆ ಎಂಟು ವರ್ಷ ವಯಸ್ಸಾದಾಗ, ಒಂದು ದಿನ ತಂದೆಯ ಸಭೆಯಲ್ಲಿ ಕುಳಿತಾಗ, ಎಲ್ಲರಿಗೆ ಕೇಳುವಂತೆ ಗಂಭೀರವಾಗಿ ಘೋಷಣೆ ಮಾಡಿದ. 'ದಾನವೇ ನನ್ನ ಬದುಕು. ಇನ್ನು ಮೇಲೆ ಕೇವಲ ವಸ್ತುಗಳನ್ನು ಮಾತ್ರವಲ್ಲ, ನನ್ನನ್ನೇ ನಾನು ದಾನವಾಗಿ ಕೊಟ್ಟು ಬಿಡುತ್ತೇನೆ. ಯಾರಾದರೂ ನನ್ನ ಹೃದಯವನ್ನು ಕೇಳಿದರೆ, ನನ್ನ ಎದೆಯನ್ನು ಸೀಳಿ ಹೃದಯವನ್ನು ತೆಗೆದುಕೊಟ್ಟು ಬಿಡುತ್ತೇನೆ. ಕಣ್ಣುಗಳನ್ನು ಕೇಳಿದರೆ ಅವುಗಳನ್ನು ಕಿತ್ತು ನೀಡುತ್ತೇನೆ. ಯಾರಾದರೂ ಶರೀರವನ್ನು ಬೇಡಿದರೆ ಇಡೀ ಶರೀರದಲ್ಲಿದ್ದ ಮಾಂಸವನ್ನು ಸೆಳೆದು ಕೊಡುತ್ತೇನೆ. ಇದು ನನ್ನ ಪ್ರತಿಜ್ಞೆ' ಎಂದ.

ಅವನ ಈ ಭಯಂಕರ ಪ್ರತಿಜ್ಞೆಯನ್ನು ಕೇಳಿ ಸಭಿಕರು ದಂಗಾದರು. ಅದೇ ಕ್ಷಣ ಎರಡು ಲಕ್ಷ ಯೋಜನ ಗಾತ್ರದ ಈ ಪೃಥ್ವಿ ಮದವೇರಿದ ಆನೆಯಂತೆ ಘೀಳಿಡುತ್ತ ಗಡಗಡನೆ ನಡುಗಿತು. ಬೃಹತ್ತಾದ ಸುಮೇರು ಪರ್ವತ, ಹದವಾದ ಮತ್ತು ನೇರವಾದ ಬೆತ್ತದಂತೆ ಬಾಗಿ ನಮಸ್ಕಾರ ಮಾಡಿ ನಂತರ ನರ್ತಿಸುತ್ತ ಜೆತುತ್ತರ ನಗರದ ಮುಂದೆ ಬಂದು ನಿಂತುಬಿಟ್ಟಿತು. ಭೂಮಿ ನಡುಗಿ ಕಾದದ್ದರಿಂದ ಅದನ್ನು ತಂಪಾಗಿಸಲು ಶಕ್ರ ಕೆಲಕಾಲ ಮಳೆ ಸುರಿಸಿದ. ಆಕಾಶದ ತುಂಬೆಲ್ಲ ಗುಡುಗು, ಮಿಂಚು ತುಂಬಿದವು. ಸಾಗರ ಭೋರ್ಗರೆಯುತ್ತ ಉಕ್ಕಿತು. ಬೋಧಿಸತ್ವನ ದಾನದ ಘೋಷಣೆಗೆ ಇಡೀ ಪ್ರಪಂಚ ಸ್ಪಂದಿಸಿದ್ದನ್ನು ಕಂಡು ದೇವೇಂದ್ರ ಶಕ್ರ ಚಪ್ಪಾಳೆ ತಟ್ಟಿದ. ಬ್ರಹ್ಮ ಸ್ವಸ್ತಿ ವಾಚನ ಮಾಡಿದ. ಅದರ ಶಬ್ದ ಬ್ರಹ್ಮಲೋಕದವರೆಗೆ ಹಬ್ಬಿತು.

ಇಂಥ ಮಹೋನ್ನತ ಪ್ರತಿಜ್ಞೆ ಮಾಡಿದ ಬೋಧಿಸತ್ವ ಸಕಲವಿದ್ಯೆಗಳಲ್ಲಿ ಪಾರಂಗತನಾದ. ಅವನಿಗೆ ಹದಿನಾರು ವರ್ಷ ವಯಸ್ಸಾದಾಗ ಮದ್ರಕುಲದ, ರಾಜಮನೆತನದ ಮಾದ್ರಿ ಎಂಬ ಕನ್ಯೆಯೊಡನೆ ಅವನ ಮದುವೆ ಮಾಡಿ, ಹದಿನಾರು ಸಾವಿರ ಸ್ತ್ರೀಯರಲ್ಲಿ ಆಕೆಯನ್ನು ಪಟ್ಟಮಹಿಷಿಯನ್ನಾಗಿ ಮಾಡಿದರು. ಬೋಧಿಸತ್ವನ ರಾಜ್ಯಾಭಿಷೇಕವಾದ ಮೇಲೆ ಆತ ನಿತ್ಯ ಆರು ಲಕ್ಷ ಹಣ ದಾನ ಮಾಡಿ ಮಹಾದಾನಿಯೆಂದು ಹೆಸರು ಮಾಡಿದ. ❖

ದಿನ ಭವಿಷ್ಯ

ಮಂಗಳವಾರ ಜೂನ್ 8, 2021

ಶ್ರೀ ಪ್ಲವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ವೈಶಾಖ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಮೃಗಶಿರ ತ್ರಯೋದಶಿ ಗಂ. 12-11 (ಹ. 10-53) ಮಂಗಳವಾರ ನಿತ್ಯ ನಕ್ಷತ್ರ ಕೃತ್ತಿಕಾ ಗಂ. 60-00 (ದಿನಪೂರ್ತಿ) ಅತಿಗಂಡ ನಾಮ ಯೋಗ ಗಂ. 0-36 ವಣಿಜ ಕರಣ ಗಂ. 12-11 ವಿಷ ಗಂ. 32-35 ಅಮೃತ ಗಂ. 59-12: ರಾಹುಕಾಲ: ಮ. ಗಂ. 3-00 ರಿಂದ 4-30 ಗುಳಿಕ ಕಾಲ ಮ. ಗಂ 12-00 ರಿಂದ 1-30 ಯಮಗಂಡ ಕಾಲ ಬೆ. ಗಂ 9-00 ರಿಂದ 10-30 ಸೂರ್ಯೋದಯ: 5-56 ಸೂರ್ಯಾಸ್ತ: 6-41 ಅದೃಷ್ಟ ಸಂಖ್ಯೆ 2, 6

ಮೇಷ: ಸಂಪನ್ಮೂಲಗಳಿಗಾಗಿ ಹುಡುಕಾಟ ನಡೆಸುವಿರಿ. ಇತರರ ಕೆಲಸಗಳ ಯಶಸ್ಸಿಗಾಗಿ ಉತ್ತಮ ಸಲಹೆ ನೀಡುವ ಅವಕಾಶ. ವಿದ್ಯಾಭ್ಯಾಸಕ್ಕಾಗಿ ಚಿಂತನೆ. ಹಣಕಾಸಿನ ಮುಗ್ಗಟ್ಟು ಎದುರಾದೀತು.

ವೃಷಭ: ಉನ್ನತ ಸಂಸ್ಕಾರಯುತ ನಡೆ. ಸಾಧಿತ ಪ್ರಗತಿಗಾಗಿ ಪ್ರಶಂಸೆಯ ಮಾತುಗಳು. ಸಂಗಾತಿಯಿಂದ ಉತ್ತಮ ಸಹಕಾರ ದೊರೆತು ಸಾಂಸಾರಿಕ ಸುಖ ನಿಮ್ಮದಾಗಲಿದೆ.

ಮಿಥುನ: ವೈಯಕ್ತಿಕ ವ್ಯವಹಾರಗಳ ಹೋರಾಟದಲ್ಲಿ ಪ್ರಗತಿ. ಪಟ್ಟು ಬಿಡದೆ ಕಾರ್ಯ ಸಾಧಿಸುವ ಛಲ. ಮನೆಯವರ ಆರೋಗ್ಯದ ಬಗ್ಗೆ ಗಮನವಿರಲಿ. ಗೆಳೆಯರಿಂದ ಸಕಾಲಿಕ ನೆರವಿನ ಭರವಸೆ.

ಕರ್ಕಾಟಕ: ಸಜ್ಜನರ ಸಹವಾಸದಿಂದಾಗಿ ಮಾನಸಿಕ ನೆಮ್ಮದಿ. ವಿದ್ಯಾಭ್ಯಾಸದಲ್ಲಿ ಪ್ರಗತಿ. ಮನೆಗೆ ಅನಿರೀಕ್ಷಿತರ ಆಗಮನ. ಬುದ್ಧಿಮತ್ತೆಗೆ ಪರೀಕ್ಷೆಯ ಕಾಲ ಒದಗಿ ಬರಲಿದೆ. ವಿವೇಚನೆಯ ನಡವಳಿಕೆಯಿಂದಾಗಿ ಸಮಸ್ಯೆ ಪರಿಹಾರ.

ಸಿಂಹ: ಉದ್ಯೋಗ ವ್ಯವಹಾರದಲ್ಲಿ ಬದಲಾವಣೆಯ ಸಾಧ್ಯತೆ. ಹಣಕಾಸಿನ ಅನುಕೂಲತೆಯಿಂದಾಗಿ ಉತ್ತಮ ಫಲ ಒದಗಿ ಬರಲಿದೆ. ಸಮಾಜದೊಂದಿಗೆ ಬಾಂಧವ್ಯ ವೃದ್ಧಿ. ಆತ್ಮವಿಶ್ವಾಸದಿಂದ ವ್ಯವಹರಿಸಿ ಜಯ ಸಾಧನೆ.

ಕನ್ಯಾ: ಹಮ್ಮಿಕೊಂಡ ಕೆಲಸ–ಕಾರ್ಯಗಳು ಸುರಕ್ಷಿತವಾಗಿ ನೆರವೇರುವವು. ದೃಢ ಸಂಕಲ್ಪದ ಸಾಮರಸ್ಯ. ವಿದ್ಯಾರ್ಥಿಗಳಿಗೆ ಅಭ್ಯಾಸದಲ್ಲಿ ಅಬಾಧಿತ ಮುನ್ನಡೆಯಿಂದಾಗಿ ನೆಮ್ಮದಿ. ಮಕ್ಕಳ ಕಡೆಯಿಂದ ಶುಭ ಸಮಾಚಾರ.

ತುಲಾ: ಉದ್ಯೋಗ ಕ್ಷೇತ್ರದಲ್ಲಿ ಉತ್ಸಾಹ. ಬದಲಾವಣೆಗಳು ಕಂಡುಬರುವವು. ನಿರುದ್ಯೋಗಿಗಳಿಗೆ ಉದ್ಯೋಗ ದೊರಕುವ ಸಾಧ್ಯತೆ. ಕೃಷಿಕಾರ್ಯಗಳಲ್ಲಿ ಉತ್ಸುಕತೆ. ಮನೆಯಲ್ಲಿ ಹಬ್ಬದ ವಾತಾವರಣ.

ವೃಶ್ಚಿಕ: ವಿದ್ಯುತ್ ಉಪಕರಣಗಳ ವ್ಯವಹಾರದಲ್ಲಿ ತೊಂದರೆ ಸಾಧ್ಯತೆ. ನ್ಯಾಯಾಲಯಗಳಲ್ಲಿರುವ ಕಟ್ಟಳೆಗಳು ವಿಳಂಬವಾಗುವ ಸಾಧ್ಯತೆ. ನಯವಂಚಕರಿಂದ ತಪ್ಪಿಸಿಕೊಳ್ಳುವ ಸಲುವಾಗಿ ಜಾಣ್ಮೆಯ ನಡೆ.

ಧನು: ಬಹುದಿನಗಳ ಅನಾರೋಗ್ಯದಿಂದ ಚೇತರಿಕೆ ಕಾಣುವಿರಿ. ವಾಹನ ಖರೀದಿಯನ್ನು ದಿನದ ಮಟ್ಟಿಗೆ ಮುಂದೂಡುವುದೇ ಸೂಕ್ತ. ಪ್ರಶಂಸೆಗೆ ಪಾತ್ರರಾಗುವಿರಿ.

ಮಕರ: ಉತ್ತಮ ಆದಾಯ ದೊರೆತು ಆರ್ಥಿಕ ಸೌಖ್ಯ. ಪಾಲುಗಾರಿಕೆ ವ್ಯವಹಾರದಿಂದಾಗಿ ಸಂಕಷ್ಟ ಸಾಧ್ಯತೆ. ಸಮಾಜ ಕಾರ್ಯದಲ್ಲಿರುವವರಿಗೆ ಗೌರವ. ಕುಟುಂಬದಲ್ಲಿ ಸಂತೋಷದ ವಾತಾವರಣ.

ಕುಂಭ: ಹಣಕಾಸಿನ ಅನುಕೂಲ ವಿವಿಧ ಮೂಲಗಳಿಂದ ಹರಿದುಬರುವ ಸಾಧ್ಯತೆ. ಅತಿಯಾದ ಆಸೆಯಿಂದ ದೂರ ಉಳಿಯುವ ಸಂಕಲ್ಪ ಮಾಡಿ. ದೂರ ಪ್ರಯಾಣದಿಂದಾಗಿ ತೊಂದರೆ. ಆರೋಗ್ಯದಲ್ಲಿ ವ್ಯತ್ಯಯ.

ಮೀನ: ಎದುರಾಳಿಗಳ ಕಾರ್ಯತಂತ್ರ ವಿಫಲವಾಗಿ ಸಂತಸ ನಿಮ್ಮ ಪಾಲಿಗೆ. ಅಶಕ್ತರಿಗೆ ಆರ್ಥಿಕ ಸಹಾಯ ನೀಡಲಿದ್ದೀರಿ. ಘನತೆಗೆ ತಕ್ಕ ನಡೆಯಿಂದಾಗಿ ಸಾಮಾಜಿಕ ಮನ್ನಣೆ. ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣದ ಕುರಿತಾದ ದುಗುಡ.

ನಿಮ್ಮ ಜನ್ಮದಿನ 8-ಜೂನ್: ಈ ದಿನ ಅತ್ಯಂತ ಶುಭಕರ. ಉದ್ಯಮಿಗಳಿಗೆ ಯಶಸ್ಸಿನ ವರ್ಷವಾಗಲಿದೆ. ಸಾಮಾಜಿಕ ಕೆಲಸಗಳಿಂದ ಸ್ಥಾನಮಾನ ಹೊಂದಲಿದ್ದೀರಿ. ಸಮಾಜದ ಕೆಳಸ್ಥರದವರಿಗಾಗಿ ಸಾತ್ವಿಕ ಹೋರಾಟಕ್ಕೆ ತೊಡಗಿದವರಿಗೆ ಯಶಸ್ಸು. ಪಾಲುಗಾರಿಕೆ ವ್ಯವಹಾರದಲ್ಲಿ ಉತ್ತಮ ಲಾಭವನ್ನು ಪಡೆಯಲಿದ್ದೀರಿ. ವೃಥಾ ಆರೋಪಕ್ಕೆ ಗುರಿಯಾಗುವ ಸಾಧ್ಯತೆ.

ಪದಬಂಧ 4621 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಹಿತಕರವಾದ ದೃಶ್ಯ (4)
3.ಕ್ರೈಸ್ತರು ಧರಿಸುವ ಧಾರ್ಮಿಕ ಲಾಂಛನ (3)
5.ತಿರುಪೆ ಬೇಡುವವನು (3)
7.ಒನಪಿನೊಡನೆ ತೋರಿದ ಬಿಂಕ (3)
8.ಒಟ್ಟಾಗಿ ಹಾಡುವಿಕೆ (5)
11.ಜಾಗಟೆ ಬಾರಿಸಿದ್ದಕ್ಕೇ ಇಲ್ಲಿ ಗದ್ದಲ! (3)
12.ಸೊಂಟದಿಂದ ಪ್ರಾರಂಭವಾದ ಕಂಪನ (3)
15.ಹುರುಪಿನಿಂದ ಪಡೆದ ದೇವರ ಪ್ರಸಾದ (3)
16.ಸಾರವತ್ತಾದ ಭಾಗದೊಂದಿಗಿನ ಕ್ಷೀರ (4)

ಮೇಲಿಂದ ಕೆಳಕ್ಕೆ

1.ಮತಿಯಿಟ್ಟುಕೊಂಡು ನೀಡಿದ ಅನುಮೋದನೆ (3)
2.ತಟಕ್ಕನೆ ಕಾಣಿಸಿದ ಮೋಸಗಾರ! (2)
3.ಶಿಖರದಲ್ಲಿದ್ದಾಗಿನ ಚಳಿಗಾಲ (3)
4.ನವನೀತ ಇಟ್ಟು ಈ ಪುಸಲಾವಣೆ ನುಡಿ! (4)
6.ದೇವಾಲಯ ಗೋಪುರದ ತುದಿ (3)
7.ಕೆಲಸಕ್ಕೆ ಬಾರದ ಮಾತು (5)
9.ಇದು ಹೊಸತು (3)
10.ರತ್ನನ್ ಪದಗಳಲ್ಲಿನ ಜಗತ್ತು! (4)
11.ವ್ಯಾಕರಣದಲ್ಲಿ ಗಂಡುಜಾತಿ ಸೂಚಿಸುವ ಶಬ್ದವಿಲ್ಲಿ ಉಲ್ಟಾ (3)
13.ನಕಲು ಎಂದಾಗ ಹೀಗೆ ಕೋಪಿಸಿಕೊಳ್ಳು (3)
14.ನಿರ್ದಿಷ್ಟ ಕಾಲದಿಂದ ಆರಂಭಿಸುವ ಕಾಲಗಣನೆ (2)



4620ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಅನುಕರಣ 3.ಪ್ರಸವ 5.ಆಕಳಿಸು 8.ತಪ್ಪುಕಲ್ಪನೆ 11.ನವನಟ 13.ರವಣೆ 14.ದೇಹಪ್ರಕೃತಿ

ಮೇಲಿಂದ ಕೆಳಕ್ಕೆ: 1.ಅಧ್ಯಾಪಿಕೆ 2.ರತ್ನೂಡಿ 4.ವನಸುಮ 6.ಕಲ್ಪನೆ 7.ಬಿಕರಿ 8.ತಲ್ಲೀನ 9.ವನಚರ 10.ಅವನತಿ 12.ವಿವಾಹ

ಸುಡೊಕು 5007

		6			8	5		1
			2	1				
1		2			5			8
6		9				8		
			5	4	6		1	
3		5				2		7
		4				1		2
	2		1	5				9
9		1			2	7		

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5006 ಸುಡೊಕು

8	3	7	1	9	2	5	6	4
6	1	5	7	3	4	8	2	9
2	9	4	5	6	8	1	3	7
7	6	8	9	5	3	2	4	1
5	2	3	6	4	1	7	9	8
9	4	1	8	2	7	3	5	6
3	7	2	4	8	6	9	1	5
1	5	6	2	7	9	4	8	3
4	8	9	3	1	5	6	7	2

‘ಭಿನ್ನಮತ ಭುಗಿಲೇಳಲು ಹೈಕಮಾಂಡ್ ಕುಮ್ಮಕ್ಕು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಜೆಪಿಯಲ್ಲಿ ನೋವುಗಳೆಲ್ಲವೂ ಬೂದಿ ಮುಚ್ಚಿದ ಕೆಂಡದಂತಿದೆ’ ವಿಧಾನಪರಿಷತ್ತಿನ ಬಿಜೆಪಿ ಸದಸ್ಯ ಎಚ್.ವಿಶ್ವನಾಥ್ ಹೇಳಿದರೆ, ‘ಯೋಗೇಶ್ವರ್‌ಗೆ ಸಿದ್ಧಾಂತವೇ ಇಲ್ಲ– ಯತ್ನಾಳ ಹಿಂದೆ ಐದು ಶಾಸಕರಿಲ್ಲ’ ಎಂದು ಬಿಜೆಪಿಯ ರಾಜ್ಯ ಪ್ರಧಾನ ಕಾರ್ಯದರ್ಶಿ ಎನ್. ರವಿಕುಮಾರ್ ಕುಟುಕಿದರು. ‘ರಾಜ್ಯದಲ್ಲಿರುವುದು ಮಿಶ್ರಣ ಸರ್ಕಾರ; ಹೈಕಮಾಂಡ್ ಕುಮ್ಮಕ್ಕಿನಿಂದ ಭಿನ್ನಮತ ಭುಗಿಲೆದ್ದಿದೆ’ ಎಂದು ರಾಜಕೀಯ ವಿಶ್ಲೇಷಕ ಎ. ನಾರಾಯಣ ಅಭಿಪ್ರಾಯ ಪಟ್ಟರು.

‘ರಾಜ್ಯ ಬಿಜೆಪಿಯಲ್ಲಿ ಏಕೆ ಭಿನ್ನಮತ ಭುಗಿಲೆದ್ದಿದೆ?’ ಎಂಬ ವಿಷಯದ ಕುರಿತು ‘ಪ್ರಜಾವಾಣಿ’ ನೇರ ಸಂವಾದದಲ್ಲಿ ಪಾಲ್ಗೊಂಡ ಈ ಪ್ರಮುಖರು ವ್ಯಕ್ತಪಡಿಸಿದ ಅಭಿಪ್ರಾಯಗಳು ಇಲ್ಲಿವೆ.

ಪ್ರಜಾವಾಣಿ ಸಂವಾದ

‘ಮೊದಲು ಪಾರ್ಶ್ವವಾಯು ಹೊಡೆಯಲಿದೆ’



ಪಾರದರ್ಶಕತೆ ಇಲ್ಲದ ಆಡಳಿತಕ್ಕೆ ಮೊದಲು ಪಾರ್ಶ್ವವಾಯು ಹೊಡೆಯಲಿದೆ, ಬಳಿಕ ಪ್ರಾಣವಾಯುವೇ ಹೋಗಲಿದೆ. ಯಾವುದೇ ಸರ್ಕಾರ ಮೊದಲಿಗೆ ಸಹಮತದೊಂದಿಗೆ ಆರಂಭವಾಗುತ್ತದೆ. ದಿನ ಕಳೆದಂತೆ ಅಧಿಕಾರ ಕೇಂದ್ರೀಕೃತವಾಗುತ್ತ ಹೋದರೆ ಭಿನ್ನಮತ ಶುರುವಾಗುತ್ತದೆ. ಶಾಸಕರಿಗೆ ತಮ್ಮದೇ ಆದ ನೋವುಗಳಿರುತ್ತವೆ. ಅವರ ಭಾವನೆಗಳನ್ನು ಹೇಳಿಕೊಳ್ಳಲು ಇರುವ ವೇದಿಕೆ ಎಂದರೆ ಶಾಸಕಾಂಗ ಪಕ್ಷದ ಸಭೆ. ಅದನ್ನೇ ನಡೆಸದಿದ್ದರೆ ಶಾಸಕರು ಮತ್ತೆಲ್ಲಿ ಪ್ರಶ್ನಿಸಬೇಕು? ಹೀಗೆ ಸತ್ಯ ಹೇಳಿದರೆ ಮಂತ್ರಿಗಿರಿ ಸಿಗದಿದ್ದಕ್ಕೆ ಮಾತನಾಡುತ್ತಾರೆ ಎಂಬ ಆರೋಪಗಳು ಬರುತ್ತವೆ. ನಾನು ಹೈಕೋರ್ಟ್, ಸುಪ್ರೀಂ ಕೋರ್ಟ್‌ಗೆ ಅಲೆಯುತ್ತಿದ್ದೇನೆ. ಚುನಾವಣೆಯಲ್ಲಿ ಸೋತಿದ್ದೇಕೆ, ನಿನ್ನ ನೋವುಗಳೇನು ಎಂದು ಯಾರೂ ಕೇಳಿಲ್ಲ. ಮುನಿರತ್ನ, ಪ್ರತಾಪ್ ಗೌಡ ಪಾಟೀಲ, ಶಂಕರ್ ಕತೆಗಳು ಏನಾಗಿವೆ. ಯಾರ ಕಷ್ಟ ಏನು ಎಂಬುದನ್ನು ಒಮ್ಮೆಯೂ ಕೇಳಿಲ್ಲ. ಈ ನೋವುಗಳೆಲ್ಲವೂ ಬೂದಿಮುಚ್ಚಿದ ಕೆಂಡದಂತೆ ಇವೆ. ಯಡಿಯೂರಪ್ಪ ಹೊರತುಪಡಿಸಿ ಬಿಜೆಪಿಯಲ್ಲಿ ಬೇರೆ ನಾಯಕರಿಲ್ಲ ಎಂದಲ್ಲ. ಬಸವನಗೌಡ ಪಾಟೀಲ ಯತ್ನಾಳ್ ಅವರಿಗೆ ಅರ್ಹತೆ ಇದೆಯೋ ಇಲ್ಲವೋ ಎಂಬುದು ಅವಕಾಶ ಕೊಟ್ಟಾಗ ಗೊತ್ತಾಗಲಿದೆ.

ಎಚ್. ವಿಶ್ವನಾಥ್, ವಿಧಾನ ಪರಿಷತ್ತಿನ ಬಿಜೆಪಿ ಸದಸ್ಯ

ಯೋಗೇಶ್ವರ್‌ಗೆ ಸಿದ್ಧಾಂತವಿಲ್ಲ



ಬಿಜೆಪಿಯಲ್ಲಿ ಭಿನ್ನಮತ ಬೂದಿ ಮುಚ್ಚಿದ ಕೆಂಡದಂತೆ ಇದೆ ಎಂಬುದನ್ನು ಒಪ್ಪಲಾಗದು. ಒಂದಿಬ್ಬರು ಭಿನ್ನ ಅಭಿಪ್ರಾಯಗಳನ್ನು ಹೊಂದಿದ್ದಾರೆ. ಬಸವನಗೌಡ ಪಾಟೀಲ ಯತ್ನಾಳ್ ಹಿಂದೆ ಐದು ಶಾಸಕರೂ ಇಲ್ಲ. ಯತ್ನಾಳ್ ಅವರಿಗೆ ಮಂತ್ರಿಗಿರಿ ಸಿಗಲಿಲ್ಲ ಎಂಬ ಕಾರಣಕ್ಕೆ ಸರ್ಕಾರದ ವಿರುದ್ಧ ಹೇಳಿಕೆ ನೀಡುತ್ತಲೇ ಬಂದಿದ್ದಾರೆ. ವಿಧಾನಸಭೆ, ಲೋಕಸಭೆ ಉಪಚುನಾವಣೆ, ನಗರ ಸ್ಥಳೀಯ ಸಂಸ್ಥೆ, ಗ್ರಾಮ ಪಂಚಾಯಿತಿ ಚುನಾವಣೆಗಳು ನಡೆದಿವೆ. ಯತ್ನಾಳ್ ಅವರ ಮಾತುಗಳಿಂದ ಈ ಚುನಾವಣೆಗಳ ಮೇಲೆ ಸಣ್ಣ ಪರಿಣಾಮವೂ ಬೀರಿಲ್ಲ. ಸಚಿವ ಸಿ.ಪಿ. ಯೋಗೇಶ್ವರ್ ಅವರಿಗೆ ರಾಜಕೀಯ ಸಿದ್ಧಾಂತವೇ ಇಲ್ಲ. ಅವರು ಪಕ್ಷಾಂತರ ಮಾಡಲು ಉಳಿದಿರುವ ಪಕ್ಷ ಯಾವುದು? ನಮ್ಮ ರಾಜ್ಯದಲ್ಲಿ ಅಸ್ತಿತ್ವದಲ್ಲೇ ಇಲ್ಲದ ಸೈಕಲ್ ಚಿನ್ಹೆಯ ಸಮಾಜವಾದಿ ಪಕ್ಷಕ್ಕೂ ಹೋಗಿ ಬಂದರು. ಅವರ ಮಾತುಗಳಿಗೆ ಗೌರವ ಇಲ್ಲ. ಹೀಗೆ ಭಿನ್ನ ಅಭಿಪ್ರಾಯ ಹೊಂದಿದ ಮುಖಂಡರು ದೆಹಲಿಗೆ ಹೋದರೆ ಹೈಕಮಾಂಡ್ ನಾಯಕರು ಭೇಟಿಗೆ ಸಮಯವನ್ನೇ ಕೊಡುತ್ತಿಲ್ಲ. ಈ ಭಿನ್ನಮತಕ್ಕೆ ಹೈಕಮಾಂಡ್ ಕುಮ್ಮಕ್ಕು ಇದೆ ಎಂಬುದು ಸುಳ್ಳು.

ಎನ್.ರವಿಕುಮಾರ್, ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ

ರಾಜಕೀಯ ಮಿಶ್ರಣದ ಸರ್ಕಾರ

ರಾಜ್ಯದಲ್ಲಿ ಆಡಳಿತದಲ್ಲಿರುವುದು ಬಿಜೆಪಿ ಸರ್ಕಾರ ಅಲ್ಲ. ಅದೊಂದು ರಾಜಕೀಯ ಮಿಶ್ರಣದ ಸರ್ಕಾರ. ಸರ್ಕಾರ, ಆಳುವ ಪಕ್ಷ, ಖರೀದಿ ಗುಂಪು ಹೀಗೆ ಹಲವು ಗುಂಪುಗಳಿವೆ. ಇಷ್ಟೊಂದು ಗುಂಪುಗಳಿರುವ ಸರ್ಕಾರಕ್ಕೆ ಹೈಕಮಾಂಡ್ ಕುಮ್ಮಕ್ಕಿನ ಭಿನ್ನಮತ ಕಾಡುತ್ತಿದೆ. ದೇವರಾಜ ಅರಸು ಕಾಲದಲ್ಲಿ ಬಿಟ್ಟರೆ, ಒಬ್ಬ ಮುಖ್ಯಮಂತ್ರಿ ವಿರುದ್ಧ ಹೈಕಮಾಂಡ್ ಕುಮ್ಮಕ್ಕಿನ ಭಿನ್ನಮತವನ್ನು ರಾಜ್ಯ ಕಂಡಿರಲಿಲ್ಲ. ಹೈಕಮಾಂಡ್ ಕೈವಾಡ ಇಲ್ಲದಿದ್ದರೆ ಭಿನ್ನರಾಗದವರ ವಿರುದ್ಧ ಶಿಸ್ತುಕ್ರಮಗಳು ಯಾವಾಗಲೋ ಜರುಗಬೇಕಿತ್ತು. ಯಡಿಯೂರಪ್ಪ ಅವರನ್ನು ಕೈಬಿಟ್ಟು ಸರ್ಕಾರ ಉಳಿಸಿಕೊಳ್ಳುವ ಅಥವಾ ಮುಂದಿನ ಚುನಾವಣೆ ಎದುರಿಸುವ ಶಕ್ತಿಯೂ ಬಿಜೆಪಿಗೆ ಇಲ್ಲ. ಹೀಗಾಗಿ, ಹೈಕಮಾಂಡ್‌ನಲ್ಲಿ ಇರುವ ಕೆಲವರು ಯಡಿಯೂರಪ್ಪ ಅವರ ವಿರುದ್ಧ ಬಹಿರಂಗವಾಗಿ ಹೆಜ್ಜೆ ಇಡುತ್ತಿಲ್ಲ. ಈ ರೀತಿಯ ಭಿನ್ನಮತ ನಿಭಾಯಿಸಲು ಗಟ್ಟಿಯಾದ ನಾಯಕತ್ವ ಬೇಕು. ಯಡಿಯೂರಪ್ಪ ಅವರನ್ನು ‘ರಾಜಾಹುಲಿ’ ಎಂದು ಮಾಧ್ಯಮಗಳು ಕರೆದರೂ, ತಮ್ಮ ಸ್ಥಾನ ಉಳಿಸಿಕೊಳ್ಳುವ ಗಟ್ಟಿತನ ಅವರಲ್ಲಿ ಇದೆಯೇ ಎಂಬುದು ಈಗಿನ ಪ್ರಶ್ನೆ.

ಎ.ನಾರಾಯಣ, ರಾಜಕೀಯ ವಿಶ್ಲೇಷಕ, ಪ್ರಾಧ್ಯಾಪಕ

ಪೂರ್ಣ ಸಂವಾದ ವೀಕ್ಷಣೆಗೆ: https://www.facebook.com/prajavani.net

ಪ್ರಜಾವಾಣಿ ಡೆಕ್ಕನ್ ಹೆರಾಲ್ಡ್ (DH DECCAN HERALD)
ಕೋವಿಡ್ ಪರಿಹಾರ ನಿಧಿ

ಆಸ್ಪತ್ರೆಗಳ ಮುಂದೆ ಏದುಸಿರು ಬಿಡುವ ರೋಗಿಗಳನ್ನು ಹೊತ್ತುನಿಂತ ಆಂಬುಲೆನ್ಸ್‌ಗಳು, ಆಪ್ತರ ಜೀವ ಉಳಿಸಲು ಪ್ರಾಣವಾಯುವಿಗಾಗಿ ಅಂಗಲಾಚುವವರು, ಚಿತಾಗಾರಗಳ ಮುಂದೆ ಸಾಲು ಸಾಲು ಮೃತದೇಹಗಳು... ರಾಜ್ಯದಲ್ಲಿ ಕಳೆದ ಕೆಲವು ವಾರಗಳಿಂದ ಇಂತಹದ್ದೇ ಹೃದಯವಿದ್ರಾವಕ ನೋಟಗಳು. ಕೋವಿಡ್–19 ಕಾಣಿಸಿಕೊಂಡ ದಿನದಿಂದ ಇಲ್ಲಿಯವರೆಗೂ 27 ಲಕ್ಷಕ್ಕೂ ಅಧಿಕ ಜನ ಕಾಯಿಲೆಪೀಡಿತರಾಗಿದ್ದು, 31 ಸಾವಿರಕ್ಕೂ ಅಧಿಕ ಜನ ಮೃತಪಟ್ಟಿದ್ದಾರೆ. ಈ ಅಂಕಿ–ಸಂಖ್ಯೆಗಳು ಅಧಿಕೃತ ಮಾಹಿತಿಯಷ್ಟೆ. ನೈಜ ಚಿತ್ರಣ ಇನ್ನೂ ಕರಾಳವಾಗಿದೆ. ಎರಡನೇ ಅಲೆ ಪ್ರಾರಂಭವಾಗಿ ಈಗಾಗಲೇ ಎರಡು ತಿಂಗಳಿಗೂ ಅಧಿಕ ಸಮಯ ಕಳೆದಿದೆ.

ಇಂತಹ ಸನ್ನಿವೇಶದಲ್ಲಿ, ಕೋವಿಡ್ ಪರಿಹಾರ ಕಾರ್ಯದಲ್ಲಿ ತೊಡಗಿಸಿಕೊಂಡಿರುವ ಸ್ವಯಂಸೇವಾ ಸಂಸ್ಥೆಗಳಿಗೆ ‘ಡೆಕ್ಕನ್ ಹೆರಾಲ್ಡ್’ ಹಾಗೂ ‘ಪ್ರಜಾವಾಣಿ’ ಪತ್ರಿಕೆಗಳು ಬೆಂಬಲ ನೀಡಲು ನಿರ್ಧರಿಸಿವೆ. ನೀವು ನೀಡುವ ದೇಣಿಗೆಯ ಪ್ರತೀ ಪೈಸೆಯೂ ಸಂಕಷ್ಟಕ್ಕೆ ಒಳಗಾಗಿರುವ ಅರ್ಹ ಫಲಾನುಭವಿಗೆ ನೇರವಾಗಿ ಸೇರಿ, ಅವರ ಕಣ್ಣೀರು ಒರೆಸಲು ನೆರವಾಗಲಿದೆ.

₹ 1000 ಮತ್ತು ಅದಕ್ಕಿಂತ ಹೆಚ್ಚಿನ ದೇಣಿಗೆ ನೀಡಿದವರ ಹೆಸರನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು. ಈ ದೇಣಿಗೆಗೆ 80ಜಿ ಅನ್ವಯ ಆದಾಯ ತೆರಿಗೆಯಲ್ಲಿ ವಿನಾಯಿತಿ ಸಿಗಲಿದೆ.

ಹೀಗಾಗಿ, ನಿಮ್ಮ ಕೈಲಾದ ದೇಣಿಗೆಯನ್ನು (ಅದರ ಪ್ರಮಾಣ ಎಷ್ಟೇ ಇರಲಿ) ನೀಡಿ ಸಂಕಷ್ಟದಲ್ಲಿ ಸಿಲುಕಿದವರ ಬೆಂಬಲಕ್ಕೆ ನಿಲ್ಲುವ ಮಾನವೀಯ ಕಾರ್ಯದಲ್ಲಿ ಕೈಜೋಡಿಸುವಂತೆ ಕೋರುತ್ತೇವೆ.

ಆನ್‌ಲೈನ್ ಹಣ ವರ್ಗಾವಣೆ ಮೂಲಕ ಡೆಕ್ಕನ್ ಹೆರಾಲ್ಡ್–ಪ್ರಜಾವಾಣಿ ಪರಿಹಾರ ನಿಧಿ ಟ್ರಸ್ಟ್‌ಗೆ ದೇಣಿಗೆ ನೀಡಬಹುದು:
(Canara Bank, Cantonment Branch;
A/C NO.0404101200385, IFSC CODE : CNRB0000404)

ಡೆಬಿಟ್/ಕ್ರೆಡಿಟ್ ಕಾರ್ಡ್, ಯುಪಿಐ, ಇ-ವ್ಯಾಲೆಟ್ ಅಥವಾ ನೆಟ್‌ಬ್ಯಾಂಕಿಂಗ್ ಮೂಲಕ ಪಾವತಿಸುವವರು QR ಕೋಡ್ ಸ್ಕ್ಯಾನ್ ಮಾಡಿ ಅಥವಾ ಈ ಕೆಳಗಿನ ಲಿಂಕ್‌ಗೆ ಭೇಟಿ ಮಾಡಿ: **https://bit.ly/3iaryCA**

ದೇಣಿಗೆದಾರರು ತಾವು ನೀಡಿದ ದೇಣಿಗೆ ವಿವರದ ಜತೆಗೆ ಹೆಸರು, ವಿಳಾಸ ಹಾಗೂ ಸಂಪರ್ಕ ಸಂಖ್ಯೆಯನ್ನು dept.finc@printersmysore.co.in ಈ ಇ-ಮೇಲ್‌ಗೆ ಕಳುಹಿಸಲು ವಿನಂತಿ. ಇದರಿಂದ ದೇಣಿಗೆದಾರರಿಗೆ ರಸೀದಿ ಕಳಿಸಲು ಅನುಕೂಲವಾಗುತ್ತದೆ.

ದೇಣಿಗೆ ಕೊಟ್ಟವರ ವಿವರ

ಸಂ	ಹೆಸರು, ವಿಳಾಸ	ದೇಣಿಗೆ ₹ಗಳಲ್ಲಿ
1.	**ಎಂ. ವೆಂಕಟಸುಬ್ರಮಣಿಯನ್,** ನಂ.309, 4ನೇ ‘ಬಿ’ ಕ್ರಾಸ್, ಕಸ್ತೂರಿ ನಗರ, ಆರ್.ಎಂ. ನಗರ ಮುಖ್ಯರಸ್ತೆ, ಬೆಂಗಳೂರು	25,000
2.	**ಬಿ.ಜಿ. ಕುಸುಮಾ ಸಾಮಾಜಿಕ ಸೇವಾ ಟ್ರಸ್ಟ್,** ನಂ. 194, 5ನೇ ಮುಖ್ಯರಸ್ತೆ, 3ನೇ ಘಟ್ಟ, ಬನಶಂಕರಿ 3ನೇ ಹಂತ, ಕತ್ರಿಗುಪ್ಪೆ, ಬೆಂಗಳೂರು	25,000
3.	**ಪ್ರಕಾಶ್ ಭಗವಾನ್,** ಎಮಲೂರು, ಬೆಂಗಳೂರು	25,000
4.	**ಕೆ.ಎಂ.ಆರ್. ಪ್ರಸಾದ್,** ನಂ. 452, 39ನೇ ‘ಎ’ಕ್ರಾಸ್, ವಿ ಬ್ಲಾಕ್, ಜಯನಗರ, ಬೆಂಗಳೂರು	25,000
5.	**ಸಂಜಯ್ ದಂಡಿನ್,** 402 ಬಿ, ಅವನಿ ಅಮೂಲ್ಯ, ಮಣಿಪಾಲ್ ಆಸ್ಪತ್ರೆ ರಸ್ತೆ, ಬೆಮೆಲ್ 5ನೇ ಹಂತ, ಆರ್. ಆರ್. ನಗರ, ಬೆಂಗಳೂರು	10,000
6.	**ನೇಮಿಚಂದ್ರ,** 401, ವಿಜಯ್ ಟವರ್, 2ನೇ ಮೇನ್, ಆರ್‌ಪಿಸಿ ಲೇಔಟ್, ಬೆಂಗಳೂರು	10,000
7.	**ಡಾ.ಎಸ್. ಕೀರ್ತಿಕುಮಾರ್,** 484, 5ನೇ ಮೇನ್, ಗೋಕುಲಂ ಎಲ್ 2ನೇ ಹಂತ, ಮೈಸೂರು	6,000
8.	**ಎ.ಎಸ್. ಜಯರಾಮ,** ನಂ. 16, ಮೊದಲನೇ ‘ಸಿ’ ಮೇನ್, ಮೂಕಾಂಬಿಕಾ ನಗರ, ಬನಶಂಕರಿ 3ನೇ ಹಂತ, ಬೆಂಗಳೂರು	5,000
9.	**ಸರಳಾ ಗಣೇಶ್,** ಬಾಲಾಜಿಸ್ ರಾಯಲ್ ಕ್ಯಾಸಲ್, ಜಿ–1, ಡಾಲರ್ಸ್ ಕಾಲೊನಿ, 2ನೇ ಮೇನ್, ಗೋಕುಲ ರಸ್ತೆ, ಹುಬ್ಬಳ್ಳಿ	5,000
10.	**ಶಾರದಾ ಆಚಾರ್,** ನಂ. 337 ‘ಎಫ್’ ಬ್ಲಾಕ್, ಸಹಕಾರ ನಗರ, ಬೆಂಗಳೂರು	5,000
11.	**ಡಾ.ಎಚ್.ವಿ. ಅನಿಲ್‌ಕುಮಾರ್,** ಪ್ರಾಧ್ಯಾಪಕ, ರೇಷ್ಮೆ ಕೃಷಿ ವಿಭಾಗ, ಡಿವಿಎಸ್ ಕಲಾ ಮತ್ತು ವಿಜ್ಞಾನ ಕಾಲೇಜು, ಶಿವಮೊಗ್ಗ	5,000
12.	**ಮಂಜುಳಾ ಕೆ.,** ಶಿವಮೊಗ್ಗ	3,000
13.	**ಅಭಿಷೇಕ್ ವಿ.ಎಸ್.,** ರಾಮಮೋಹನಪುರಂ, ಬೆಂಗಳೂರು	3,000
14.	**ಶುಜಾಯತಅಲಿ ಎಚ್ ಹೊಸಮನಿ,** ಸಲಗರ ಚಾಳ ಹಿಂಭಾಗ, ಲೈನ್ ಬಜಾರ್, ಧಾರವಾಡ	2,500
15.	**ಶ್ರೀ ಬೆನಕ ಚಂದ್ರಮೌಳಿ,** ಮಂಜುನಾಥನಗರ, ಬೆಂಗಳೂರು	2,001
16.	**ಎಸ್.ಜೆ. ಬಸವರಾಜು,** ನಂ. 642, 2ನೇ ಮಹಡಿ, 6ನೇ ಮುಖ್ಯರಸ್ತೆ, ಕೆಸಿಎಚ್‌ಎಸ್ ಲೇಔಟ್, ನಾಗದೇವನಹಳ್ಳಿ, ಬೆಂಗಳೂರು	2,000
17.	**ಎಚ್‌ಎನ್. ನಾಗೇಂದ್ರ,** 743, 10ನೇ ಮುಖ್ಯರಸ್ತೆ, ವಿನಾಯಕ ಲೇಔಟ್, 4ನೇ ಹಂತ, ನಾಗರಬಾವಿ, ಬೆಂಗಳೂರು	2,000
18.	**ಥಾಮಸ್ ಕ್ಸೇವಿಯರ್,** ನಂ. 57, ಎಪಿ ರೆಸಿಡೆನ್ಸಿ, ಆನಂದನಗರ, ಡೊಮಿನೊಸ್ ಪಿಜ್ಜಾ ಮಳಿಗೆ ಪಕ್ಕ, ಮಾರತ್ತಹಳ್ಳಿ, ಬೆಂಗಳೂರು	2,000
19.	**ಸವಿತಾ ಎಚ್.ಎಂ.,** ಜಯನಗರ, ಬಿ.ಸಿ. ಮಲ್ಲಯ್ಯ ಲೇಔಟ್, ಟಿ.ಬಿ. ಸ್ಯಾನಿಟೋರಿಯಂ, ಕಂಟೋನ್ಮೆಂಟ್, ಬಳ್ಳಾರಿ	2,000
20.	**ಕರ್ನಾಟಕ ವಿಶ್ವಕರ್ಮ ವಧು–ವರರ ವೇದಿಕೆ,** ನಂ. 67/1, 18ನೇ ಕ್ರಾಸ್, 21ನೇ ಮೇನ್, ಮಾರುತಿ ಮಂದಿರ ಸಮೀಪ, ವಿಜಯನಗರ, ಬೆಂಗಳೂರು	2,000
21.	**ಆರ್. ನಾಗರಾಜ,** ನಂ. 125, 3ನೇ ಬ್ಲಾಕ್, 2ನೇ ಹಂತ, ಬಿಡಿಎ ಲೇಔಟ್, ನಾಗರಬಾವಿ, ಬೆಂಗಳೂರು	1,999
22.	**ನಾಗದಾಸರಿ ಎನ್. ಮುನಿನಾರಾಯಣ ಮತ್ತು ಕುಟುಂಬದವರು,** ಶ್ರೀಬೀರೇಶ್ವರ ನಿಲಯ, ನಂ. 9/10–33/2, 7ನೇ ಮೇನ್ ಕೊನೆಯ ರಸ್ತೆ, ಚಿಕ್ಕ ಆಡುಗೋಡಿ, ಬೆಂಗಳೂರು	1,501
23.	**ಮೈತ್ರಿ ಹರೀಶ್,** ನಂ. 141, 19ನೇ ಕ್ರಾಸ್, 21ನೇ ಮೇನ್, ವಿಜಯನಗರ, ಬೆಂಗಳೂರು	1,501
24.	**ಎಸ್.ವಿ. ಅನಂತಕೃಷ್ಣ,** ನಂ. 82, ಶ್ರೀ ನಿವಾಸ, ಮೊದಲನೇ ‘ಎ’ ಮುಖ್ಯರಸ್ತೆ, 2ನೇ ‘ಎ’ ಕ್ರಾಸ್, ಚಿಕ್ಕಬೊಮ್ಮಸಂದ್ರ, ಜಿ.ಕೆ.ವಿ.ಕೆ. ಪೋಸ್ಟ್, ಬೆಂಗಳೂರು	1,001
25.	**ಎಂ.ಎ. ಹನುಮಂತರಾಜು,** ಗಂಗೋತ್ರಿ ನಿಲಯ, ಒಕ್ಕಲಿಗರ ಸಮುದಾಯ ಭವನದ ಹಿಂದೆ, ಸೋಮೇಶ್ವರ ಎಕ್ಸ್‌ಟೆನ್ಷನ್, ದೊಡ್ಡಬಳ್ಳಾಪುರ, ಬೆಂಗಳೂರು	1,001
26.	**ಲೀಲಾ ಜಗದೀಶಕುಮಾರ್,** ಧರಣಿ ನಿಲಯ, 5ನೇ ಕ್ರಾಸ್, ಊರುಕೆರೆ, ತುಮಕೂರು	1,001
27.	**ಫಿಲೊಮಿನಾ ಸೂಸಿ,** ನಂ. 75, 3ನೇ ಮುಖ್ಯರಸ್ತೆ, ಗಂಗಾನಗರ ಎಕ್ಸ್‌ಟೆನ್ಷನ್, ಆರ್.ಟಿ. ನಗರ ಪೋಸ್ಟ್, ಬೆಂಗಳೂರು	1,000
28.	**ರಾಮಚಂದ್ರ ಚಾರಿ,** ನಂ. 14, 22ನೇ ಬ್ಲಾಕ್, ಬೆಮೆಲ್ ಲೇಔಟ್, ಶ್ರೀರಾಮಪುರ 2ನೇ ಹಂತ, ಮೈಸೂರು	1,000
29.	**ಪ್ರಶಾಂತ್ ಜಿ.** 3328, 15ನೇ ಮೇನ್ ಎಂಸಿಸಿ ‘ಬಿ’ ಬ್ಲಾಕ್, ದಾವಣಗೆರೆ	1,000
30.	**ಶ್ರೀಕಮಲ್ ಟ್ರಸ್ಟ್,** ನಂ. 75, 12ನೇ ಮೇನ್, ಬನಶಂಕರಿ 2ನೇ ಹಂತ, ಬಿಎನ್‌ಎಂ ಐಟಿ ಗೇಟ್ ನಂ. 1ರ ಎದುರು, ಬೆಂಗಳೂರು	1,000
31.	**ಟಿ.ಎಸ್. ಲಕ್ಷ್ಮೀಕಾಂತನ್,** ನಂ. 75, 12ನೇ ಮೇನ್, ಬನಶಂಕರಿ 2ನೇ ಹಂತ, ಬಿಎನ್‌ಎಂ ಐಟಿ ಗೇಟ್ ನಂ. 1ರ ಎದುರು, ಬೆಂಗಳೂರು	1,000
	ಒಟ್ಟು ಹಣ:	98,55,000

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ನಾಲ್ಕನೇ ವರ್ಷದ ಚಿರಸ್ಮರಣೆ

ಜನನ: 15-07-1957
ನಿಧನ: 08-06-2017
ಶ್ರೀ ಕೆ.ಎ. ರಾಮಚಂದ್ರರೆಡ್ಡಿ (ಕೂಡ್ಲು)
ಅಣ್ಣಯ್ಯರೆಡ್ಡಿರವರ ಮಗ,
ಮಾಲೀಕರು: ಎಸ್.ಬಿ.ಡಬ್ಲ್ಯೂ ಆಸ್ಫಲೆಟ್ಸ್, ಪ್ರಥಮದರ್ಜೆ ಗುತ್ತಿಗೆದಾರರು, ಬೆಂಗಳೂರು
ನೀವು ನಮ್ಮನಗಲಿ ಇಂದಿಗೆ ನಾಲ್ಕು ವರ್ಷ ಕಳೆದರೂ, ನಿಮ್ಮ ಪ್ರೀತಿ, ತ್ಯಾಗಮಯ ಜೀವನ, ತಾಳ್ಮೆ, ಆದರ್ಶಗಳೇ ನಮ್ಮ ಬದುಕಿಗೆ ದಾರಿದೀಪ, ನಿಮ್ಮ ಮರ್ಗದರ್ಶನದಲ್ಲಿ ಸಾಗುತ್ತಿರುವ
ಸದಾ ನಿಮ್ಮ ನೆನಪಿನಲ್ಲಿರುವ ದುಃಖತಪ್ತ: ಪತ್ನಿ, ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು

FOR CLASSIFIED ADVERTISEMENTS
EDUCATION
Contact:
Santhosh: 9880856233
Vishal : 9845114560
Ravi : 9606912256

ಭಾವಪೂರ್ಣ ಶ್ರದ್ಧಾಂಜಲಿ

ವಿ.ಕೆ ಗೋಪಾಲ್ ರವರು
ಅಧ್ಯಕ್ಷರು –ಜಾತ್ಯಾತೀತ ಜನತಾದಳ (ಪದ್ಮನಾಭನಗರ ವಿದಾನಸಭಾ ಕ್ಷೇತ್ರ)
ಅಧ್ಯಕ್ಷರು – ಬಿಡಿಎ ಗುತ್ತಿಗೆದಾರರ ಸಂಘ, ಆಂತರಿಕ ಲೆಕ್ಕ ಪರಿಶೋಧಕರು – ಕಮ್ಮವಾರಿ ಸಂಘ
06.12.1965 - 07.06.2021
ಶ್ರೀಯುತರು ದಿನಾಂಕ: 07.06.2021ನೇ ಸೋಮವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿ.
ದುಃಖತಪ್ತರು
ಧರ್ಮಪತ್ನಿ ಗಾಯಿತ್ರಿ, ಮಗ ವಿ.ಜಿ.ಹೇಮಂತ್, ಮಗಳು ವಿ.ಜಿ.ವಂದನಾ ಮತ್ತು ಕುಟುಂಬವರ್ಗ
ಫೋನ್: 99001 55908

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Tanveer : 9886213331
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ scan the QR code ಸ್ಕ್ಯಾನ್ ಮಾಡಿ ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಅನುಮತಿ ಪಡೆದಿಲ್ಲ; ನಿಯಮ ಉಲ್ಲಂಘನೆ

ಒಂದನೇ ಪುಟದಿಂದ

‘ಈಜುಕೊಳಕ್ಕೆ ನೀರಿನ ಬಳಕೆಗಾಗಿ ನಮಗೂ ಸಹ ಮನವಿ ಬಂದಿಲ್ಲ’ ಎಂದು ವಾಣಿವಿಲಾಸ ನೀರು ಸರಬರಾಜು ವಿಭಾಗದ ಹಾಲಿ ಅಧಿಕಾರಿಯೊಬ್ಬರು ತಿಳಿಸಿದರೆ, ನಿವೃತ್ತ ಅಧಿಕಾರಿಯೊಬ್ಬರು ‘ನನ್ನನ್ನು ಯಾರು ಕೇಳುತ್ತಾರೆ ಎಂಬ ಮನೋಭಾವನೆಯಿಂದ ಮಾಡಿಕೊಂಡಿದ್ದಾರೆ. ಆಡಳಿತಾರೂಢರು, ಅಧಿಕಾರಸ್ಥರ ಕಾರ್ಯವೈಖರಿಯೇ ಹೀಗೆ. ಏನೂ ಮಾಡಕ್ಕಾಗಲ್ಲ’ ಎಂದು ಬೇಸರ ವ್ಯಕ್ತಪಡಿಸಿದರು.

ನಿಯಮ ಉಲ್ಲಂಘನೆ ಆಗಿದೆ: ‘ಅದು ಪಾರಂಪರಿಕ ಕಟ್ಟಡವಷ್ಟೇ ಅಲ್ಲ. ಆ ಕಟ್ಟಡದ ವ್ಯಾಪ್ತಿಯೂ ಸಂರಕ್ಷಣಾ ಪ್ರದೇಶ. ಹೊಸ ನಿಯಮದಂತೆ, ಪರಂಪರೆ ಇಲಾಖೆಯ ತಜ್ಞರ ವರದಿಯಂತೆಯೇ ಕಾಮಗಾರಿ ನಡೆಸಬೇಕು. ಈಜುಕೊಳ ನಿರ್ಮಾಣ ವಿಷಯದಲ್ಲಿ ನಿಯಮಾವಳಿ ಉಲ್ಲಂಘನೆಯಾಗಿರುವುದು ಸ್ಪಷ್ಟ’ ಎಂದು ಪಾರಂಪರಿಕ ಸಮಿತಿ ಸದಸ್ಯ, ಇತಿಹಾಸ ತಜ್ಞ ಪ್ರೊ.ಎನ್.ಎಸ್. ರಂಗರಾಜು ತಿಳಿಸಿದರು.

ರೋಹಿಣಿ ಅಮಾನತಿಗೆ ಆಗ್ರಹಿಸಿ ಮುಖ್ಯಮಂತ್ರಿಗೆ ಪತ್ರ

ಪಾರಂಪರಿಕ ಸಂರಕ್ಷಣಾ ಸಮಿತಿಯ ಅನುಮತಿಯಿಲ್ಲದೆ ‘ಜಲಸನ್ನಿಧಿ’ಯಲ್ಲಿ ₹ 16.35 ಲಕ್ಷ ವೆಚ್ಚದಲ್ಲಿ ನವೀಕರಣ ಕಾಮಗಾರಿ ನಡೆಸಿ, ನೆಲಹಾಸಿಗೆ ವಿಟ್ರಿಫೈಡ್ ಟೈಲ್ಸ್ ಅಳವಡಿಸಿದ ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ಅವರನ್ನು ಅಮಾನತುಗೊಳಿಸಬೇಕು ಎಂದು ಆಗ್ರಹಿಸಿ ಜೆಡಿಎಸ್ ಶಾಸಕ ಸಾ.ರಾ. ಮಹೇಶ್ ಜೂನ್ 5ರಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರಿಗೆ ಪತ್ರ ಬರೆದಿದ್ದಾರೆ.

ಹೆರಿಟೇಜ್ ರೆಗ್ಯುಲೇಷನ್‌ನಿಂದ ಅಭಿವೃದ್ಧಿಗೆ ಅಡ್ಡಿಯಾಗಲಿದೆ. ಮೈಸೂರನ್ನು ಹೊರಗಿಡುವಂತೆ ಮನವಿ ಮಾಡಲಾಗುವುದು

ಡಿ.ಬಿ.ನಟೇಶ್, ಮುಡಾ ಆಯುಕ್ತ

2020ರ ಹೆರಿಟೇಜ್ ರೆಗ್ಯುಲೇಷನ್ (ತಿದ್ದುಪಡಿ) ಅನ್ವಯ ಪಾರಂಪರಿಕ ಸಂರಕ್ಷಣಾ ಸಮಿತಿ ರಚಿಸುವಂತೆ ಮುಡಾ ಆಯುಕ್ತರಿಗೆ 3 ಪತ್ರ ಬರೆದಿರುವೆ.

ಬಿ.ಆರ್.ಪೂರ್ಣಿಮಾ, ಆಯುಕ್ತರು, ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ

ಕೋವಿಡ್: ಮೃತರ ಸಂಖ್ಯೆ ಮತ್ತೆ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಮೃತರ ಸಂಖ್ಯೆ ಅಲ್ಪ ಏರಿದ್ದು, ಸೋಮವಾರ 340 ಮಂದಿ ಸಾವಿಗೀಡಾಗಿದ್ದಾರೆ. ರಾಜ್ಯದಲ್ಲಿ ಕೋವಿಡ್ ಮರಣ ಪ್ರಮಾಣ ದರ ಶೇ 2.84 ಹಾಗೂ ಮೃತಪಟ್ಟವರ ಒಟ್ಟು ಸಂಖ್ಯೆ 31,920ಕ್ಕೆ ಮುಟ್ಟಿದೆ.

ಹಿಂದಿನ 24 ಗಂಟೆಗಳಲ್ಲಿ 11,958 ಮಂದಿಯಲ್ಲಿ ಹೊಸದಾಗಿ ಸೋಂಕು ದೃಢಪಟ್ಟಿದ್ದು, ಕೋವಿಡ್ ರೋಗಿಗಳ ಒಟ್ಟು ಸಂಖ್ಯೆ 27.07 ಲಕ್ಷಕ್ಕೆ ಏರಿಕೆಯಾಗಿದೆ. ಸೋಂಕು ದೃಢ ಪ್ರಮಾಣ ಶೇ 9.08ಕ್ಕೆ ಇಳಿದಿದೆ.

ಸೋಮವಾರ 27,299 ಮಂದಿಯಲ್ಲಿ ಕಾಯಿಲೆ ವಾಸಿಯಾಗಿದೆ. ಹೀಗಾಗಿ ಸಕ್ರಿಯ ಪ್ರಕರಣಗಳ ಸಂಖ್ಯೆ 2.38 ಲಕ್ಷಕ್ಕೆ ತಗ್ಗಿದೆ. ರಾಜ್ಯದಲ್ಲಿ ಇದುವರೆಗೆ ಒಟ್ಟು 24.36 ಲಕ್ಷ ಮಂದಿ ಗುಣಮುಖರಾಗಿದ್ದಾರೆ. ಕೋವಿಡ್ ಪರೀಕ್ಷೆಗಳ ಸಂಖ್ಯೆ ಮತ್ತೆ ಕಡಿಮೆಯಾಗಿದೆ. ಒಂದು ದಿನದಲ್ಲಿ 1.31ಲಕ್ಷ ಮಂದಿಯ ಮಾದರಿಗಳನ್ನು ಪರೀಕ್ಷಿಸಲಾಗಿದೆ.

ಯಾದಗಿರಿ ಬಿಟ್ಟು ಉಳಿದ ಎಲ್ಲಾ ಜಿಲ್ಲೆಗಳಲ್ಲೂ ಮರಣ ಪ್ರಕರಣಗಳು ವರದಿಯಾಗಿವೆ. ಬೆಂಗಳೂರಿನಲ್ಲಿ ಸಾವಿನ ಸಂಖ್ಯೆ 199 ರಷ್ಟಿದೆ . ಬೆಳಗಾವಿ (15), ಹಾಸನ ಮತ್ತು ಹಾವೇರಿ (ತಲಾ 10), ಮೈಸೂರು (17), ಬಳ್ಳಾರಿ (9), ಧಾರವಾಡ (8) ಹಾಗೂ ಶಿವಮೊಗ್ಗದಲ್ಲೂ (9) ಹೆಚ್ಚು ಜನ ಮೃತಪಟ್ಟಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ
Part-Time Jobs

ಲಾಕ್-ಡೌನ್ ಸಮಯದಲ್ಲಿ ಸುವರ್ಣಾವಕಾಶ ಮನೆಯಿಂದಲೇ ಕುಳಿತು ಫಾರಂನಲ್ಲಿ ಅಂಕಿಗಳು ತುಂಬುವ ಮೂಲಕ,ಗಳಿಸಿ 15,000-25,000/-. ಕೊರಿಯರ್ ಬುಕ್,ಪೆನ್ ಚಾರ್ಜಸ್ ನಾವೇ ಕೊಡುತ್ತೇವೆ.9108059956, 9901929956

ಮನೆಯಿಂದಲೇ ಕುಳಿತು ಆಫ್‌ಲೈನ್ ಡೇಟಾ ಎಂಟ್ರಿ, ಕನ್ನಡ,ಇಂಗ್ಲೀಷ್ ಬುಕ್ ರೈಟಿಂಗ್ ಫಾರಂ ಫಿಲ್ಲಿಂಗ್ ಕೆಲಸ ಗಳಿಸಿ 15,000-18,000/-. ಕೊರಿಯರ್,ಬುಕ್,ಪೆನ್ ಚಾರ್ಜಸ್ ನಾವೇ ಕೊಡುತ್ತೇವೆ.9686114647, 9900229091

DH DECCAN HERALD ಪ್ರಜಾವಾಣಿ
FOR CLASSIFIED ADVERTISEMENTS
EDUCATION
Contact:
Santhosh: 9880856233
Jerry: 9731810277
Tanveer: 9886213331

ಭವಿಷ್ಯ
Astrology

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೇಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ, 7022443071

★||ಸಿಗಂದೂರು ಚೌಡೇಶ್ವರಿ||★ ವಶೀಕರಣಆಗಬೇಕಾದವರಿಗೆ ಹಚ್ಚುವುದಾಗಲಿ,ತಿನ್ನಿಸುವುದಾಗಲಿ, ಬಟ್ಟೆ,ಫೋಟೋ, ಕೂದಲು ಇಲ್ಲದಿದ್ದರೂ ಸ್ತ್ರೀಪುರುಷ ಲೈಂಗಿಕ ವಶೀಕರಣ, ಸ್ತ್ರೀಯರಿಗೆ 7ಗಂಟೆಗಳಲ್ಲಿ ಉಚಿತ ಪರಿಹಾರ.9845153558

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ಸ್ತ್ರೀಪುರುಷ ವಶಕ್ಕೆ "ಕೇರಳ ಕಾಶ್ಮೋರ" ಪೂಜಾ ಶಕ್ತಿಯಿಂದ 'ರತಿ ಕಾಮರಾಜ' ಮಂತ್ರದಿಂದ ಕೇವಲ 24 ಘಂಟೆಗಳಲ್ಲಿ ಪರಿಹಾರ ನೀಡಲಾಗುವುದು. 9686007334

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಕೋವಿಡ್: ಹುಲಿ ಯೋಜನೆ ಪ್ರದೇಶಗಳಲ್ಲಿ ಪ್ರವಾಸ ನಿರ್ಬಂಧ

ಬೆಂಗಳೂರು: ತಮಿಳುನಾಡಿನ ವಂಡಲೂರು ಜೈವಿಕ ಉದ್ಯಾನದಲ್ಲಿ ಕೋವಿಡ್ 19 ಸೋಂಕಿನಿಂದ ಸಿಂಹಿಣಿಯೊಂದು ಮೃತಪಟ್ಟು, ಉಳಿದ ಸಿಂಹಗಳಿಗೆ ಸೋಂಕು ಹರಡಿರುವುದು ದೃಢಪಟ್ಟಿರುವುದರಿಂದ ಮುನ್ನೆಚ್ಚರಿಕೆ ಕ್ರಮವಾಗಿ ದೇಶದ ಎಲ್ಲ ಹುಲಿ ಯೋಜನೆ ಪ್ರದೇಶಗಳಲ್ಲಿ ಪ್ರವಾಸೋದ್ಯಮ ಚಟುವಟಿಕೆಗಳನ್ನು ಮುಂದಿನ ಆದೇಶದವರೆಗೆ ನಿರ್ಬಂಧಿಸಲಾಗಿದೆ.

ವಂಡಲೂರಿನ ಜೈವಿಕ ಉದ್ಯಾನದ ಸಿಂಹಗಳಲ್ಲಿ ಕೊರೊನಾ ಸೋಂಕು ಕಾಣಿಸಿಕೊಂಡಿರುವುದರಿಂದ ಈ ಸೋಂಕು ದೊಡ್ಡಮಟ್ಟದಲ್ಲಿ ವನ್ಯಜೀವಿಗಳಿಗೂ ಮನುಷ್ಯರಿಂದ ಹರಡುತ್ತಿರುವುದು ಖಾತ್ರಿಯಾಗಿದೆ. ಹುಲಿ ಯೋಜನೆ ಪ್ರದೇಶಗಳಲ್ಲೂ ಇದೇ ರೀತಿ ಸೋಂಕು ಹರಡುವ ಅಪಾಯವಿದೆ. ಹಾಗಾಗಿ ತಕ್ಷಣದಿಂದಲೇ ತಮ್ಮ ವ್ಯಾಪ್ತಿಯ ಹುಲಿ ಯೋಜನೆ ಪ್ರದೇಶಗಳಲ್ಲಿ ಪ್ರವಾಸೋದ್ಯಮ ಚಟುವಟಿಕೆಗಳನ್ನು ನಿರ್ಬಂಧಿಸುವಂತೆ ಸೋಮವಾರ ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರದ(ಎನ್‌ಟಿಸಿಎ) ಡಿಐಜಿ ರಾಜೇಂದ್ರ ಜಿ. ಗರ್ವದ್ ಅವರು ಎಲ್ಲ ರಾಜ್ಯಗಳ ವನ್ಯಜೀವಿ ಮುಖ್ಯ ಪರಿಪಾಲಕರಿಗೆ ಆದೇಶ ನೀಡಿದ್ದಾರೆ.

ಅಂತರ ಕಾಯ್ದುಕೊಳ್ಳಿ

ಸಂಕ್ಷಿಪ್ತ ಸುದ್ದಿ

ಬಂಗಾಳ: ಸಿಡಿಲಿಗೆ 20 ಮಂದಿ ಸಾವು

ಕೋಲ್ಕತ್ತ (ಪಿಟಿಐ): ದಕ್ಷಿಣ ಬಂಗಾಳದ ಮೂರು ಜಿಲ್ಲೆಗಳಲ್ಲಿ ಸೋಮವಾರ ಸಂಭವಿಸಿದ ಸಿಡಿಲಿನ ಅಬ್ಬರಕ್ಕೆ ಸುಮಾರು 20 ಜನರು ಸಾವಿಗೀಡಾಗಿದ್ದಾರೆ ಎಂದು ರಾಜ್ಯ ವಿಪತ್ತು ನಿರ್ವಹಣಾ ಅಧಿಕಾರಿಗಳು ತಿಳಿಸಿದ್ದಾರೆ.

ಮುರ್ಷಿದಾಬಾದ್‌ನಲ್ಲಿ ಮತ್ತು ಹೂಗ್ಲಿಯಲ್ಲಿ ತಲಾ ಒಂಬತ್ತು ಮಂದಿ ಸಾವನ್ನಪ್ಪಿದರೆ, ಪುರ್ಬಾ ಮೆದಿನಿಪುರ ಜಿಲ್ಲೆಯಲ್ಲಿ ಇಬ್ಬರು ಸಿಡಿಲು ಬಡಿದು ಪ್ರಾಣ ಕಳೆದುಕೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮುರ್ಷಿದಾಬಾದ್ ಜಿಲ್ಲೆಯಲ್ಲಿ ಸಂಭವಿಸಿದ ಸಿಡಿಲಿನ ಅಬ್ಬರಕ್ಕೆ ಇನ್ನೂ ಮೂವರು ಗಾಯಗೊಂಡಿದ್ದು, ಅವರನ್ನು ಜಂಗೀಪುರ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಿಸಲಾಗಿದೆ ಎಂದು ಅವರು ಹೇಳಿದರು.

ಪುಣೆ: ಕಾರ್ಖಾನೆಯಲ್ಲಿ ಬೆಂಕಿ ದುರಂತ: 18 ಮಂದಿ ಸಾವು

ಪುಣೆ (ಪಿಟಿಐ): ಇಲ್ಲಿನ ಮುಲ್ಶಿ ಕೈಗಾರಿಕಾ ಪ್ರದೇಶದ ರಾಸಾಯನಿಕ ಕಾರ್ಖಾನೆಯೊಂದರಲ್ಲಿ ಸೋಮವಾರ ಸಂಭವಿಸಿದ ಅಗ್ನಿ ಅವಘಡದಲ್ಲಿ 15 ಮಂದಿ ಮಹಿಳೆಯರು ಸೇರಿ 18 ಜನರು ಮೃತಪಟ್ಟಿದ್ದಾರೆ.

ಪಿರಂಗುಟ್ ಗ್ರಾಮದಲ್ಲಿರುವ ‘ಎಸ್‌ವಿಎಸ್ ಅಕ್ವಾ ಟೆಕ್ನಾಲಜೀಸ್’ ಕಾರ್ಖಾನೆಯಲ್ಲಿ ದುರಂತ ಸಂಭವಿಸಿದೆ. ಸುಮಾರು 20 ಮಂದಿ ಪಾರಾಗಿದ್ದಾರೆ. ಬೆಂಕಿಯಿಂದ ತೀವ್ರವಾಗಿ ಸುಟ್ಟಿದ್ದ ಶವಗಳನ್ನು ಹೊರತೆಗೆಯಲಾಗಿದೆ. ಈ ಕುರಿತು ತನಿಖೆಗೆ ಆದೇಶಿಸಲಾಗಿದೆ ಎಂದು ಜಿಲ್ಲಾಡಳಿತ ತಿಳಿಸಿದೆ. ಬೆಂಕಿಯಿಂದಾಗಿ ವಾತಾವರಣವನ್ನು ದಟ್ಟ ಹೊಗೆ ಆವರಿಸಿತ್ತು. ಸ್ಥಳಕ್ಕೆ ಪುಣೆ ಜಿಲ್ಲಾಧಿಕಾರಿ ಡಾ.ರಾಜೇಶ್ ದೇಶಮುಖ್, ಪುಣೆ ಗ್ರಾಮಾಂತರ ಎಸ್‌ಪಿ ಡಾ. ಅಭಿನವ್ ದೇಶಮುಖ್ ಮತ್ತು ಇತರೆ ಹಿರಿಯ ಅಧಿಕಾರಿಗಳು ಧಾವಿಸಿದ್ದರು.

ಪ್ರಧಾನಿ ನರೇಂದ್ರ ಮೋದಿ ಟ್ವೀಟ್ ಮಾಡಿದ್ದು ಸಂತಾಪ ವ್ಯಕ್ತಪಡಿಸಿದ್ದಾರೆ. ಮೃತರ ಕುಟುಂಬಗಳಿಗೆ ಕೇಂದ್ರ ಸರ್ಕಾರ ತಲಾ ₹ 2 ಲಕ್ಷ, ಗಾಯಗೊಂಡವರಿಗೆ ₹ 50 ಸಾವಿರ ಪರಿಹಾರ ಘೋಷಿಸಿದೆ.

ಕೋವಿಡ್ ಪರಿಕರಗಳಿಗೆ ಜಿಎಸ್‌ಟಿ ವಿನಾಯಿತಿ ಕೇಂದ್ರಕ್ಕೆ ವರದಿ

ನವದೆಹಲಿ (ಪಿಟಿಐ): ಕೋವಿಡ್ ಸಂಬಂಧಿತ ಮಾಸ್ಕ್, ಲಸಿಕೆ, ಪಿಪಿಇ ಕಿಟ್‌ಗಳಿಗೆ ಜಿಎಸ್‌ಟಿಯಿಂದ ವಿನಾಯಿತಿ ನೀಡುವ ಕುರಿತು ಸಲಹೆ ನೀಡಲು ರಚಿಸಿದ್ದ ಸಚಿವರ ಸಮಿತಿಯು ಸೋಮವಾರ ಈ ಸಂಬಂಧ ವರದಿ ಸಲ್ಲಿಸಿದೆ.

ಜೂನ್ 8ರ ಒಳಗೆ ವರದಿ ಸಲ್ಲಿಸಲು ಜಿಎಸ್‌ಟಿ ಮಂಡಳಿ ಸೂಚಿಸಿತ್ತು.

ಲಸಿಕೆಯ ಎರಡೂ ಡೋಸ್ ಪಡೆದಿದ್ದವರ ಅಭಿಪ್ರಾಯ ಆಧರಿಸಿದ ಅಧ್ಯಯನ

ಪ್ರತಿಕಾಯ ಸೃಷ್ಟಿ: ಕೋವಿಶೀಲ್ಡ್‌ನಿಂದಲೇ ಅಧಿಕ

ನವದೆಹಲಿ (ಪಿಟಿಐ): ಕೋವಿಡ್ ಸೋಂಕು ವಿರುದ್ಧ ಕೊವ್ಯಾಕ್ಸಿನ್ ಲಸಿಕೆಗೆ ಹೋಲಿಸಿದರೆ ಕೋವಿಶೀಲ್ಡ್ ಲಸಿಕೆಯು ದೇಹದಲ್ಲಿ ಹೆಚ್ಚಿನ ಪ್ರತಿಕಾಯಗಳನ್ನು ಸೃಷ್ಟಿಸಲಿದೆ ಎಂದು ಹೊಸ ಅಧ್ಯಯನವೊಂದು ತಿಳಿಸಿದೆ.

ಈ ಲಸಿಕೆಗಳ ಎರಡೂ ಡೋಸ್ ಪಡೆದಿರುವ ಆರೋಗ್ಯ ಕಾರ್ಯಕರ್ತರ ಅಭಿಪ್ರಾಯಗಳನ್ನು ಆಧರಿಸಿ ದೇಶವ್ಯಾಪಿ ಈ ಅಧ್ಯಯನ ನಡೆಸಿತ್ತು.

ಎರಡೂ ಲಸಿಕೆಗಳು ಉತ್ತಮ ನಿರೋಧಕ ಶಕ್ತಿ ಹೊಂದಿವೆ ಎಂದು ವರದಿ ಹೇಳಿದೆ.

ಮೆಡ್‌ರಿಕ್ಸಿವ್ ವೆಬ್‌ನಲ್ಲಿ ಪ್ರಕಟವಾಗಿರುವ ಪೂರ್ವಮುದ್ರಿತ ವರದಿಯ ಅನುಸಾರ, 13 ರಾಜ್ಯಗಳ 22 ನಗರಗಳಲ್ಲಿ 305 ಪುರುಷ, 210 ಮಹಿಳಾ ಆರೋಗ್ಯ ಕಾರ್ಯಕರ್ತರ ಅಭಿಪ್ರಾಯವನ್ನು ಸಮೀಕ್ಷೆಯಲ್ಲಿ ಪಡೆಯಲಾಗಿದೆ.

ಆಕ್ಸ್‌ಫರ್ಡ್‌ ಆಸ್ಟ್ರಾಜೆನಿಕಾದ ಕೋವಿಶೀಲ್ಡ್ ಲಸಿಕೆಯನ್ನು ಪುಣೆಯ ಸೀರಂ ಇನ್‌ಸ್ಟಿಟ್ಯೂಟ್ ಉತ್ಪಾದಿಸುತ್ತಿದೆ. ಕೊವ್ಯಾಕ್ಸಿನ್ ದೇಶೀಯ ಲಸಿಕೆಯಾಗಿದ್ದು, ಹೈದರಾಬಾದ್ ಮೂಲದ ಭಾರತ್ ಬಯೊಟೆಕ್ ಉತ್ಪಾದಿಸುತ್ತಿದೆ.



ಪ್ರಾತಿನಿಧಿಕ ಚಿತ್ರ

'ಅಧ್ಯಯನಕ್ಕೆ ಸ್ಪಂದಿಸಿದವರ ರಕ್ತದ ಮಾದರಿಯನ್ನೂ ಪ್ರಯೋಗಕ್ಕೆ ಒಳಪಡಿಸಿ, ದೇಹದಲ್ಲಿ ಸೃಷ್ಟಿಯಾಗಿದ್ದ ಪ್ರತಿಕಾಯಗಳ ಪ್ರಮಾಣವನ್ನು ಗುರುತಿಸಲಾಗಿದೆ. ಅದರ ಪ್ರಕಾರ, ಕೋವಿಶೀಲ್ಡ್ ಲಸಿಕೆ ಪಡೆದವರಲ್ಲಿ ಹೆಚ್ಚು ಪ್ರತಿಕಾಯಗಳಿದ್ದವು' ಎಂದು ಅಧ್ಯಯನ ವರದಿಯ ಮುಖ್ಯ ಲೇಖಕರಾದ ಕೋಲ್ಕತ್ತದ ಜಿ.ಡಿ.ಆಸ್ಪತ್ರೆ ಅಂತಃಸ್ರಾವಶಾಸ್ತ್ರದ ಅವಧೇಶ್ ಕುಮಾರ್ ಸಿಂಗ್ ಅವರು ತಿಳಿಸಿದರು.

ಕೋವಿಶೀಲ್ಡ್ ಲಸಿಕೆಯನ್ನು ಪಡೆದವರಲ್ಲಿ ಸಕಾರಾತ್ಮಕ ಪ್ರತಿಕಾಯಗಳ ಪ್ರಮಾಣ ಹೆಚ್ಚಿದ್ದಿತು. ಎರಡು ಲಸಿಕೆಗಳ, ಎರಡೂ ಡೋಸ್ ಪಡೆದಿದ್ದ 515 ಆರೋಗ್ಯ ಕಾರ್ಯಕರ್ತರಲ್ಲಿ ಪ್ರತಿಕಾಯಗಳ ಪ್ರಮಾಣ ಶೇ 95ರಷ್ಟಿತ್ತು. ಕೋವಿಶೀಲ್ಡ್ ಲಸಿಕೆ ಪಡೆದಿದ್ದ 425 ಮತ್ತು ಕೊವ್ಯಾಕ್ಸಿನ್ ಲಸಿಕೆ ಪಡೆದಿದ್ದ 90 ಆರೋಗ್ಯ ಕಾರ್ಯಕರ್ತರಲ್ಲಿ ಪ್ರತಿಕಾಯಗಳ ಪ್ರಮಾಣ ಕ್ರಮವಾಗಿ ಶೇ 98.1 ಮತ್ತು ಶೇ 80ರಷ್ಟಿತ್ತು ಎಂದು ಅವರು ವಿವರಿಸಿದರು.

ಅಹಮದಾಬಾದ್‌ನ ವಿಜಯರತ್ನ ಮಧುಮೇಹ ಕೇಂದ್ರ, ಕೋಲ್ಕತ್ತದ ಜಿ.ಡಿ.ಆಸ್ಪತ್ರೆ, ಧನ್‌ಬಾದ್‌ನ ಮಧುಮೇಹ ಮತ್ತು ಹೃದ್ರೋಗ ಸಂಶೋಧನಾ ಕೇಂದ್ರ, ಜೈಪುರದ ರಾಜಸ್ಥಾನದ ಆಸ್ಪತ್ರೆ, ಮಹಾತ್ಮಗಾಂಧಿ ವೈದ್ಯಕೀಯ ಕಾಲೇಜಿನ ವಿವಿಧ ಸಂಶೋಧಕರು ಈ ಅಧ್ಯಯನ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದರು.

ಲಸಿಕೆ ಪಡೆದ ನಂತರ ದೇಹದಲ್ಲಿ ಸೃಷ್ಟಿಯಾದ ಪ್ರತಿಕಾಯಗಳ ಪ್ರಮಾಣ 60 ವರ್ಷ ಮೀರಿದವರಲ್ಲಿ ಕಡಿಮೆ ಇದ್ದರೆ, ಅದಕ್ಕಿಂತಲೂ ಕೆಳಗಿನ ವಯಸ್ಸಿನವರಲ್ಲಿ ಹೆಚ್ಚಿನದಾಗಿತ್ತು. ಲಿಂಗ, ಭೌತಿಕ ದ್ರವ್ಯರಾಶಿ ಸೂಚಿ (ಬಿಎಂಐ) ಅಂತಹ ಪರಿಣಾಮ ಬೀರಿಲ್ಲ. ಆದರೆ, ಟೈಪ್–2 ಹಂತದ ಮಧುಮೇಹದಿಂದ ಬಳಲುತ್ತಿರುವವರಲ್ಲಿ ಪ್ರತಿಕಾಯ ಪ್ರಮಾಣ ಕಡಿಮೆ ಇತ್ತು ಎಂದು ವರದಿಯು ತಿಳಿಸಿದೆ.

ಕೋವಿಡ್‌ನಿಂದ ಚೇತರಿಸಿಕೊಂಡ ಆರು ತಿಂಗಳ ನಂತರ ಲಸಿಕೆ ಪಡೆದಿದ್ದ, ಹಾಗೂ ಎರಡೂ ಡೋಸ್ ಗಳನ್ನು ಪಡೆದಿದ್ದವರಲ್ಲಿ ಇತರರಿಗೆ ಹೋಲಿಸಿದರೆ ಅಧಿಕ ಪ್ರತಿಕಾಯಗಳು ಸೃಷ್ಟಿಯಾಗಿದ್ದವು ಎಂದು ವರದಿ ವಿವರಿಸಿದೆ.

2–18ರ ಮಕ್ಕಳಿಗೆ ಕೋವ್ಯಾಕ್ಸಿನ್ ಪ್ರಯೋಗಕ್ಕೆ ತಪಾಸಣೆ ಆರಂಭ

'ದೇಶೀಯವಾಗಿ ಅಭಿವೃದ್ಧಿಪಡಿಸಲಾಗಿರುವ ಕೋವಿಡ್ ಲಸಿಕೆ ಕೋವ್ಯಾಕ್ಸಿನ್‌ನ ಪ್ರಯೋಗಕ್ಕಾಗಿ 2 ರಿಂದ 18 ವರ್ಷದೊಳಗಿನ ಮಕ್ಕಳ ತಪಾಸಣೆ ಕಾರ್ಯ ದೆಹಲಿಯ ಏಮ್ಸ್‌ನಲ್ಲಿ ಸೋಮವಾರ ಆರಂಭವಾಗಿದೆ.

ಭಾರತ್ ಬಯೋಟೆಕ್ ಸಂಸ್ಥೆಯು ಅಭಿವೃದ್ಧಿಪಡಿಸಿರುವ ಈ ಲಸಿಕೆಯು ಮಕ್ಕಳಿಗೆ ನೀಡಲು ಸೂಕ್ತವೇ ಎಂಬುದನ್ನು ಪರಿಶೀಲಿಸಲು ಪಟ್ನಾದ ಏಮ್ಸ್‌ನಲ್ಲಿ ಈಗಾಗಲೇ ಪ್ರಯೋಗ ನಡೆಸಲಾಗಿದೆ.

ಸದ್ಯ ದೆಹಲಿಯ ಏಮ್ಸ್‌ನಲ್ಲಿ ನಡೆಯಲಿರುವ ಪ್ರಯೋಗಕ್ಕೆ ಮಕ್ಕಳ ತಪಾಸಣೆ ಕಾರ್ಯವು ಆರಂಭವಾಗಿದೆ. ಪರೀಕ್ಷೆಯ ವರದಿಯು ಬಂದ ನಂತರ ಅವರಿಗೆ ಲಸಿಕೆ ನೀಡಲಾಗುವುದು.

'ಕೋವ್ಯಾಕ್ಸಿನ್ ಲಸಿಕೆ ಕುರಿತ ಮಕ್ಕಳ ತಪಾಸಣೆಯ ವರದಿ ಬಂದ ನಂತರ ಮಕ್ಕಳಿಗೆ ಲಸಿಕೆ ನೀಡುವ ಕಾರ್ಯ ನಡೆಯಲಿದೆ' ಎಂದು ಏಮ್ಸ್‌ನ ಸಮುದಾಯ ಔಷಧ ಕೇಂದ್ರದ ಪ್ರಾಧ್ಯಾಪಕ ಡಾ.ಸಂಜಯ್ ರೈ ಹೇಳಿದರು.

ಕೊವ್ಯಾಕ್ಸಿನ್ ಲಸಿಕೆಯನ್ನು ಪ್ರಸ್ತುತ ದೇಶದಲ್ಲಿ ನಡೆಯುತ್ತಿರುವ ಕೋವಿಡ್ ಲಸಿಕೆ ಅಭಿಯಾನದಲ್ಲಿ ವಯಸ್ಕರಿಗೆ ನೀಡಲಾಗುತ್ತಿದೆ. ಮಕ್ಕಳಿಗೆ ಲಸಿಕೆ ನೀಡುವ ಸಂಬಂಧ ಎರಡನೇ ಹಂತದ ಪ್ರಯೋಗ ನಡೆಸಲು ಮೇ 12ರಂದು ಭಾರತದ ಔಷಧ ನಿಯಂತ್ರಕರು ಅನುಮತಿ ನೀಡಿದ್ದರು.

12ನೇ ತರಗತಿ ಆಂತರಿಕ ಮೌಲ್ಯಮಾಪನ: ಸಿಬಿಎಸ್‌ಇ ಸೂಚನೆ

ನವದೆಹಲಿ: 12ನೇ ತರಗತಿಯ ವಿದ್ಯಾರ್ಥಿಗಳ ಆಂತರಿಕ ಮತ್ತು ಪ್ರಾಯೋಗಿಕ ಮೌಲ್ಯಮಾಪನವನ್ನು ಜೂನ್ 28ರೊಳಗೆ ಪೂರ್ಣಗೊಳಿಸಲು ಕೇಂದ್ರೀಯ ಪ್ರೌಢಶಾಲಾ ಶಿಕ್ಷಣ ಮಂಡಳಿ (ಸಿಬಿಎಸ್‌ಇ) ಸೋಮವಾರ ಶಾಲೆಗಳಿಗೆ ಸೂಚಿಸಿದೆ.

ಸಿಬಿಎಸ್‌ಇ ಈಗ ಕೋವಿಡ್-19 ಸಾಂಕ್ರಾಮಿಕ ರೋಗದಿಂದಾಗಿ ಮಂಡಳಿಯ ಪರೀಕ್ಷೆಗಳನ್ನು ರದ್ದುಗೊಳಿಸಿದ ನಂತರ 12ನೇ ತರಗತಿ ಫಲಿತಾಂಶಗಳನ್ನು ಘೋಷಿಸಲು ಸಾಂದರ್ಭಿಕ ಮಾನದಂಡಗಳನ್ನು ಅನುಸರಿಸಲಿದೆ.

'ಬಾಕಿ ಉಳಿದಿರುವ ಪ್ರಾಯೋಗಿಕ/ಆಂತರಿಕ ಮೌಲ್ಯಮಾಪನಗಳನ್ನು ಈಗ ಆನ್‌ಲೈನ್‌ನಲ್ಲಿ ಮಾತ್ರ ನಡೆಸಲು ಅನುಮತಿ ಇದೆ. ಆಗಸ್ಟ್ 28ರೊಳಗೆ ಅಂಕಗಳನ್ನು ಒದಗಿಸಿರುವ ಲಿಂಕ್ ಮೂಲಕ ಅಪ್‌ಲೋಡ್ ಮಾಡಲು ಅನುಮತಿಸಲಾಗಿದೆ ಎಂದು' ಸಿಬಿಎಸ್‌ಇ ಪರೀಕ್ಷೆಗಳ ನಿಯಂತ್ರಕ ಸನ್ಯಮ್ ಭಾರದ್ವಜ್ ಅವರು ಹೊರಡಿಸಿದ ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ಕಾಶ್ಮೀರದಲ್ಲಿ ಸೇನೆ ಚಲನವಲನ: ಜನರಲ್ಲಿ ಸಂಚಲನ

ಪ್ರಜಾವಾಣಿ ವಾರ್ತೆ

ಶ್ರೀನಗರ: ಕಾಶ್ಮೀರದಲ್ಲಿ ಕೆಲದಿನಗಳಿಂದ ಸೇನೆಯ ಚಲನವಲನ ಹೆಚ್ಚಾಗಿದ್ದು, ಭಾರಿ ಊಹಾಪೋಹಗಳಿಗೆ ಎಡೆ ಮಾಡಿದೆ. 2019ರಲ್ಲಿ ಜಮ್ಮು ಮತ್ತು ಕಾಶ್ಮೀರದ ವಿಶೇಷ ಸ್ಥಾನಮಾನವನ್ನು ರದ್ದುಗೊಳಿಸಿದ ಮಾದರಿಯಲ್ಲಿಯೇ ಈ ಬಾರಿಯೂ ಮಹತ್ತರವಾದ ಬದಲಾವಣೆಯನ್ನು ತರುವ ಉದ್ದೇಶವನ್ನು ಕೇಂದ್ರ ಸರ್ಕಾರ ಹೊಂದಿದೆ. ಅದಕ್ಕಾಗಿ ಸೇನೆಯನ್ನು ನಿಯೋಜಿಸಲಾಗಿದೆ ಎಂದು ಜನರ ಅನುಮಾನ ವ್ಯಕ್ತಪಡಿಸಿದ್ದಾರೆ.

ಕೇಂದ್ರಾಡಳಿತ ಪ್ರದೇಶಗಳಾದ ಕಾಶ್ಮೀರ ಮತ್ತು ಜಮ್ಮುವಿನ ಕೆಲ ಭಾಗಗಳಲ್ಲಿ ಭಾರಿ ಸಂಖ್ಯೆಯಲ್ಲಿ ಅರೆಸೇನಾ ಪಡೆಗಳನ್ನು ನಿಯೋಜನೆ ಮಾಡಲಾಗುತ್ತಿದೆ ಎಂದು ಕೆಲವು ದಿನಗಳಿಂದ ವರದಿಗಳು ಬರುತ್ತಿದ್ದವು. 2019ರ ಆ.5ರಂದು ಕೇಂದ್ರ ಸರ್ಕಾರವು ಜಮ್ಮು ಮತ್ತು ಕಾಶ್ಮೀರದ ವಿಶೇಷ ಸ್ಥಾನಮಾನವನ್ನು ಹಿಂಪಡೆದಿತ್ತು. ಆ ಘೋಷಣೆ ಮಾಡುವ ಮೊದಲೂ ಜಮ್ಮು ಮತ್ತು ಕಾಶ್ಮೀರದಲ್ಲಿ ಭಾರಿ ಪ್ರಮಾಣದಲ್ಲಿ ಸೇನಾ ತುಕಡಿಗಳನ್ನು ನಿಯೋಜಿಸಿತ್ತು. ಸೇನಾಪಡೆ ಚಲನವಲನದಿಂದಾಗಿ ಜನರು ಮತ್ತೆ ಅಂಥದ್ದೇ ಪ್ರಕ್ರಿಯೆಯನ್ನು ಕೇಂದ್ರ ನಡೆಸುತ್ತಿದೆ ಎಂದು ಬಲವಾಗಿ ನಂಬಿದ್ದಾರೆ.

ಸಾಂದರ್ಭಿಕ ಚಿತ್ರ

ಹೆಚ್ಚಾಗಿ ಹರಿದಾಡಿದ ವದಂತಿಯೆಂದರೆ, 'ಜಮ್ಮುವಿಗೆ ರಾಜ್ಯದ ಸ್ಥಾನಮಾನವನ್ನು ಹಿಂದಿರುಗಿಸಲಾಗುವುದು, ಆದರೆ ಕಾಶ್ಮೀರವನ್ನು ಎರಡು ಅಥವಾ ಮೂರು ಕೇಂದ್ರಾಡಳಿತ ಪ್ರದೇಶಗಳನ್ನಾಗಿ ವಿಭಾಗಿಸಲಾಗುವುದು. ಕಾಶ್ಮೀರ ಪಂಡಿತರ ಬಹುದಿನಗಳ ಬೇಡಿಕೆಯಂತೆ ಅವರಿಗೆ ಕಾಶ್ಮೀರ ಕಣಿವೆಯಲ್ಲಿ ಪ್ರತ್ಯೇಕವಾದ ಪ್ರದೇಶವನ್ನು ನೀಡಲಾಗುವುದು' ಎಂಬುದಾಗಿದೆ.

ವದಂತಿಗಳನ್ನು ಅಲ್ಲಗಳೆದ ಪೊಲೀಸ್ ಅಧಿಕಾರಿ: ಕಾಶ್ಮೀರದ ಪೊಲೀಸ್ ಅಧಿಕಾರಿಯೊಬ್ಬರು ಈ ಎಲ್ಲಾ ಊಹಾಪೋಹಗಳನ್ನು ಅಲ್ಲಗಳೆದಿದ್ದಾರೆ. ಜಮ್ಮು ಮತ್ತು ಕಾಶ್ಮೀರದಿಂದ ಸುಮಾರು 200 ಅರೆಸೇನಾ ತುಕಡಿಗಳನ್ನು ಪಶ್ಚಿಮ ಬಂಗಾಳ ಮತ್ತು ಇತರ ರಾಜ್ಯಗಳಿಗೆ ಚುನಾವಣಾ ಕೆಲಸದ ಮೇಲೆ ನಿಯೋಜಿಸಲಾಗಿತ್ತು. ಸೈನಿಕರು 15 ದಿನ ಕಾಲ ಕ್ವಾರಂಟೈನ್‌ನಲ್ಲಿ ಇದ್ದು, ಈಗ ತಮ್ಮ ಕಾರ್ಯಸ್ಥಳಗಳಿಗೆ ಮರಳುತ್ತಿದ್ದಾರೆ ಎಂದು ಹೇಳಿದ್ದಾರೆ. ಈಗ ಸುಮಾರು 100 ತುಕಡಿಗಳು ವಾಪಸಾಗಿವೆ. ಮುಂದಿನ ದಿನಗಳಲ್ಲಿ ಬಾಕಿ ತುಕಡಿಗಳು ಬರಲಿವೆ. ತುಕಡಿಗಳನ್ನು ಕೇಂದ್ರಾಡಳಿತ ಪ್ರದೇಶಗಳ ಸುತ್ತ ಪುನಃ ನಿಯೋಜನೆ ಮಾಡಲಾಗುವುದು ಎಂದು ಹೇಳಿದ್ದಾರೆ.

2019ರಲ್ಲಿ ಜಮ್ಮು ಮತ್ತು ಕಾಶ್ಮೀರವನ್ನು ಕೇಂದ್ರಾಡಳಿತ ಪ್ರದೇಶಗಳು ಎಂದು ಘೋಷಿಸುವ ಮೊದಲು ಜಮ್ಮು ಮತ್ತು ಕಾಶ್ಮೀರದಲ್ಲಿ ಭದ್ರತಾ ಪಡೆಯ 400ಕ್ಕೂ ಹೆಚ್ಚು ತುಕಡಿಗಳನ್ನು ಇಲ್ಲಿ ನಿಯೋಜಿಸಲಾಗಿತ್ತು.

ಸೆಂಟ್ರಲ್ ವಿಸ್ತಾ: ₹ 1000 ಕೋಟಿ ಉಳಿತಾಯ

ಪ್ರಜಾವಾಣಿ ವಾರ್ತೆ

ನವದೆಹಲಿ: ಸೆಂಟ್ರಲ್ ವಿಸ್ತಾ ಯೋಜನೆಗೆ ವ್ಯಕ್ತವಾಗಿರುವ ತೀವ್ರ ಟೀಕೆ, ವಿರೋಧದ ನಡುವೆಯೂ ಉದ್ದೇಶಿತ ಯೋಜನೆಯಿಂದ ವಾರ್ಷಿಕ ₹ 1000 ಕೋಟಿಯಷ್ಟು ಬಾಡಿಗೆ ಮೊತ್ತ ಉಳಿತಾಯವಾಗಲಿದೆ ಎಂದು ಕೇಂದ್ರ ಸರ್ಕಾರ ಹೇಳಿದೆ.

ಸದ್ಯ, ವಿವಿಧ ಸರ್ಕಾರಿ ಕಚೇರಿಗಳಿಗೆ ಬಾಡಿಗೆ ನೀಡಲಾಗುತ್ತಿದೆ. ಬಾಡಿಗೆ ಕಟ್ಟಡದಲ್ಲಿರುವ ವಿವಿಧ ಕಚೇರಿಗಳನ್ನು ವಿಸ್ತಾ ನಿರ್ಮಾಣದ ಬಳಿಕ ನೂತನ ಸಂಕೀರ್ಣಕ್ಕೆ ಸ್ಥಳಾಂತರಿಸಲಾಗುತ್ತದೆ ಎಂದು ನಗರಾಭಿವೃದ್ಧಿ ವ್ಯವಹಾರಗಳ ಸಚಿವಾಲಯದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕೇಂದ್ರದ ವಿವಿಧ ಕಚೇರಿಗಳು ವಿವಿಧ ಸ್ಥಳಗಳಲ್ಲಿ ಬಾಡಿಗೆ ಕಟ್ಟಡದಲ್ಲಿವೆ. ಸೆಂಟ್ರಲ್ ವಿಸ್ತಾ ಸಂಕೀರ್ಣ ನಿರ್ಮಾಣ ಪೂರ್ಣಗೊಂಡ ಬಳಿಕ ಒಂದೇ ಚಾವಣಿಯಡಿ ಈ ಕಚೇರಿಗಳು ಬರಲಿದೆ. ಇದರಿಂದ ಹಣ ಉಳಿತಾಯದ ಜೊತೆಗೆ, ಸಮನ್ವಯತೆಗೂ ಸಹಕಾರಿಯಾಗಲಿದೆ ಎಂದು ಹೇಳಿದ್ದಾರೆ.

ಸೆಂಟ್ರಲ್ ವಿಸ್ತಾ ಸಂಕೀರ್ಣವು ನೂತನ ಸಂಸತ್ ಕಟ್ಟಡ, ಸಂಸದರ ಕಚೇರಿಗಳು, ಸೆಂಟ್ರಲ್ ವಿಸ್ತಾ ಅವಿನ್ಯೂ (ರಾಜಪಥ) ನವೀಕರಣ, ಉಪ ರಾಷ್ಟ್ರಪತಿ ಮತ್ತು ಪ್ರಧಾನಿಯವರ ನೂತನ ನಿವಾಸ ಮತ್ತು ಪರಸ್ಪರ ಸಂಪರ್ಕವುಳ್ಳ ಸಚಿವಾಲಯ ಕಟ್ಟಡ ಒಳಗೊಂಡಿದೆ.

ಪ್ರಜಾವಾಣಿ LIVE
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರ ಪ್ರಸಾರ
ವಿದ್ಯಾರ್ಥಿಗಳ ಪ್ರಶ್ನೆ.. ತಜ್ಞರ ಉತ್ತರ!
ವಿ ಪ್ರದೀಪ್ ಕುಮಾರ್
ಲೇಖಕರು, ನಿರ್ವಹಣೆ, ತರಬೇತಿ ಮತ್ತು ವೃತ್ತಿ ಸಲಹೆಗಾರರು
12 ಜೂನ್ 2021, ಶನಿವಾರ ಸಂಜೆ 5 ರಿಂದ 6
ದ್ವಿತೀಯ ಪಿಯುಸಿ ನಂತರ ಮುಂದೇನು?
ಕೋರ್ಸ್ ಮತ್ತು ವೃತ್ತಿಯ ಪ್ರಾಮುಖ್ಯತೆ, ಹಾಗೂ ಆಯ್ಕೆಗಳ ವಿಧಾನಗಳೊಂದಿಗೆ ನಿಮ್ಮ ಭವಿಷ್ಯವನ್ನು ರೂಪಿಸುವುದು ಹೇಗೆ? ಈ ನಿರ್ಧಾರಗಳಲ್ಲಿ ಪೋಷಕರ ಪಾತ್ರ
ಈ ವಿಷಯಗಳ ಮಾಹಿತಿ ನೀಡಲಿದ್ದಾರೆ. ನಿಮ್ಮ ಪ್ರಶ್ನೆಗಳನ್ನು ನೋಂದಣಿ ಸಂದರ್ಭದಲ್ಲೇ ಕಳುಹಿಸಿ, FB ಲೈವ್ ಮೂಲಕ ಉತ್ತರ ಪಡೆದುಕೊಳ್ಳಿ.
ಅಂತಿಮ ದಿನಾಂಕ ಮಂಗಳವಾರ 08 ಜೂನ್ 2021
ನೋಂದಣಿ ಕಡ್ಡಾಯ
https://bit.ly/3yK3kVD
ನೋಂದಣಿ ಕಡ್ಡಾಯವಾಗಿದ್ದು, ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ

ಪ್ರಜಾವಾಣಿ LIVE
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರ ಪ್ರಸಾರ
ಕೋವಿಡ್ ಕಾಲದಲ್ಲಿ ಐವಿಎಫ್ ಎಷ್ಟು ಸುರಕ್ಷಿತ
ಐವಿಎಫ್ ಚಿಕಿತ್ಸೆ, ಗರ್ಭಧಾರಣೆ, ಫಲವತ್ತತೆ ಮೇಲೆ ಕೋವಿಡ್ ನಿಂದ ಆಗುತ್ತಿರುವ ಪರಿಣಾಮಗಳ ಬಗ್ಗೆ ಮಾಹಿತಿ ನೀಡಲಿದ್ದಾರೆ ಪ್ರಸೂತಿ ತಜ್ಞೆ, ಮಿಲನ್ ಸೆಂಟರ್ ಫಾರ್ ರಿಪ್ರೊಡಕ್ಟಿವ್ ಮೆಡಿಸಿನ್‌ನ ನಿರ್ದೇಶಕಿ
ಡಾ. ಕಾಮಿನಿ ರಾವ್
ನೀವೂ ಪ್ರಶ್ನೆಗಳನ್ನು ಕೇಳಬಹುದು | ಇಂದು ಸಂಜೆ 6 ಗಂಟೆಗೆ

'ಕೈಗಾರಿಕೆಗಳಿಗೆ ಪರಿಸರ ಅನುಮತಿ ಕಡ್ಡಾಯ'

ನವದೆಹಲಿ (ಪಿಟಿಐ): ಪರಿಸರ ಅನುಮತಿ ಪಡೆಯದೇ ಕೈಗಾರಿಕೆಗಳು ಕಾರ್ಯಾಚರಣೆ ಮಾಡುವಂತಿಲ್ಲ. ಪರಿಸರ ಅನುಮತಿ ಪಡೆಯದ ಕೈಗಾರಿಕೆಗಳಿಂದ ಪರಿಹಾರ ಧನ ಪಡೆದು ಕಾರ್ಯಾಚರಣೆ ನಡೆಸಲು ಅನುಮತಿ ನೀಡುವ ಅಧಿಕಾರ ಸರ್ಕಾರಗಳಿಗೆ ಇಲ್ಲ ಎಂದು ರಾಷ್ಟ್ರೀಯ ಹಸಿರು ನ್ಯಾಯಪೀಠ (ಎನ್‌ಜಿಟಿ) ಹೇಳಿದೆ.

ಪರಿಸರ ಅನುಮತಿ ಪಡೆಯಬೇಕು ಎನ್ನುವುದು ಶಾಸನಬದ್ಧ ಆದೇಶವಾಗಿದೆ. ಆದ್ದರಿಂದ ಅದನ್ನು ಕಟ್ಟುನಿಟ್ಟಾಗಿ ಅನುಸರಿಸಬೇಕು ಎಂದು ಎನ್‌ಜಿಟಿ ಮುಖ್ಯಸ್ಥ ನ್ಯಾಯಮೂರ್ತಿ ಆದರ್ಶ್ ಕುಮಾರ್ ಗೋಯಲ್ ನೇತೃತ್ವದ ಪೀಠ ಹೇಳಿದೆ.

ಫಾರ್ಮಾಲ್ಡಿಹೈಡ್ ಎಂಬ ರಾಸಾಯನಿಕ ತಯಾರಿಕಾ ಘಟಕಗಳಿಗೆ ಕಾರ್ಯಾಚರಣೆ ನಡೆಸಲು ಹರಿಯಾಣ ಸರ್ಕಾರ ಅನುಮತಿ ನೀಡಿದೆ. ಈ ಘಟಕಗಳು ಪರಿಸರ ಅನುಮತಿ ಪಡೆದಿಲ್ಲ. ರಾಜ್ಯ ಸರ್ಕಾರಕ್ಕೆ ಈ ಕುರಿತು ಅನುಮತಿ ನೀಡಲು ಅಧಿಕಾರ ಇಲ್ಲ. ಈ ಕೂಡಲೇ ತಯಾರಕರಿಗೆ ನೀಡಿರುವ ಅನುಮತಿ ರದ್ದುಗೊಳಿಸಿ ಎಂದು ಸರ್ಕಾರೇತರ ಸಂಸ್ಥೆ ದಸ್ತಕ್ ಎನ್‌ಜಿಟಿಗೆ ಅರ್ಜಿ ಸಲ್ಲಿಸಿತ್ತು.

ಈ ಅರ್ಜಿ ಪರಿಶೀಲಿಸಿ ಆದೇಶ ನೀಡಿರುವ ಎನ್‌ಜಿಟಿ, ಸರ್ಕಾರೇತರ ಸಂಸ್ಥೆ ಎತ್ತಿರುವ ಆಕ್ಷೇಪಣೆಯನ್ನು ಪರಿಸರ ಮತ್ತು ಅರಣ್ಯ ಸಚಿವಾಲಯ ಸೇರಿ ಸಂಬಂಧಪಟ್ಟ ಇಲಾಖೆಗಳು ಪರಿಗಣಿಸಬೇಕು. ಆ ಘಟಕಗಳು ಕಾರ್ಯಾಚರಣೆಯನ್ನು ಸ್ಥಗಿತಗೊಳಿಸುವಂತೆ ನೋಡಿಕೊಳ್ಳಬೇಕು. ಜೊತೆಗೆ, ಈ ಮುಂಚೆ ನಡೆದಿರುವ ಕಾನೂನು ಉಲ್ಲಂಘನೆ ಕುರಿತು ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಜರುಗಿಸಬೇಕು ಎಂದು ಹೇಳಿದೆ.

ಪರಿಸರದ ಮೇಲಾಗುವ ಪರಿಣಾಮಗಳ ಮೌಲ್ಯಮಾಪನಾ ಅಧಿಸೂಚನೆ ಅಡಿ 2006ರ ಸೆ.14 ರಂದು ಪರಿಸರ ಅನುಮತಿ ಕಡ್ಡಾಯ ಗೊಳಿಸಲಾಯಿತು. ಆ ನಿಯಮವನ್ನು ಉಲ್ಲಂಘಿಸಿದ ಕೈಗಾರಿಕೆಗಳಿಗೆ ಕಾರ್ಯಾಚರಣೆ ಮಾಡಲು ಅವಕಾಶ ಇಲ್ಲ.

ದಿಲೀಪ್ ಕುಮಾರ್‌ಗೆ ಆಮ್ಲಜನಕ ನೆರವು: ಆರೋಗ್ಯ ಸ್ಥಿರ



ಮುಂಬೈ (ಪಿಟಿಐ): ಬಾಲಿವುಡ್‌ನ ಹೆಸರಾಂತ ನಟ ದಿಲೀಪ್ ಕುಮಾರ್ ಅವರಿಗೆ ಆಮ್ಲಜನಕ ನೆರವು ನೀಡಲಾಗಿದ್ದು, ಸದ್ಯ ಅವರ ಆರೋಗ್ಯ ಸ್ಥಿರವಾಗಿದೆ.

ದಿಲೀಪ್ ಅವರಿಗೆ ಉಸಿರಾಟದ ಸಮಸ್ಯೆ ಕಾಣಿಸಿಕೊಂಡಿದ್ದರಿಂದ ಮುಂಬೈನ ಪಿ.ಡಿ. ಹಿಂದೂಜಾ ಆಸ್ಪತ್ರೆಗೆ ಭಾನುವಾರ ದಾಖಲಿಸಲಾಗಿತ್ತು.

'ದಿಲೀಪ್ ಅವರಿಗೆ ಆಮ್ಲಜನಕದ ನೆರವು ನೀಡಲಾಗಿದೆ. ಅವರ ಆರೋಗ್ಯ ಪರಿಸ್ಥಿತಿ ಸ್ಥಿರವಾಗಿದೆ' ಎಂದು ದಿಲೀಪ್ ಕುಮಾರ್ ಚಿಕಿತ್ಸೆಯ ಉಸ್ತುವಾರಿ ನೋಡಿಕೊಳ್ಳುತ್ತಿರುವ ಹಿರಿಯ ವೈದ್ಯ ಡಾ.ಜಲೀಲ್ ಪಾರ್ಕರ್ ಅವರು ಹೇಳಿದ್ದಾರೆ.

ಈ ಬಗ್ಗೆ ದಿಲೀಪ್ ಕುಮಾರ್ ಅವರ ಅಧಿಕೃತ ಟ್ವಿಟರ್ ಖಾತೆಯಲ್ಲೂ ತಿಳಿಸಲಾಗಿದೆ.

ಮಕ್ಕಳಿಗೆ ನೆರವು: ಕಾಲಾವಕಾಶಕ್ಕೆ ಮನವಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೋವಿಡ್‌ನಿಂದಾಗಿ ಪಾಲಕರನ್ನು ಕಳೆದುಕೊಂಡು, ಅನಾಥರಾಗಿರುವ ಮಕ್ಕಳಿಗೆ, 'ಪಿಎಂ ಕೇರ್ಸ್' ನಿಧಿಯಿಂದ ಆರ್ಥಿಕ ನೆರವು ನೀಡುವ ಯೋಜನೆಯನ್ನು ಜಾರಿಗೊಳಿಸುವ ವಿಧಾನದ ಬಗ್ಗೆ ಮಾಹಿತಿ ನೀಡಲು ಇನ್ನಷ್ಟು ಕಾಲಾವಕಾಶ ಕೊಡುವಂತೆ ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಮನವಿ ಮಾಡಿದೆ.

'ಅನಾಥರಾಗಿರುವ ಮಕ್ಕಳ ಮಾಹಿತಿ ಸಂಗ್ರಹಿಸುವ ಹೊಣೆಯನ್ನು ನಾವು ನೇರವಾಗಿ ಜಿಲ್ಲಾಧಿಕಾರಿಗಳಿಗೆ ನೀಡಿದ್ದೇವೆ. ಆ ಕುರಿತ ಸಮಾಲೋಚನೆಗಳು ಇನ್ನೂ ನಡೆಯುತ್ತಿರುವುದರಿಂದ, ವಿವರ ಸಲ್ಲಿಸಲು ಸ್ವಲ್ಪ ಕಾಲಾವಕಾಶ ನೀಡಬೇಕು' ಎಂದು ಕೇಂದ್ರದ ಪರ ಹಾಜರಾಗಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಐಶ್ವರ್ಯಾ ಭಾಟಿ ಅವರು ಮನವಿ ಮಾಡಿದರು.

ಯೋಜನೆ ಬಗ್ಗೆ ಮಾಹಿತಿ ನೀಡಲು, ನ್ಯಾಯಮೂರ್ತಿಗಳಾದ ಎಲ್. ನಾಗೇಶ್ವರ ರಾವ್ ಹಾಗೂ ಅನಿರುದ್ಧ ಬೋಸ್ ಅವರ ಪೀಠವು ಸರ್ಕಾರಕ್ಕೆ ಇನ್ನಷ್ಟು ಕಾಲಾವಕಾಶವನ್ನು ನೀಡಿತು. ಅನಾಥ ಮಕ್ಕಳಿಗೆ ಪಿ.ಎಂ ಕೇರ್ಸ್ ನಿಧಿಯಿಂದ ನೆರವು ಒದಗಿಸುವ ಯೋಜನೆಯನ್ನು ಮೇ 29ರಂದು ಕೇಂದ್ರ ಸರ್ಕಾರ ಘೋಷಿಸಿತ್ತು.

ಮಕ್ಕಳ ಹಕ್ಕುಗಳ ರಕ್ಷಣೆಯ ರಾಷ್ಟ್ರೀಯ ಆಯೋಗದ ಪರವಾಗಿ ಹಾಜರಾಗಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ.ಎಂ. ನಟರಾಜನ್ ಅವರು, 'ದೆಹಲಿ, ಪಶ್ಚಿಮ ಬಂಗಾಳ ಸರ್ಕಾರಗಳು ಸಹಕಾರ ನೀಡುತ್ತಿಲ್ಲ. ಅನಾಥ ಮಕ್ಕಳನ್ನು ಕುರಿತ ಇತ್ತೀಚಿನ ದತ್ತಾಂಶಗಳನ್ನು ಅವು ಕೇಂದ್ರಕ್ಕೆ ನೀಡಿಲ್ಲ' ಎಂದರು.

ಕೋವಿಡ್: 3,621 ಮಕ್ಕಳು ಅನಾಥ

'ಕೋವಿಡ್–19 ಸಾಂಕ್ರಾಮಿಕ ರೋಗದಿಂದಾಗಿ 3,621 ಮಕ್ಕಳು ಹೆತ್ತವರನ್ನು ಕಳೆದುಕೊಂಡು ಅನಾಥರಾಗಿದ್ದಾರೆ. ಇದರಲ್ಲಿ 274 ಪರಿತ್ಯಕ್ತ ಮಕ್ಕಳೂ ಇದ್ದಾರೆ' ಎಂದು ಮಕ್ಕಳ ಹಕ್ಕುಗಳ ರಕ್ಷಣೆಯ ರಾಷ್ಟ್ರೀಯ ಆಯೋಗ (ಎನ್‌ಸಿಪಿಸಿಆರ್) ತಿಳಿಸಿದೆ.

'2020ರ ಏಪ್ರಿಲ್ 1ರಿಂದ 2021ರ ಜೂನ್ 5ರ ತನಕ ದೇಶದಾದ್ಯಂತ ಒಟ್ಟು 26,176 ಮಕ್ಕಳು ಪೋಷಕರನ್ನು ಕಳೆದುಕೊಂಡಿದ್ದಾರೆ. ಒಟ್ಟಾರೆ 30,071 ಮಕ್ಕಳು ಸಂಕಷ್ಟದ ಪರಿಸ್ಥಿತಿಯಲ್ಲಿದ್ದಾರೆ. ವಿವಿಧ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಂದ ಮಾಹಿತಿ ಸಂಗ್ರಹಿಸಲಾಗಿದ್ದು, ಇದನ್ನು 'ಬಾಲ್ ಸ್ವರಾಜ್' ಪೋರ್ಟಲ್‌ನಲ್ಲಿ ನೋಂದಾಯಿಸಲಾಗಿದೆ ಎಂದು ಎನ್‌ಸಿಪಿಸಿಆರ್ ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

ಮಹಾರಾಷ್ಟ್ರದಲ್ಲಿ ಅತಿ ಹೆಚ್ಚು 7,084 ಪ್ರಕರಣಗಳಿದ್ದರೆ, ಕರ್ನಾಟಕದಲ್ಲಿ ಒಟ್ಟು 99 ಮಕ್ಕಳು ಅನಾಥರಾಗಿದ್ದು, ಇದರಲ್ಲಿ 6 ಮಕ್ಕಳು ಪರಿತ್ಯಕ್ತರಾಗಿದ್ದಾರೆ. 555 ಮಕ್ಕಳು ತಂದೆ ಅಥವಾ ತಾಯಿಯನ್ನು ಕಳೆದುಕೊಂಡವರಾಗಿದ್ದಾರೆ.

ಶಿಕ್ಷಣ, ಉದ್ಯೋಗ 2ನೇ ಡೋಸ್ ಲಸಿಕೆಗೆ ಅವಕಾಶ

ನವದೆಹಲಿ (ಪಿಟಿಐ): ಕೆಲ ವರ್ಗಗಳಿಗೆ ನಿಗದಿತ 84 ದಿನಗಳ ಅವಧಿಗೆ ಮೊದಲೇ ಕೋವಿಶೀಲ್ಡ್ ಲಸಿಕೆ 2ನೇ ಡೋಸ್ ಅನ್ನು ನೀಡುವ ಸಂಬಂಧ ಕೇಂದ್ರ ಸರ್ಕಾರ ಸೋಮವಾರ ಹೊಸದಾಗಿ ಮಾರ್ಗದರ್ಶಿ ಸೂತ್ರಗಳನ್ನು ಬಿಡುಗಡೆ ಮಾಡಿದೆ.

ಆ ಪ್ರಕಾರ, ಶೈಕ್ಷಣಿಕ ಉದ್ದೇಶಕ್ಕಾಗಿ ವಿದೇಶಗಳಿಗೆ ತೆರಳುವವರು, ಉದ್ಯೋಗಕ್ಕಾಗಿ ತೆರಳುವವರು ಮತ್ತು ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಭಾರತವನ್ನು ಪ್ರತಿನಿಧಿಸುವ ಕ್ರೀಡಾಪಟುಗಳಿಗೆ ನಿಗದಿತ ಅವಧಿಗೂ ಮೊದಲೇ 2ನೇ ಡೋಸ್ ಲಸಿಕೆಯನ್ನು ನೀಡಲಾಗುತ್ತದೆ.

ಕೇಂದ್ರ ಆರೋಗ್ಯ ಸಚಿವಾಲಯದ ಬಿಡುಗಡೆ ಮಾಡಿರುವ ಮಾರ್ಗದರ್ಶಿ ಸೂತ್ರಗಳ ಪ್ರಕಾರ, ಈ ವರ್ಗಗಳಿಗೂ ಎರಡನೇ ಡೋಸ್ ಲಸಿಕೆಯನ್ನು ಮೊದಲ ಡೋಸ್ ಪಡೆದ 28 ದಿನದ ನಂತರವೇ ನೀಡಲಾಗುವುದು, ಕೋ–ವಿನ್ ಸಿಸ್ಟಮ್‌ನಲ್ಲಿಯೂ ಅಗತ್ಯ ಬದಲಾವಣೆ ಮಾಡಲಾಗುವುದು ಎಂದು ತಿಳಿಸಿದೆ.

ಹಳ್ಳಿಗಳಲ್ಲಿ ಇಳಿಯದ ಸೋಂಕು: ತ್ರಿಸೂತ್ರ ಪ್ರಯೋಗ

ಒಂದನೇ ಪುಟದಿಂದ

ಸಚಿವ ಈಶ್ವರಪ್ಪ ಅವರ ಸೂಚನೆಯಂತೆ ಅದೇ ಮಾದರಿಯನ್ನು ಎಲ್ಲ ಜಿಲ್ಲೆಗಳಲ್ಲಿ ಅನುಸರಿಸುವಂತೆ ಸುತ್ತೋಲೆ ಹೊರಡಿಸಲಾಗಿದೆ. ಪ್ರತಿ 50 ಮನೆಗಳಿಗೆ ಒಬ್ಬರು ಸ್ವಯಂಸೇವಕರನ್ನು ನೇಮಿಸಲಾಗುತ್ತಿದ್ದು, ಅವರು ಮನೆಗಳಿಗೆ ಭೇಟಿ ನೀಡಿ ಸೋಂಕು ಲಕ್ಷಣ ಇರುವವರನ್ನು ಗುರುತಿಸಿ ಔಷಧ ಕಿಟ್ ನೀಡುತ್ತಾರೆ. ಮೂರು ದಿನಗಳಲ್ಲಿ ಜ್ವರ, ಕೆಮ್ಮು, ನೆಗಡಿ ಲಕ್ಷಣಗಳು ಕಡಿಮೆ ಆಗದಿದ್ದರೆ ಮೊಬೈಲ್ ವೈದ್ಯರ ತಂಡದಿಂದ ಕೋವಿಡ್ ತಪಾಸಣೆಗೆ ಒಳಪಡಿಸುತ್ತಾರೆ. ಸೋಕು ದೃಢಪಟ್ಟವರನ್ನು ಕೋವಿಡ್ ಆರೈಕೆ ಕೇಂದ್ರಗಳಿಗೆ ದಾಖಲಿಸುತ್ತಾರೆ' ಎಂದು ಪಂಚಾಯತ್‌ರಾಜ್ ಆಯುಕ್ತಾಲಯದ ಆಯುಕ್ತೆ ಪ್ರಿಯಾಂಕಾ ಮೇರಿ ಫ್ರಾನ್ಸಿಸ್ ವಿವರಿಸಿದರು.

ಹಳ್ಳಿಗಳಲ್ಲಿ 20 ಸಾವಿರಕ್ಕೂ ಹೆಚ್ಚು ಪ್ರಕರಣ ದೃಢಪಟ್ಟ ಜಿಲ್ಲೆಗಳು	
ಜಿಲ್ಲೆ	ಕೋವಿಡ್ ಪ್ರಕರಣ
ತುಮಕೂರು	53,642
ಹಾಸನ	43,176
ಮಂಡ್ಯ	38,722
ಮೈಸೂರು	32,391
ಉಡುಪಿ	32,076
ಬೆಳಗಾವಿ	26,247
ದಕ್ಷಿಣ ಕನ್ನಡ	24,033
ಉತ್ತರಕನ್ನಡ	20,783
ಬಳ್ಳಾರಿ	20,753
ಚಿಕ್ಕಮಗಳೂರು	22,364.
ಬೆಂಗಳೂರು ಗ್ರಾ	22,050

'ಲಸಿಕೆ ಹಾಕುವ ಸಂದರ್ಭದಲ್ಲಿ ಕೋವಿಡ್ ಸೋಂಕಿತರು ಕಂಡುಬಂದರೆ ಅವರನ್ನು ಆರೈಕೆ ಕೇಂದ್ರಗಳಿಗೆ ವರ್ಗಾಯಿಸುವ ಹೊಣೆಯನ್ನೂ ಕುಟುಂಬ ಆರೋಗ್ಯ ಸಂರಕ್ಷಣಾ ತಂಡದ ಸದಸ್ಯರಿಗೆ ನೀಡಲಾಗಿದೆ. ಕನಿಷ್ಠ 50 ಮನೆಗಳಲ್ಲಿ ವೈದ್ಯಕೀಯ ಮೇಲ್ವಿಚಾರಣೆಗೆ ಮೊಬೈಲ್ ವೈದ್ಯಕೀಯ ತಂಡ ರಚಿಸಲಾಗಿದೆ' ಎಂದು ತಿಳಿಸಿದರು.

'ಎಲ್ಲ ಹಳ್ಳಿಗಳಲ್ಲಿ ಮೂರು ಹಂತದ ಕಾರ್ಯಪಡೆ ಕೋವಿಡ್ ನಿಯಂತ್ರಣದಲ್ಲಿ ತೊಡಗಿಸಿಕೊಂಡಿದೆ. ಯಾವುದೇ ವ್ಯಕ್ತಿ ಊರಿಗೆ ಬಂದರೆ ಅವರನ್ನು ಪರಿಶೀಲಿಸಲಾಗುತ್ತಿದೆ. ತಪಾಸಣೆ ಸಂದರ್ಭದಲ್ಲಿ ಸೋಂಕು ದೃಢಪಟ್ಟರೆ, ಆರೈಕೆ ಮಾಡಲಾಗುತ್ತದೆ. ಅಲ್ಲದೆ, ಗ್ರಾಮ ಪಂಚಾಯಿತಿಯ ಸುಮಾರು 92 ಸಾವಿರ ಜನಪ್ರತಿನಿಧಿಗಳೂ ಸೇರಿ ಸ್ಥಳೀಯ ಸಂಸ್ಥೆಗಳ ಎಲ್ಲ ಜನಪ್ರತಿನಿಧಿಗಳಿಗೂ ಲಸಿಕೆ ನೀಡಲು ವ್ಯವಸ್ಥೆ ಮಾಡಲಾಗುತ್ತಿದೆ' ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ತಿಳಿಸಿದರು.

ಆಸ್ಪತ್ರೆ ಸುಸಜ್ಜಿತ; ಕೋವಿಡ್ ಚಿಕಿತ್ಸೆ ಗೋತಾ

ಒಂದನೇ ಪುಟದಿಂದ

ಐಸಿಯು ಹಾಸಿಗೆ ಬೇಕು: ಆರೋಗ್ಯ ಕೇಂದ್ರಗಳಲ್ಲಿ ಸಾಮಾನ್ಯ ಹಾಸಿಗೆಗಳಿಗೆ ಕೊರತೆ ಇಲ್ಲ. ಕೋವಿಡ್ ಹೆಚ್ಚಿರುವ ಕಾರಣ ಕೆಲವೆಡೆ ಅವುಗಳನ್ನು ತೆರವುಗೊಳಿಸಿ ಆ ಕೊಠಡಿಗಳನ್ನು ವೀಕ್ಷಣಾ ಕೊಠಡಿಗಳನ್ನಾಗಿ ಪರಿವರ್ತಿಸಲಾಗಿದೆ.

ಉಸಿರಾಟದ ಸಮಸ್ಯೆ ಎದುರಾದರೆ ಅಂತಹವರಿಗೆ ತುರ್ತಾಗಿ ಚಿಕಿತ್ಸೆ ನೀಡುವ ವ್ಯವಸ್ಥೆ ಎಲ್ಲೂ ಇಲ್ಲ. ಸಂಜೆಯಾದರೆ ಆರೋಗ್ಯ ಕೇಂದ್ರಗಳಿಗೆ ಬೀಗ ಬೀಳುತ್ತದೆ. ಆರೋಗ್ಯ ಸಿಬ್ಬಂದಿ ಮನೆ ಸೇರುತ್ತಾರೆ. ರಾತ್ರಿಯ ಹೊತ್ತಿನಲ್ಲಿ ಅನಾರೋಗ್ಯ ಕಾಡಿದರೆ ಅಂತಹವರನ್ನು ಅವರ ಮನೆಯವರು ಸ್ವಂತ ವಾಹನದಲ್ಲೇ ಖಾಸಗಿ ಆಸ್ಪತ್ರೆಗಳಿಗೆ ಕರೆದೊಯ್ಯಬೇಕಾಗಿದೆ.

'ಆರೋಗ್ಯ ಕೇಂದ್ರಗಳಲ್ಲೇ ಐಸಿಯು ಸೌಲಭ್ಯದ ಕನಿಷ್ಠ ಎರಡು ಹಾಸಿಗೆಯ ವ್ಯವಸ್ಥೆ ಮಾಡಬೇಕು. ಜೊತೆಗೆ ಪಾಳಿಯ ಆಧಾರದಲ್ಲಿ ಸಿಬ್ಬಂದಿಯನ್ನು ಕೆಲಸಕ್ಕೆ ನಿಯೋಜಿಸಬೇಕು. ಹೀಗಾದಲ್ಲಿ ಬಹಳಷ್ಟು ಜನರ ಪ್ರಾಣ ಉಳಿಸಬಹುದು. ಸರ್ಕಾರ ಈಗಲಾದರೂ ಎಚ್ಚೆತ್ತುಕೊಂಡು ಈ ಕಾರ್ಯಕ್ಕೆ ಮುಂದಾಗಲಿ' ಎಂದು ರಾಜಾನುಕುಂಟೆಯ ಪ್ರವೀಣ್ ಒತ್ತಾಯಿಸಿದರು.

ಲಸಿಕೆಗಾಗಿ ತಪ್ಪದ ಗೋಳು: ಗ್ರಾಮೀಣ ಭಾಗದ ಆರೋಗ್ಯ ಸೇವೆಯ ವಸ್ತುಸ್ಥಿತಿ ಅರಿಯಲು ಹೊರಟ 'ಪ್ರಜಾವಾಣಿ' ತಂಡ ಮೊದಲು ಭೇಟಿ ನೀಡಿದ್ದು ಯಶವಂತಪುರ ವಿಧಾನಸಭಾ ಕ್ಷೇತ್ರದ ಕೊಡಿಗೇಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕನ್ನಲ್ಲಿ ಗ್ರಾಮಕ್ಕೆ.

ಲಸಿಕೆ ಪಡೆಯಲು ಜನ ಮುಂಜಾನೆಯಿಂದಲೇ ಸಾಲುಗಟ್ಟಿ ನಿಂತಿದ್ದರು. ನಿಂತು ಸಾಕಾಗಿದ್ದರಿಂದ ಕೆಲವರು ಗೋಡೆಗೆ ಮೈ ಒರಗಿಸಿ, ಅಕ್ಕಪಕ್ಕದಲ್ಲೇ ಕೂತು ಹರಟುತ್ತಿದ್ದರು. 10 ಗಂಟೆಯಾದರೂ ಲಸಿಕೆ ನೀಡಲು ಶುರುಮಾಡಿಲ್ಲ. ಇನ್ಯಾವಾಗ ಕೊಡುತ್ತೀರಿ ಎಂದು ಇಳಿವಯಸ್ಸಿನ ವ್ಯಕ್ತಿಯೊಬ್ಬರು ಸಿಬ್ಬಂದಿಯ ಮೇಲೆ ಕೂಗಾಡುತ್ತಿದ್ದರು.

'ಲಸಿಕೆಗಾಗಿ 8 ಕಿ.ಮೀ. ದೂರದಿಂದ ಬಂದಿದ್ದೇನೆ. ಒಂದು ವಾರದಿಂದ ಹೆಗ್ಗನಹಳ್ಳಿ, ಮಾಚೋಹಳ್ಳಿ ಸುತ್ತುತ್ತಲೇ ಇದ್ದೇನೆ. ಗ್ರಾಮ ಪಂಚಾಯಿತಿಯಿಂದ ಪತ್ರ ಬರೆಸಿಕೊಂಡು ಬನ್ನಿ, ಆ ಗುರುತಿನ ಚೀಟಿ ತನ್ನಿ ಎಂದು ಅಲೆದಾಡಿಸುತ್ತಿದ್ದಾರೆಯೇ ಹೊರತು ಲಸಿಕೆ ಮಾತ್ರ ನೀಡುತ್ತಿಲ್ಲ. ಹೀಗಾದರೆ ಹೇಗೆ' ಎಂದು ಬ್ಯಾಡರಹಳ್ಳಿಯಿಂದ ಬಂದಿದ್ದ ಭಾಗ್ಯ ಪ್ರಶ್ನಿಸಿದರು.

'ಬೆಳಿಗ್ಗೆ 6 ಗಂಟೆಯಿಂದ ಊಟ, ಉಪಹಾರ ಬಿಟ್ಟು ಸರತಿ ಸಾಲಿನಲ್ಲಿ ಕಾಯುವುದೇ ಆಗಿದೆ. ಇಲ್ಲಿ ಟೋಕನ್ ವ್ಯವಸ್ಥೆಯೂ ಇಲ್ಲ. ತಮಗೆ ಬೇಕಾದವರಿಗೆ ಲಸಿಕೆ ನೀಡಿ, ಎಲ್ಲ ಖಾಲಿಯಾಗಿದೆ ನಾಳೆ ಬನ್ನಿ ಎನ್ನುತ್ತಾರೆ. ನಮಗೂ ಅಲೆದು ಸಾಕಾಗಿದೆ' ಎಂದು ಕೊಡಿಗೇಹಳ್ಳಿಯ ವೆಂಕಟೇಶ್ ಬೇಸರ ತೋಡಿಕೊಂಡರು.

ದಾಸರಹಳ್ಳಿಯ ಚಿಕ್ಕಬಾಣಾವರ, ರಾಜಾನುಕುಂಟೆ, ಬಾಗಲೂರಿನಲ್ಲೂ ಲಸಿಕೆ ಸಿಗದಿದ್ದರಿಂದ ಹೈರಾಣಾದವರು ಸಿಬ್ಬಂದಿ ಜೊತೆ ವಾಗ್ವಾದ ನಡೆಸುತ್ತಿರುವುದು ಕಂಡುಬಂತು.

ಆರೋಗ್ಯ ಸಿಬ್ಬಂದಿ ಜೀವಕ್ಕಿಲ್ಲ ರಕ್ಷಣೆ: ಕೆಲವೊಂದು ಆರೋಗ್ಯ ಕೇಂದ್ರಗಳಲ್ಲಿ ಶುಶ್ರೂಷಕಿಯರು ಹಾಗೂ ಕೋವಿಡ್ ಪರೀಕ್ಷೆ ಮಾಡುವವರಿಗೆ ಕೈಗವಸು, ಪಿಪಿಇ ಕಿಟ್‌ಗಳನ್ನು ಒದಗಿಸಿಲ್ಲ. ಹೀಗಾಗಿ ಅವರೆಲ್ಲಾ ಆತಂಕದಲ್ಲೇ ಕೆಲಸ ಮಾಡಬೇಕಾಗಿದೆ.

ಕನ್ನಲ್ಲಿ ಗ್ರಾಮದ ಪ್ರಾಥಮಿಕ ಶಾಲೆಯಲ್ಲಿ ಕೋವಿಡ್ ಲಸಿಕೆ ಹಾಕಿಸಿಕೊಳ್ಳಲು ಬಂದಿದ್ದ ಸ್ಥಳೀಯರು ಅಂತರ ಮರೆತು ಕುಳಿತಿದ್ದರು

–ಪ್ರಜಾವಾಣಿ ಚಿತ್ರ/ ಇರ್ಷಾದ್ ಮಹಮ್ಮದ್

ಆರೋಗ್ಯ ಕೇಂದ್ರಕ್ಕೆ ಅಗತ್ಯ ಔಷಧ ಪೂರೈಕೆಯಾಗುತ್ತಿಲ್ಲ. ಇಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಗೆ ಕೈಗವಸು ಹಾಗೂ ಪಿಪಿಇ ಕಿಟ್ ಕೂಡ ನೀಡಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಅವರು ಹೇಗೆ ಕೆಲಸ ಮಾಡಬೇಕು

ಕಿರಣ್, ಕಲ್ಲುಬಾಳು ಗ್ರಾಮ ಪಂಚಾಯಿತಿ ಸದಸ್ಯ

ಬೆಂಗಳೂರು ನಗರ ಜಿಲ್ಲಾ

ಕೋವಿಡ್ ಅಂಕಿ–ಅಂಶ

ಒಟ್ಟು ಸೋಂಕಿತರು	11,85,118
ಸಕ್ರಿಯ ಪ್ರಕರಣ	1,07,645
ಗುಣಮುಖ	10,62,398
ಒಟ್ಟು ಸಾವು	15,074
ದಿನದ ಏರಿಕೆ	
ಹೊಸ ಪ್ರಕರಣ	1,992
ಗುಣಮುಖ	11,488
ಸಾವು	199

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

'ಮನೆಯ ಆಧಾರಸ್ತಂಭವೇ ಕುಸಿದಿದೆ'

'ನನ್ನ ಪತಿ ಶ್ರೀನಿವಾಸ ಮೂರ್ತಿ ಶಾಲೆಯೊಂದರಲ್ಲಿ ಸೆಕ್ಯೂರಿಟಿ ಕೆಲಸ ಮಾಡುತ್ತಿದ್ದರು. ಮೊದಲು ಕೋವಿಡ್ ಪರೀಕ್ಷೆ ಮಾಡಿಸಿದಾಗ 'ನೆಗೆಟಿವ್' ಬಂತು. ಕೆಲ ದಿನಗಳ ನಂತರ ಉಸಿರಾಟದ ಸಮಸ್ಯೆ ಕಾಣಿಸಿಕೊಂಡಿತು. ಸಿ.ಟಿ. ಸ್ಕ್ಯಾನ್ ಮಾಡಿಸಿದಾಗ ಸೋಂಕು ತಗುಲಿರುವುದು ಖಾತರಿಯಾಯಿತು. ನಮ್ಮ ಸಂಬಂಧಿಕರೊಬ್ಬರು ಕಷ್ಟಪಟ್ಟು ಐಸಿಯು ಹಾಸಿಗೆ ಸೌಲಭ್ಯ ಇರುವ ಆಸ್ಪತ್ರೆಗೆ ದಾಖಲಿಸಿದರು. ಅಲ್ಲಿ ವಾರ ಇದ್ದರೂ ಗುಣಮುಖರಾಗಲಿಲ್ಲ. ಬಿಲ್ ಜಾಸ್ತಿಯಾಗುತ್ತಿದೆ, ಮನೆಗೆ ಕರೆದುಕೊಂಡು ಹೋಗಿ ಎಂದು ಹಟ ಹಿಡಿದರು. ಮನೆಗೆ ಬಂದ ದಿನವೇ ಮತ್ತೆ ಉಸಿರಾಟದ ಸಮಸ್ಯೆ ಹೆಚ್ಚಾಯಿತು. ಆಸ್ಪತ್ರೆಗೆ ದಾಖಲಿಸಿದರೂ ಪ್ರಯೋಜನವಾಗಲಿಲ್ಲ' ಎಂದು ಸುಗ್ಗಟ್ಟದ ಸುಮತಿ ಕಣ್ಣೀರಿಟ್ಟರು.

'ಮನೆಗೆ ಅವರೇ ಆಧಾರವಾಗಿದ್ದರು. ಈಗ ದಿಕ್ಕೇ ತೋಚದಾಗಿದ್ದೇವೆ. ಅವರ ಚಿಕಿತ್ಸೆಗಾಗಿ ಸುಮಾರು ₹10 ಲಕ್ಷ ಖರ್ಚು ಮಾಡಿದ್ದೇವೆ. ಅದನ್ನು ಹೇಗೆ ತೀರಿಸುವುದು. ಮಗಳ ವಿದ್ಯಾಭ್ಯಾಸಕ್ಕೆ ಎಲ್ಲಿಂದ ಹಣ ತರುವುದು ಎಂಬುದೇ ತಿಳಿಯುತ್ತಿಲ್ಲ. ಸರ್ಕಾರದಿಂದ ಏನಾದರೂ ಪರಿಹಾರ ಸಿಕ್ಕರೆ ಹೇಗೋ ಬದುಕಬಹುದು' ಎಂದರು.

ಕೋವಿಡ್‌ನಿಂದಾಗಿ ಪತ್ನಿಯನ್ನು ಕಳೆದುಕೊಂಡಿದ್ದೇನೆ. ಈ ದುಃಖದ ನಡುವೆಯೂ ಜನಸೇವೆ ಮಾಡುತ್ತಿದ್ದೇನೆ. ಇದನ್ನು ಅರ್ಥ ಮಾಡಿಕೊಳ್ಳದೆ ಅವರು ನಮ್ಮ ಮೇಲೆ ರೇಗುತ್ತಾರೆ.

–ಆರೋಗ್ಯ ಕೇಂದ್ರವೊಂದರ ವೈದ್ಯಾಧಿಕಾರಿ

ತಮಗೆ ಸೋಂಕು ತಗುಲಿರುವ ವಿಚಾರವನ್ನು ಬಹಳಷ್ಟು ಮಂದಿ ಮುಚ್ಚಿಡುತ್ತಾರೆ. ಊರಲ್ಲಿ ಬಹಿಷ್ಕಾರ ಹಾಕಿದರೆ ದುಡಿಮೆಗೂ ಪೆಟ್ಟು ಬೀಳುತ್ತದೆ ಎಂಬ ಭಯದಿಂದ ಅವರು ಹಾಗೆ ಮಾಡುತ್ತಾರೆ

ನರೇಂದ್ರ ಬಾಬು, ಮಹಾಂತಲಿಂಗಾಪುರ

ಸಂಕ್ಷಿಪ್ತ ಸುದ್ದಿ

ಜೈಲಿನಿಂದ ಇಬ್ಬರು ರೈತರ ಬಿಡುಗಡೆ

ಟೊಹಾನಾ (ಹರಿಯಾಣ): 'ಬಂಧಿತ ಇಬ್ಬರು ರೈತರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿರುವ ಕಾರಣ ಹರಿಯಾಣದ ಎಲ್ಲಾ ಪೊಲೀಸ್ ಠಾಣೆಗಳ ಮುಂದೆ ಹಮ್ಮಿಕೊಂಡಿದ್ದ ಪ್ರತಿಭಟನೆಯನ್ನು ಕೈಬಿಡಲಾಗಿದೆ' ಎಂದು ಸಂಯುಕ್ತ ಕಿಸಾನ್ ಮೋರ್ಚಾ ಸೋಮವಾರ ತಿಳಿಸಿದೆ.

'ಆದರೆ, ಟೊಹಾನಾ ಪೊಲೀಸ್ ಠಾಣೆಯಲ್ಲಿ ಮತ್ತೊಬ್ಬ ರೈತ ಬಂಧನದಲ್ಲಿರುವುದರಿಂದ ಇಲ್ಲಿ ಪ್ರತಿಭಟನೆ ಮುಂದುವರಿಯಲಿದೆ' ಎಂದೂ ಕಿಸಾನ್ ಮೋರ್ಚಾ ಸ್ಪಷ್ಟಪಡಿಸಿದೆ.

ಚೋಕ್ಸಿ ಅಪಹರಣ ಆರೋಪ ತನಿಖೆ: ಪ್ರಧಾನಿ ಬ್ರೌನ್

ನವದೆಹಲಿ (ಪಿಟಿಐ): ಬಹುಕೋಟಿ ಹಗರಣದ ಆರೋಪಿ, ವಜ್ರ ವ್ಯಾಪಾರಿ ಮೆಹುಲ್ ಚೋಕ್ಸಿಯನ್ನು ಅಪಹರಿಸಿ ಡೊಮಿನಿಕಾಗೆ ಕರೆದೊಯ್ಯಲಾಗಿದೆ ಎಂದು ಚೋಕ್ಸಿ ಅವರ ವಕೀಲರು ಆರೋಪ ಮಾಡಿರುವ ಹಿನ್ನೆಲೆಯಲ್ಲಿ ಆಂಟಿಗುವಾ ಮತ್ತು ಬಾರ್ಬುಡಾದ ರಾಯಲ್ ಪೊಲೀಸ್ ಪಡೆ ತನಿಖೆ ಆರಂಭಿಸಿದೆ ಎಂದು ಪ್ರಧಾನಿ ಗ್ಯಾಸ್ಟನ್ ಬ್ರೌನ್ ಮಾಧ್ಯಮವೊಂದಕ್ಕೆ ತಿಳಿಸಿದ್ದಾರೆ.

ಅಪಹರಣದಲ್ಲಿ ಭಾಗಿಯಾಗಿರುವ ಜನರ ಹೆಸರನ್ನು ಚೋಕ್ಸಿಯ ವಕೀಲರು ಪೊಲೀಸ್ ಆಯುಕ್ತರಿಗೆ ನೀಡಿದ ದೂರಿನಲ್ಲಿ ಉಲ್ಲೇಖಿಸಿದ್ದಾರೆ ಎಂದು ಬ್ರೌನ್ ಹೇಳಿರುವುದಾಗಿ ಆಂಟಿಗುವಾ ನ್ಯೂಸ್ ರೂಮ್ ವರದಿ ಮಾಡಿದೆ.

'ತನ್ನನ್ನು ಅಪಹರಿಸಿ ಡೊಮಿನಿಕಾಗೆ ಕರೆದೊಯ್ಯಲಾಗಿದೆ' ಎಂದು ಚೋಕ್ಸಿ ತನ್ನ ವಕೀಲರ ಮೂಲಕ ಆಂಟಿಗುವಾ ಮತ್ತು ಬಾರ್ಬುಡಾದ ರಾಯಲ್ ಪೊಲೀಸರಿಗೆ ದೂರು ನೀಡಿದ್ದಾರೆ. ಇದೊಂದು ಗಂಭೀರ ಪ್ರಕರಣವಾಗಿದ್ದು, ಪೊಲೀಸರು ಅಪಹರಣದ ಬಗ್ಗೆ ತನಿಖೆ ನಡೆಸುತ್ತಿದ್ದಾರೆ' ಎಂದು ಬ್ರೌನ್ ಅವರು ಹೇಳಿದ್ದಾರೆ.

ಪರಿಹಾರ ಸಾಮಗ್ರಿ ಕಳವು ಆರೋಪ: ಸುವೇಂದು ವಿರುದ್ಧ ಎಫ್‌ಐಆರ್

ಕಾಂತಿ (ಪಿಟಿಐ): ಚಂಡಮಾರುತದ ಪರಿಹಾರ ಸಾಮಗ್ರಿಗಳ ಕಳವು ಆರೋಪದಡಿ ಪಶ್ಚಿಮಬಂಗಾಳ ವಿಧಾನಸಭೆ ವಿರೋಧಪಕ್ಷದ ನಾಯಕ, ಬಿಜೆಪಿ ಮುಖಂಡ ಸುವೇಂದು ಅಧಿಕಾರಿ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಪುರ್ಬಾ ಮದಿನಿಪುರ ಜಿಲ್ಲೆಯ ಕಾಂತಿ ಪುರಸಭೆಯ ಕಚೇರಿಯಿಂದ ಲಕ್ಷಾಂತರ ಮೌಲ್ಯದ ಸಾಮಗ್ರಿಗಳನ್ನು ಕಳವು ಮಾಡಲಾಗಿದೆ ಎಂದು ಪುರಸಭೆ ಸದಸ್ಯ ರತ್ನಾದೀಪ್ ಮನ್ನಾ ದೂರು ಸಲ್ಲಿಸಿದ್ದರು. ಅದನ್ನು ಆಧರಿಸಿ ಸುವೇಂದು ಅಧಿಕಾರಿ, ಅವರ ತಮ್ಮ ಸೌಮೇಂದು ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮೇ 29ರಂದು ಕಾಂತಿ ಪುರಸಭೆ ಕಚೇರಿಯಿಂದ ಯಸ್ ಚಂಡಮಾರುತಕ್ಕೆ ಸಂಬಂಧಿಸಿದ ಸುಮಾರು ಎರಡು ಲಕ್ಷ ಮೌಲ್ಯದ ಪರಿಹಾರ ಸಾಮಗ್ರಿಗಳು ಕಳವಾಗಿದ್ದವು. ಈ ಸಂಬಂಧ ಇಬ್ಬರನ್ನು ಪೊಲೀಸರು ಬಂಧಿಸಿದ್ದಾರೆ.

'ಸುವೇಂದು ಮತ್ತು ಸೌಮೇಂದು ಅವರು ತಮಗೆ ಪರಿಹಾರ ಸಾಮಗ್ರಿಗಳನ್ನು ಕದಿಯಲು ನಿರ್ದೇಶನ ನೀಡಿದ್ದರು ಎಂದು ಬಂಧಿತರು ತಪ್ಪೊಪ್ಪಿಕೊಂಡಿದ್ದಾರೆ' ಎಂದು ಪುರ್ಬಾ ಮದಿನಿಪುರ ಜಿಲ್ಲಾ ಪೊಲೀಸರು ಹೇಳಿದ್ದಾರೆ.

ಕಳ್ಳಭಟ್ಟಿ ದುರಂತ ಪ್ರಕರಣ: ಪಕ್ಷದಿಂದ ಬಿಜೆಪಿ ಶಾಸಕ ವಜಾ

ಅಲಿಗಡ (ಪಿಟಿಐ): ಉತ್ತರಪ್ರದೇಶದ ಅಲಿಗಡ ಜಿಲ್ಲೆಯಲ್ಲಿ ನಡೆದ ಕಳ್ಳಭಟ್ಟಿ ದುರಂತ ಪ್ರಕರಣದ ಪ್ರಮುಖ ಆರೋಪಿ ಬಿಜೆಪಿಯ ಶಾಸಕ ರಿಷಿ ಶರ್ಮಾ ಅವರನ್ನು ಸೋಮವಾರ ಬಿಜೆಪಿಯು ಪಕ್ಷದಿಂದ ಹೊರಹಾಕಿದೆ.

ರಿಷಿ ಶರ್ಮಾ ಅವರನ್ನು ಪೊಲೀಸರು ಭಾನುವಾರ ಬಂಧಿಸಿದ್ದರು.

ಫ್ರೆಂಚ್ ಓಪನ್: ಸ್ಟೀಫನ್ಸ್ ಮಣಿಸಿದ ಕ್ರೆಸಿಕೋವಾ ಎಂಟರ ಘಟ್ಟಕ್ಕೆ; ರಫೆಲ್ ನಡಾಲ್‌ಗೆ ಗೆಲುವು

ಗೆದ್ದ ಜೊಕೊವಿಚ್; ಮನಗೆದ್ದ ಮುಸೆಟ್ಟಿ

ಪ್ಯಾರಿಸ್ (ಪಿಟಿಐ/ರಾಯಿಟರ್ಸ್): ವಿಶ್ವ ರ್‍ಯಾಂಕಿಂಗ್‌ನಲ್ಲಿ ಒಂದನೇ ಸ್ಥಾನದಲ್ಲಿರುವ ನೊವಾಕ್ ಜೊಕೊವಿಚ್‌ಗೆ ಪ್ರಬಲ ಪೈಪೋಟಿ ನೀಡಿದ ಇಟಲಿಯ ಯುವ ಆಟಗಾರ ಲೊರೆನ್ಸೊ ಮುಸೆಟ್ಟಿ ಅವರು ಟೆನಿಸ್ ಪ್ರಿಯರ ಮನಗೆದ್ದರು. ಸೋಮವಾರ ನಡೆದ ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯ ಪ್ರೀ ಕ್ವಾರ್ಟರ್ ಫೈನಲ್ ಪಂದ್ಯದ ಮೊದಲ ಎರಡು ಸೆಟ್‌ಗಳನ್ನು ಸೋತರೂ ಚೇತರಿಸಿಕೊಂಡ ಜೊಕೊವಿಚ್ 6-7 (7/9), 6-7 (2/7), 6-1, 6-0, 4-0ರಲ್ಲಿ ಜಯ ಗಳಿಸಿದರು.

ಟೈ ಬ್ರೇಕರ್‌ನಲ್ಲಿ ಮುಕ್ತಾಯಗೊಂಡ ಮೊದಲ ಎರಡು ಸೆಟ್‌ಗಳಲ್ಲಿ 19 ವರ್ಷದ ಮುಸೆಟ್ಟಿ ಅತ್ಯಮೋಘ ಆಟದ ಮೂಲಕ ಭರವಸೆ ಮೂಡಿಸಿದ್ದರು. ಮುಂದಿನ ಎರಡು ಸೆಟ್‌ಗಳಲ್ಲಿ ಜೊಕೊವಿಚ್ ನೈಜ ಸಾಮರ್ಥ್ಯ ಮೆರೆದು 76ನೇ ಕ್ರಮಾಂಕದ ಆಟಗಾರನನ್ನು ಕಂಗೆಡಿಸಿದರು. ನಿರ್ಣಾಯಕ ಸೆಟ್‌ನಲ್ಲಿ ಜೊಕೊವಿಚ್ 4–0ಯ ಮುನ್ನಡೆ ಗಳಿಸಿದ್ದಾಗ ಮುಸೆಟ್ಟಿ ನಿವೃತ್ತಿ ಘೋಷಿಸಿದರು.

ಲೊರೆನ್ಸೊ ಮುಸೆಟ್ಟಿ ಎದುರಿನ ಪಂದ್ಯದಲ್ಲಿ ಚೆಂಡನ್ನು ರಿಟರ್ನ್ ಮಾಡಿದ ನೊವಾಕ್ ಜೊಕೊವಿಚ್ –ರಾಯಿಟರ್ಸ್ ಚಿತ್ರ

ನಡಾಲ್ ಜಯಭೇರಿ: ಇಟಲಿಯ ಜಾನಿಕ್ ಸಿನ್ನರ್ ಅವರನ್ನು 7-5, 6-3, 6-0ರಿಂದ ಮಣಿಸಿದ ಸ್ಪೇನ್‌ನ ರಫೆಲ್ ನಡಾಲ್, 15ನೇ ಬಾರಿ ಫ್ರೆಂಚ್ ಓಪನ್ ಟೂರ್ನಿಯ ಎಂಟರಘಟ್ಟ ತಲುಪಿದರು. ಮುಂದಿನ ಪಂದ್ಯದಲ್ಲಿ ಅವರು ಅರ್ಜೆಂಟೀನಾದ ಡೀಗೊ ಸ್ವಾರ್ಟ್ಸ್‌ಮನ್ ಅವರನ್ನು ಎದುರಿಸುವರು. ಸ್ವಾರ್ಟ್ಸ್‌ಮನ್ ಅವರು ಜರ್ಮನಿಯ ಜಾನ್ ಲೆನಾರ್ಡ್ ಸ್ಟ್ರಫ್ ವಿರುದ್ಧ 7-6(9), 6-4, 7-5ರಲ್ಲಿ ಜಯಿಸಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಕ್ರೆಸಿಕೋವಾಗೆ ಮಣಿದ ಸ್ಟೀಫನ್ಸ್: ಜೆಕ್ ಗಣರಾಜ್ಯದ ಬಾರ್ಬೊರಾ ಕ್ರೆಸಿಕೋವಾ ಅಮೆರಿಕದ ಸ್ಲಾನೆ ಸ್ಟೀಫನ್ಸ್ ಅವರನ್ನು ಮಣಿಸಿ ಮಹಿಳೆಯರ ವಿಭಾಗದ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು. ಸೋಮವಾರ ನಡೆದ ಪಂದ್ಯದಲ್ಲಿ ಅವರು 6-2, 6-0ರಲ್ಲಿ ಜಯಿಸಿದರು.

ಬೋಪಣ್ಣ ಜೋಡಿಗೆ ಸೋಲು: ಭಾರತದ ರೋಹನ್ ಬೋಪಣ್ಣ ಮತ್ತು ಕ್ರೊವೇಷ್ಯಾದ ಫ್ರಾಂಕೊ ಸುಗೊರ್ ಪುರುಷರ ಡಬಲ್ಸ್ ಕ್ವಾರ್ಟರ್ ಫೈನಲ್‌ನಲ್ಲಿ 5-7 3-6 ಸೆಟ್‌ಗಳಿಂದ ಸ್ಪೇನ್‌ನ ಪ್ಯಾಬ್ಲೊ ಆಂಡುಜರ್ ಮತ್ತು ಪೆಡ್ರೊ ಮಾರ್ಟಿನೆಜ್ ಎದುರು ಸೋತರು.

ಇದರೊಂದಿಗೆ ಟೂರ್ನಿಯಲ್ಲಿ ಭಾರತದ ಅಭಿಯಾನ ಕೊನೆಗೊಂಡಿತು.

ದಾಖಲೆ ಬರೆದ ಕೊಕೊ ಗಫ್

ಕೊಕೊ ಗಫ್

ಪ್ಯಾರಿಸ್ (ಎಎಫ್‌ಪಿ): ಅಮೆರಿಕದ ಯುವ ಆಟಗಾರ್ತಿ ಕೊಕೊ ಗಫ್ ಅವರು ಒಂದೂವರೆ ದಶಕದಲ್ಲಿ ಗ್ರ್ಯಾನ್‌ಸ್ಲಾಂ ಟೂರ್ನಿಯೊಂದರ ಕ್ವಾರ್ಟರ್ ಫೈನಲ್ ಪ್ರವೇಶಿಸಿದ ಅತಿ ಕಿರಿಯ ಮಹಿಳೆ ಎಂಬ ದಾಖಲೆ ಬರೆದರು. 17 ವರ್ಷ ವಯಸ್ಸಿನ ಅವರು ಸೋಮವಾರ ನಡೆದ 16ರ ಘಟ್ಟದ ಪಂದ್ಯದಲ್ಲಿ ಟುನೀಷಿಯಾದ ಆನ್ಸ್ ಜಬೆವುರ್ ಅವರನ್ನು 6-3, 6-1ರಲ್ಲಿ ಮಣಿಸಿದರು.

53 ನಿಮಿಷಗಳಲ್ಲಿ ಮುಗಿದ ಪಂದ್ಯದಲ್ಲಿ ಕೊಕೊ ಗಫ್ ಮೂರು ಬಾರಿ ಎದುರಾಳಿಯ ಸರ್ವ್ ಮುರಿದರು.

2006ರಲ್ಲಿ ಫ್ರೆಂಚ್ ಓಪನ್ ಕ್ವಾರ್ಟರ್ ಫೈನಲ್ ಪ್ರವೇಶಿಸಿದ ಜೆಕ್ ಗಣರಾಜ್ಯದ ನಿಕೋಲ್ ವೈಡಿಸೋವಾ ಹೆಸರಿನಲ್ಲಿ ಈ ವರೆಗೆ ದಾಖಲೆ ಇತ್ತು.

ಒಲಿಂಪಿಕ್ ಕೂಟ ನಡೆಯುವ ಭರವಸೆ

ಟೋಕಿಯೊ (ರಾಯಿಟರ್ಸ್): ಜಪಾನ್ ಜನಸಂಖ್ಯೆಯ ಅರ್ಧದಷ್ಟು ಮಂದಿ ಒಲಿಂಪಿಕ್ಸ್ ಕೂಟ ಈ ವರ್ಷವೇ ನಡೆಯಲಿದೆ ಎಂಬ ಭರವಸೆಯಲ್ಲಿದ್ದಾರೆ ಎಂದು ಯೊಮಿಯುರಿ ಪತ್ರಿಕೆ ನಡೆಸಿರುವ ಸಮೀಕ್ಷೆಯಲ್ಲಿ ತಿಳಿದು ಬಂದಿದೆ.

ಕೊರೊನಾ ಪ್ರಕರಣಗಳು ಹೆಚ್ಚುತ್ತಿರುವ ಕಾರಣ ಟೋಕಿಯೊದಲ್ಲಿ ಕೂಟವನ್ನು ಸುರಕ್ಷಿತವಾಗಿ ಆಯೋಜಿಸುವ ಬಗ್ಗೆ ಇನ್ನೂ ಸಂದೇಹಗಳು ಉಳಿದಿವೆ. ಈ ನಡುವೆ, ಜೂನ್ ನಾಲ್ಕರಿಂದ ಆರರ ವರೆಗೆ ನಡೆಸಿದ ಸಮೀಕ್ಷೆಯಲ್ಲಿ 50 ಶೇಕಡಾ ಮಂದಿ ಒಲಿಂಪಿಕ್ಸ್ ನಡೆಯುವುದು ಖಚಿತ ಎಂದು ಅಭಿಪ್ರಾಯಪಟ್ಟಿದ್ದಾರೆ. ಪ್ರೇಕ್ಷಕರಿಲ್ಲದೆ ಕೂಟ ನಡೆಯಲಿದೆ ಎಂದು 26 ಶೇಕಡಾ ಮಂದಿ ಹೇಳಿದ್ದರೆ ಉಳಿದವರು ಕೂಟ ರದ್ದಾಗುವ ಸಾಧ್ಯತೆ ಇದೆ ಎಂದಿದ್ದಾರೆ.

ಅಧಿಕಾರಿ ಆತ್ಮಹತ್ಯೆ: ಜಪಾನ್ ಒಲಿಂಪಿಕ್ ಸಮಿತಿಯ (ಜೆಒಸಿ) ಹಿರಿಯ ಅಧಿಕಾರಿಯೊಬ್ಬರು ಟೋಕಿಯೊದ ಸಬ್‌ವೇದಲ್ಲಿ ರೈಲಿನಡಿಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಸಾವಿಗೀಡಾದ ವ್ಯಕ್ತಿ ಜೆಒಸಿಯ ಹಣಕಾಸು ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿದ್ದರು ಎಂದು ಪೊಲೀಸ್ ಮೂಲಗಳನ್ನು ಉಲ್ಲೇಖಿಸಿ ಸ್ಥಳೀಯ ಟಿವಿ ಚಾನಲ್ ನಿಪ್ಪೋನ್ ಹೇಳಿದೆ.

ಸುದ್ದಿ 2 ನಿಮಿಷ

ಪೋರ್ಚುಗಲ್‌ನಲ್ಲಿ ನೀರಜ್ ಚೋಪ್ರಾ ಸ್ಪರ್ಧೆ, ಅಭ್ಯಾಸ

ನವದೆಹಲಿ (ಪಿಟಿಐ): ಒಲಿಂಪಿಕ್ಸ್‌ಗೆ ಸಿದ್ಧತೆ ನಡೆಸುತ್ತಿರುವ ಭಾರತದ ಜಾವೆಲಿನ್ ಥ್ರೋ ಪಟು ನೀರಜ್ ಚೋಪ್ರಾ ಅವರು ಪೋರ್ಚುಗಲ್ ತಲುಪಿದ್ದು ಲಿಸ್ಬನ್‌ನಲ್ಲಿ ಇದೇ 10ರಂದು ನಡೆಯಲಿರುವ ಕ್ರೀಡಾಕೂಟವೊಂದರಲ್ಲಿ ಪಾಲ್ಗೊಳ್ಳಲಿದ್ದಾರೆ. ಈ ಮೂಲಕ ಒಂದು ವರ್ಷದ ನಂತರ ಅಂತರರಾಷ್ಟ್ರೀಯ ಸ್ಪರ್ಧಾಕಣದಲ್ಲಿ ಕಾಣಿಸಿಕೊಳ್ಳಲಿದ್ದಾರೆ.

ಕಳೆದ ವರ್ಷ ಜನವರಿಯಲ್ಲಿ ದಕ್ಷಿಣ ಆಫ್ರಿಕಾದ ಪೊಚೆಫ್‌ಸ್ಟ್ರೂಮ್‌ನಲ್ಲಿ ನಡೆದಿದ್ದ ಸ್ಪರ್ಧೆಯಲ್ಲಿ 87.86 ಮೀಟರ್ಸ್ ದೂರ ಎಸೆಯುವ ಮೂಲಕ ಅವರು ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸಿದ್ದರು. ಅರ್ಹತೆಗೆ ನಿಗದಿ ಮಾಡಿದ್ದ ದೂರ 85 ಮೀಟರ್ಸ್ ಆಗಿತ್ತು.

‘ಲಿಸ್ಬನ್ ವಿಶ್ವವಿದ್ಯಾಲಯ ಕ್ರೀಡಾಂಗಣದಲ್ಲಿ ನಡೆಯಲಿರುವ ಸಿಟಾಡೆ ಡಿ ಲಿಸ್ಬನ್ ಕೂಟದಲ್ಲಿ ನೀರಜ್ ಭಾಗವಹಿಸಲಿದ್ದಾರೆ. ಜೂನ್ 22ರಂದು ಸ್ವೀಡನ್‌ನಲ್ಲಿ ನಡೆಯಲಿರುವ ಕಾರ್ಲ್‌ಸ್ಟಡ್ ಗ್ರ್ಯಾನ್‌ಪ್ರಿ ಸೇರಿದಂತೆ ಅವರಿಗೆ ಇನ್ನಷ್ಟು ಕ್ರೀಡಾಕೂಟಗಳಲ್ಲಿ ಅವಕಾಶ ದೊರಕಿಸಿಕೊಡಲು ಪ್ರಯತ್ನಿಸಲಾಗುವುದು’ ಎಂದು ಅವರ ಆಪ್ತ ಮೂಲಗಳು ತಿಳಿಸಿವೆ.



‘ಅವರು ಭಾನುವಾರ ಲಿಸ್ಬನ್ ತಲುಪಿದ್ದಾರೆ. ಸ್ಪರ್ಧೆಯಲ್ಲಿ ಪಾಲ್ಗೊಳ್ಳುವುದರೊಂದಿಗೆ ಅಭ್ಯಾಸವನ್ನೂ ನಡೆಸಲಿದ್ದಾರೆ. ಭಾರತದಿಂದ ತೆರಳಲು ಬಹುತೇಕ ರಾಷ್ಟ್ರಗಳಲ್ಲಿ ನಿರ್ಬಂಧ ಇರುವುದರಿಂದ ಈ ಅವಕಾಶ ಮಹತ್ವದ್ದು’ ಎಂದು ಪ್ರಾಯೋಜಕರಾದ ಜೆಎಸ್‌ಡಬ್ಲ್ಯು ಕಂಪನಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಪಾರ್ಥ್ ಜಿಂದಾಲ್ ವಿವರಿಸಿದ್ದಾರೆ.

ಐಪಿಎಲ್ ಫೈನಲ್ ಅ.15ಕ್ಕೆ ಮುಂದೂಡುವ ಸಾಧ್ಯತೆ

ನವದೆಹಲಿ (ಪಿಟಿಐ): ಅನಿರ್ದಿಷ್ಟಾವಧಿಗೆ ಸ್ಥಗಿತಗೊಂಡಿರುವ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯನ್ನು ಯುನೈಟೆಡ್ ಅರಬ್ ಎಮಿರೇಟ್ಸ್‌ನಲ್ಲಿ ಮುಂದುವರಿಸಲು ನಿರ್ಧರಿಸಲಾಗಿದ್ದು, ಫೈನಲ್ ಪಂದ್ಯವನ್ನು ಅಕ್ಟೋಬರ್ 15ಕ್ಕೆ ಮುಂದೂಡುವ ಸಾಧ್ಯತೆಯಿದೆ. ಸೆಪ್ಟೆಂಬರ್‌ನಲ್ಲಿ ಆ ದೇಶದಲ್ಲಿ ಬಿಸಿಲಿನ ಪ್ರಖರತೆ ಹೆಚ್ಚಿರುವ ಕಾರಣ ಡಬಲ್ ಹೆಡರ್‌ಗಳನ್ನು ಕಡಿತಗೊಳಿಸುವ ಉದ್ದೇಶ ಈ ಚಿಂತನೆಯ ಹಿಂದಿದೆ.

ಈ ಹಿಂದಿನ ವರದಿಯಂತೆ ಟೂರ್ನಿಯು ಸೆಪ್ಟೆಂಬರ್ 19ರ ಭಾನುವಾರ ಪ್ರಾರಂಭವಾಗಿ, ಫೈನಲ್ ಪಂದ್ಯವನ್ನು ಅಕ್ಟೋಬರ್ 10ಕ್ಕೆ ನಡೆಸಲು ಉದ್ದೇಶಿಸಲಾಗಿತ್ತು. ಆದರೆ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ(ಬಿಸಿಸಿಐ) ಮತ್ತು ಎಮಿರೇಟ್ಸ್ ಕ್ರಿಕೆಟ್ ಮಂಡಳಿಗಳು ಟಿ–20 ಟೂರ್ನಿಯನ್ನು ಅಕ್ಟೋಬರ್ 15ರವರೆಗೆ ವಿಸ್ತರಿಸುವ ಸಾಧ್ಯತೆ ಇದೆ.

ಫುಟ್‌ಬಾಲ್: ಬಾಂಗ್ಲಾ ಎದುರು ಭಾರತಕ್ಕೆ ಗೆಲುವು

ದೋಹಾ (ಪಿಟಿಐ): ಆರು ಪಂದ್ಯಗಳಲ್ಲಿ ನಿರಾಸೆ ಅನುಭವಿಸಿದ್ದ ಭಾರತ ತಂಡ ವಿಶ್ವಕಪ್ ಮತ್ತು ಏಷ್ಯಾಕಪ್ ಫುಟ್‌ಬಾಲ್ ಅರ್ಹತಾ ಟೂರ್ನಿಯಲ್ಲಿ ಸೋಮವಾರ ಮೊದಲ ಜಯದ ಸವಿಯುಂಡಿತು. ಅಲ್ ಸದ್ ಕ್ರೀಡಾಂಗಣದಲ್ಲಿ ಬಾಂಗ್ಲಾದೇಶ ಎದುರು ನಡೆದ ಪಂದ್ಯದಲ್ಲಿ ನಾಯಕ ಸುನಿಲ್ ಚೆಟ್ರಿ ಗಳಿಸಿದ ಎರಡು ಗೋಲುಗಳ ಬಲದಿಂದ ಭಾರತ 2–0 ಅಂತರದಲ್ಲಿ ಜಯ ಗಳಿಸಿತು.

ವಿಶ್ವ ರ್‍ಯಾಂಕಿಂಗ್‌ನಲ್ಲಿ 105ನೇ ಸ್ಥಾನದಲ್ಲಿರುವ ಭಾರತ 184ನೇ ಸ್ಥಾನದಲ್ಲಿರುವ ಬಾಂಗ್ಲಾವನ್ನು ಆರಂಭದಿಂದಲೇ ಕಾಡಿತು. ಮೊದಲಾರ್ಧದಲ್ಲಿ ಅವಕಾಶಗಳನ್ನು ಸೃಷ್ಟಿಸಿಕೊಂಡರೂ ಚೆಂಡನ್ನು ಗುರಿ ಮುಟ್ಟಿಸಲು ಆಗಲಿಲ್ಲ. ಆದರೆ ದ್ವಿತೀಯಾರ್ಧದಲ್ಲಿ ಯಶಸ್ಸು ಕಂಡಿತು. 79ನೇ ನಿಮಿಷದಲ್ಲಿ ಸುನಿಲ್ ಚೆಟ್ರಿ ಮುನ್ನಡೆ ಗಳಿಸಿಕೊಟ್ಟರು.

ಇಂಜುರಿ ಅವಧಿಯಲ್ಲಿ (90+2) ಸುನಿಲ್ ಚೆಟ್ರಿ ಮತ್ತೊಂದು ಗೋಲು ದಾಖಲಿಸಿದರು.

ವಿಶ್ವಕಪ್ ಅರ್ಹತೆಯಿಂದ ಭಾರತ ಈಗಾಗಲೇ ಹೊರಬಿದ್ದಿದೆ. ಈ ಗೆಲುವಿನೊಂದಿಗೆ ಏಷ್ಯಾಕಪ್ ಟೂರ್ನಿಗೆ ಅರ್ಹತೆ ಗಳಿಸುವ ಮೂರನೇ ಸುತ್ತಿನ ಪಂದ್ಯಗಳಲ್ಲಿ ಸ್ಪರ್ಧಿಸುವ ಭಾರತದ ಕನಸು ಜೀವಂತವಾಗಿ ಉಳಿದಿದೆ.

ಸುನಿಲ್ ಚೆಟ್ರಿ

ಸೋಮವಾರದ ಗೆಲುವಿನೊಂದಿಗೆ ವಿಶ್ವಕಪ್ ಅರ್ಹತಾ ಟೂರ್ನಿಯೊಂದರಲ್ಲಿ ಭಾರತ ಆರು ವರ್ಷಗಳ ನಂತರ ಮೊದಲ ಜಯ ಗಳಿಸಿದಂತಾಗಿದೆ. ವಿದೇಶದಲ್ಲಿ ಇದು 20 ವರ್ಷಗಳ ನಂತರ ಮೊದಲ ಜಯವಾಗಿದೆ. 2015ರ ನವೆಂಬರ್‌ನಲ್ಲಿ ಬೆಂಗಳೂರಿನಲ್ಲಿ ನಡೆದ ಪಂದ್ಯದಲ್ಲಿ ಗುವಾಮ್ ಎದುರು ಭಾರತ 1–0 ಅಂತರದಲ್ಲಿ ಗೆಲುವು ಸಾಧಿಸಿತ್ತು.

ಇಲ್ಲಿ ಗಳಿಸಿದ 2 ಗೋಲುಗಳೊಂದಿಗೆ ಈಗ ಆಡುತ್ತಿರುವ ಆಟಗಾರರ ಪೈಕಿ ಹೆಚ್ಚು ಗೋಲು ಗಳಿಸಿರುವವರ ಪಟ್ಟಿಯಲ್ಲಿ ಸುನಿಲ್ ಚೆಟ್ರಿ ಎರಡನೇ ಸ್ಥಾನಕ್ಕೇರಿದರು. ಅವರ ಖಾತೆಯಲ್ಲಿ ಈಗ 74 ಗೋಲುಗಳಿವೆ. ಪೋರ್ಚುಗಲ್‌ನ ಕ್ರಿಸ್ಟಿಯಾನೊ ರೊನಾಲ್ಡೊ 103 ಗೋಲು ಗಳಿಸಿದ್ದು ಮೂರನೇ ಸ್ಥಾನದಲ್ಲಿರುವ ಯುನೈಟೆಡ್ ಅರಬ್ ಎಮಿರೇಟ್ಸ್‌ನ ಅಲಿ ಮಬ್‌ಖೌತ್ 73 ಗೋಲು ಗಳಿಸಿದ್ದಾರೆ.

ಭಾರತ–ಶ್ರೀಲಂಕಾ ಕ್ರಿಕೆಟ್ ಸರಣಿ ವೇಳಾಪಟ್ಟಿ ಪ್ರಕಟ

ನವದೆಹಲಿ (ಪಿಟಿಐ): ಶ್ರೀಲಂಕಾ ವಿರುದ್ಧ ಭಾರತದ ಪರ್ಯಾಯ ತಂಡವು ಆಡಲಿರುವ ತಲಾ ಮೂರು ಏಕದಿನ ಹಾಗೂ ಟ್ವೆಂಟಿ–20 ಪಂದ್ಯಗಳ ಕ್ರಿಕೆಟ್ ಸರಣಿಯು ಜುಲೈ 13ರಿಂದ 25ರವರೆಗೆ ನಡೆಯಲಿದೆ. ಕ್ರೀಡಾ ಕಾರ್ಯಕ್ರಮಗಳ ಪ್ರಸಾರ ವಾಹಿನಿ ಸೋನಿ ಸೋಮವಾರ ಈ ವಿಷಯ ತಿಳಿಸಿದೆ.

ಶಿಖರ್ ಧವನ್ ಅಥವಾ ಹಾರ್ದಿಕ ಪಾಂಡ್ಯ ನಾಯಕತ್ವದಲ್ಲಿ ಹೆಚ್ಚು ಯುವ ಆಟಗಾರರನ್ನು ಈ ಸರಣಿಗೆ ಆಯ್ಕೆ ಮಾಡುವ ನಿರೀಕ್ಷೆಯಿದೆ. ಸಂಪೂರ್ಣ ಫಿಟ್ ಆಗಿರುವ ಶ್ರೇಯಸ್ ಅಯ್ಯರ್ ಕೂಡ ನಾಯಕತ್ವದ ರೇಸ್‌ನಲ್ಲಿದ್ದಾರೆ.

ಮೂರು ಏಕದಿನ ಪಂದ್ಯಗಳು ಕ್ರಮವಾಗಿ ಜುಲೈ 13, 16 ಮತ್ತು 18ರಿಂದ ನಡೆಯಲಿವೆ. ಜುಲೈ 21, 23 ಮತ್ತು 25ರಂದು ಮೂರು ಟ್ವೆಂಟಿ–20 ಪಂದ್ಯಗಳನ್ನು ನಿಗದಿ ಮಾಡಲಾಗಿದೆ. ಪಂದ್ಯಗಳು ನಡೆಯುವ ತಾಣಗಳನ್ನು ಇನ್ನೂ ಪ್ರಕಟಿಸಿಲ್ಲ.

ಲಿಂಗ ತಾರತಮ್ಯ, ಜನಾಂಗೀಯ ನಿಂದನೆ ಆರೋಪ

ಬೌಲರ್ ರಾಬಿನ್ಸನ್ ಅಮಾನತು

ಲಂಡನ್ (ಎಎಫ್‌ಪಿ): ಪದಾರ್ಪಣೆ ಪಂದ್ಯದಲ್ಲೇ ಅಮೋಘ ಸಾಮರ್ಥ್ಯ ಮೆರೆದಿರುವ ಇಂಗ್ಲೆಂಡ್‌ನ ವೇಗದ ಬೌಲರ್ ಒಲಿ ರಾಬಿನ್ಸನ್ ಜನಾಂಗೀಯ ನಿಂದನೆ ಮತ್ತು ಲಿಂಗತಾರತಮ್ಯ ಆರೋಪಕ್ಕೆ ಗುರಿಯಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಅವರನ್ನು ಇಂಗ್ಲೆಂಡ್ ಮತ್ತು ವೇಲ್ಸ್ ಕ್ರಿಕೆಟ್ ಮಂಡಳಿ (ಇಸಿಬಿ) ಅಂತರರಾಷ್ಟ್ರೀಯ ಕ್ರಿಕೆಟ್‌ನಿಂದ ಅಮಾನತು ಮಾಡಿದೆ.

ಲಾರ್ಡ್ಸ್‌ನಲ್ಲಿ ಭಾನುವಾರ ಮುಗಿದ ನ್ಯೂಜಿಲೆಂಡ್ ಎದುರಿನ ಮೊದಲ ಟೆಸ್ಟ್ ಪಂದ್ಯದಲ್ಲಿ ರಾಬಿನ್ಸನ್ ಉತ್ತಮ ಸಾಧನೆ ಮಾಡಿದ್ದರು. ಮೊದಲ ಇನಿಂಗ್ಸ್‌ನಲ್ಲಿ ನಾಲ್ಕು ಸೇರಿದಂತೆ ಒಟ್ಟು ಏಳು ವಿಕೆಟ್ ಉರುಳಿಸಿದ್ದ ಅವರು ಮೊದಲ ಇನಿಂಗ್ಸ್‌ನಲ್ಲಿ 42 ರನ್ ಕೂಡ ಗಳಿಸಿದ್ದರು. ಪಂದ್ಯ ಡ್ರಾದಲ್ಲಿ ಮುಕ್ತಾಯಗೊಂಡಿತ್ತು.

ಒಲಿ ರಾಬಿನ್ಸನ್

‘ಯುವಕರಾಗಿದ್ದಾಗ 2012 ಮತ್ತು 2013ರಲ್ಲಿ ಟ್ವೀಟ್ ಮಾಡಿದ ಹೇಳಿಕೆಗಳು ಪಂದ್ಯದ ಸಂದರ್ಭದಲ್ಲಿ ಮುನ್ನೆಲೆಗೆ ಬಂದಿದ್ದವು. ಹೀಗಾಗಿ ಅವರ ಮೇಲೆ ಕ್ರಮ ಕೈಗೊಳ್ಳಲಾಗಿದೆ. ರಾಷ್ಟ್ರೀಯ ಮತ್ತು ಸಸೆಕ್ಸ್ ತಂಡದ ಆಟಗಾರ ಆಗಿರುವ 27 ವರ್ಷದ ಅವರನ್ನು ವಿಚಾರಣೆಗೆ ಒಳಪಡಿಸಲಾಗುವುದು’ ಎಂದು ಇಸಿಬಿ ತಿಳಿಸಿದೆ.

‘ತಕ್ಷಣವೇ ತಂಡ ತೊರೆಯಲು ಅವರಿಗೆ ಸೂಚಿಸಲಾಗಿದ್ದು ಇದೇ 10ರಿಂದ ಎಜ್‌ಬಾಸ್ಟನ್‌ನಲ್ಲಿ ನಡೆಯಲಿರುವ ಎರಡನೇ ಟೆಸ್ಟ್ ಪಂದ್ಯಕ್ಕೆ ಅವರು ಲಭ್ಯ ಇರುವುದಿಲ್ಲ’ ಎಂದು ತಿಳಿಸಿದೆ.

ಮುಸ್ಲಿಮರನ್ನು ಭಯೋತ್ಪಾದಕ ಚಟುವಟಿಕೆಯೊಂದಿಗೆ ತಾಳೆ ಹಾಕಿದ್ದ ಅವರು ಮಹಿಳೆಯರು ಮತ್ತು ಏಷ್ಯಾದ ಜನರ ಬಗ್ಗೆ ಅವಹೇಳನಕಾರಿಯಾಗಿ ಟ್ವೀಟ್ ಮಾಡಿದ್ದರು. ಟೆಸ್ಟ್ ಪಂದ್ಯದ ಮೊದಲ ದಿನವಾದ ಬುಧವಾರ ಎರಡೂ ತಂಡಗಳ ಆಟಗಾರರು ಒಗ್ಗಟ್ಟಿನ ಸಂದೇಶ ಸಾರಲು ಸಾಲಾಗಿ ನಿಂತಿದ್ದರು. ಇಂಗ್ಲೆಂಡ್ ಆಟಗಾರರು ‘ಕ್ರಿಕೆಟ್ ಎಲ್ಲರ ಕ್ರೀಡೆ’ ಎಂಬ ಬರಹ ಇರುವ ಟಿ ಶರ್ಟ್ ತೊಟ್ಟಿದ್ದರು. ಈ ಹಿನ್ನೆಲೆಯಲ್ಲಿ ರಾಬಿನ್ಸನ್ ಅವರ ಟ್ವೀಟ್‌ಗಳ ಪ್ರಸ್ತಾಪವಾಗಿದೆ.

ತಮ್ಮ ವಿರುದ್ಧದ ಆರೋಪಗಳಿಗೆ ಉತ್ತರಿಸಿರುವ ರಾಬಿನ್ಸನ್ ‘ಇಂಥ ಹೇಳಿಕೆಗಳಿಂದ ಬೇಸರವಾಗಿದೆ. ನಾನು ಜನಾಂಗೀಯ ವಿರೋಧಿಯಾಗಲಿ ಮಹಿಳಾ ವಿರೋಧಿಯಾಗಲಿ ಅಲ್ಲ’ ಎಂದು ಸ್ಪಷ್ಟಪಡಿಸಿದ್ದಾರೆ.

ಪ್ಯಾರಿಸ್ ತಲುಪಿದ ಮಹಿಳಾ ಆರ್ಚರಿ ತಂಡ

ಪ್ಯಾರಿಸ್ (ಪಿಟಿಐ): ಒಲಿಂಪಿಕ್ಸ್ ಟಿಕೆಟ್ ಗಿಟ್ಟಿಸುವ ಕೊನೆಯ ಅರ್ಹತಾ ಟೂರ್ನಿಯಲ್ಲಿ ಪಾಲ್ಗೊಳ್ಳಲು ಭಾರತ ಮಹಿಳಾ ಆರ್ಚರಿ ತಂಡವು ಸೋಮವಾರ ಇಲ್ಲಿಗೆ ತಲುಪಿದೆ. ಇದೇ 20ರಿಂದ ಈ ಟೂರ್ನಿ ನಡೆಯಲಿದೆ.

ಟೋಕಿಯೊದಲ್ಲಿ ನಿಗದಿಯಾಗಿರುವ ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸಲು ದೀಪಿಕಾ ಕುಮಾರಿ, ಅಂಕಿತಾ ಭಕತ್ ಹಾಗೂ ಕೋಮಲಿಕಾ ಬಾರಿ ಅವರನ್ನೊಳಗೊಂಡ ತಂಡವು ಈ ಟೂರ್ನಿಯಲ್ಲಿ ಅಗ್ರ ಮೂರರೊಳಗಿನ ಸ್ಥಾನ ಗಳಿಸಬೇಕಿದೆ.

ಭಾರತ ಮಹಿಳಾ ತಂಡವು ಪ್ಯಾರಿಸ್‌ನಲ್ಲಿ 10 ದಿನಗಳ ಕ್ವಾರಂಟೈನ್ ಪೂರ್ಣಗೊಳಿಸಲಿದೆ.

ಕ್ಷಮೆಯಾಚಿಸಿದ ಹರಭಜನ್ ಸಿಂಗ್

ಅಮೃತಸರ (ಪಿಟಿಐ): ಖಲಿಸ್ತಾನ ಉಗ್ರ ಜರ್ನೈಲ್ ಸಿಂಗ್ ಭಿಂದ್ರನ್‌ವಾಲೆಯನ್ನು ಹುತಾತ್ಮನೆಂದು ಬಿಂಬಿಸಿ ಇನ್‌ಸ್ಟಾಗ್ರಾಮ್‌ನಲ್ಲಿ ಪೋಸ್ಟ್ ಹಾಕಿದ್ದ ಕುರಿತು ಕ್ರಿಕೆಟಿಗ ಹರಭಜನ್ ಸಿಂಗ್ ಕ್ಷಮೆಯಾಚಿಸಿದ್ದಾರೆ.

‘ವಾಟ್ಸ್‌ಆ್ಯಪ್‌ನಲ್ಲಿ ಯಾರೋ ಫಾರ್ವರ್ಡ್ ಮಾಡಿದ್ದ ಚಿತ್ರವನ್ನು ಪೋಸ್ಟ್ ಮಾಡಿದ್ದೆ. ಅದು ಜರ್ನೈಲ್ ಸಿಂಗ್ ಚಿತ್ರ ಎಂದು ತಿಳಿದಿರಲಿಲ್ಲ’ ಎಂದು ಅವರು ಹೇಳಿದ್ದಾರೆ.

1984ರಲ್ಲಿ ನಡೆದ ‘ಆಪರೇಷನ್ ಬ್ಲೂ ಸ್ಟಾರ್’ನಲ್ಲಿ ಹುತಾತ್ಮರಾದವರನ್ನು ಸ್ಮರಿಸಿ ಹರಭಜನ್ ಇನ್‌ಸ್ಟಾಗ್ರಾಮ್‌ನಲ್ಲಿ ಚಿತ್ರ ಸಹಿತ ಸಂದೇಶ ಹಾಕಿದ್ದರು. ಇದಕ್ಕೆ ಆಕ್ಷೇಪ ವ್ಯಕ್ತವಾಗಿತ್ತು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	15,670
ಇಂದಿನ ಅಂತ್ಯ	15,751
▲	81
ದಿನದ ಗರಿಷ್ಠ	15,773

ವಿನಿಮಯ ದರ

$ ಡಾಲರ್	72.80
£ ಪೌಂಡ್	103
€ ಯುರೊ	88.55
¥ ಯೆನ್ (100ಕ್ಕೆ)	67

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹550
12 ಮೊಟ್ಟೆಗೆ	₹72
ಮೈಸೂರು	
100 ಮೊಟ್ಟೆಗೆ	₹550

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1470 (1460)
ಸೋಯಾ (ರಿಫೈನ್ಡ್)	₹1420 (1410)
ಸೂರ್ಯಕಾಂತಿ (ರಿಫೈನ್ಡ್)	₹1510 (1530)
ಪಾಮೋಲಿನ್	₹1255 (1245)

ಹೊಸ ಎತ್ತರಕ್ಕೆ ನಿಫ್ಟಿ, ಸೆನ್ಸೆಕ್ಸ್

ಮುಂಬೈ (ಪಿಟಿಐ): ಕೋವಿಡ್ ಪ್ರಕರಣಗಳ ಸಂಖ್ಯೆ ಇಳಿಕೆ ಆಗುತ್ತಿರುವುದರಿಂದ ಹಲವು ರಾಜ್ಯಗಳು ಲಾಕ್‌ಡೌನ್ ನಿರ್ಬಂಧಗಳನ್ನು ಸಡಿಲಗೊಳಿಸುತ್ತಿರುವುದು ಹೂಡಿಕೆದಾರರ ಉತ್ಸಾಹ ಹೆಚ್ಚಿಸಿದೆ. ಇದರ ಪರಿಣಾಮವಾಗಿ, ದೇಶದ ಷೇರುಪೇಟೆ ಸೂಚ್ಯಂಕಗಳು ಸೋಮವಾರ ಸಾರ್ವಕಾಲಿಕ ಗರಿಷ್ಠ ಮಟ್ಟದಲ್ಲಿ ವಹಿವಾಟು ಅಂತ್ಯಗೊಳಿಸಿವೆ.

ಇಂಧನ, ಐ.ಟಿ. ಮತ್ತು ಬ್ಯಾಂಕ್ ಷೇರುಗಳ ಉತ್ತಮ ಗಳಿಕೆಯು ಸಕಾರಾತ್ಮಕ ವಹಿವಾಟಿಗೆ ಉತ್ತೇಜನ ನೀಡಿದವು. ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 228 ಅಂಶ ಹೆಚ್ಚಾಗಿ ಹೊಸ ದಾಖಲೆಯಾದ 52,328 ಅಂಶಗಳಿಗೆ ತಲುಪಿತು. ಬಿಎಸ್‌ಇನಲ್ಲಿ ನೋಂದಾಯಿತ ಕಂಪನಿಗಳ ಒಟ್ಟಾರೆ ಬಂಡವಾಳ ಮೌಲ್ಯವು ದಾಖಲೆಯ ₹ 229 ಲಕ್ಷ ಕೋಟಿಗಳಿಗೆ ತಲುಪಿದೆ.ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 81 ಅಂಶ ಹೆಚ್ಚಾಗಿ ಸಾರ್ವಕಾಲಿಕ ಗರಿಷ್ಠ ಮಟ್ಟವಾದ 15,751 ಅಂಶಗಳಿಗೆ ತಲುಪಿತು. ಲಾಕ್‌ಡೌನ್ ನಿರ್ಬಂಧಗಳು ಇನ್ನಷ್ಟು ಸಡಿಲವಾಗುವ ನಿರೀಕ್ಷೆ ಮತ್ತು ಕೇಂದ್ರದ ಕೋವಿಡ್ ಲಸಿಕೆ ನೀತಿಯು ಷೇರುಪೇಟೆಯಲ್ಲಿ ಹೊಸ ವಿಶ್ವಾಸ ತುಂಬಿತು ಎಂದು ಜಿಯೋಜಿತ್ ಹಣಕಾಸು ಸೇವೆಗಳ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ. ಬಿಎಸ್‌ಇ ಮಿಡ್ ಮತ್ತು ಸ್ಮಾಲ್ ಕ್ಯಾಪ್ ಸೂಚ್ಯಂಕಗಳು ಶೇ 1.38ರವರೆಗೂ ಏರಿಕೆ ಕಂಡವು.

ರೂಪಾಯಿ: ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕ ಡಾಲರ್ ಎದುರು ರೂಪಾಯಿ ಮೌಲ್ಯ 19 ಪೈಸೆ ಹೆಚ್ಚಾಗಿ ಒಂದು ಡಾಲರ್‌ಗೆ ₹ 72.80ರಂತೆ ವಿನಿಮಯಗೊಂಡಿತು.

₹ 100ರ ಸನಿಹ ಡೀಸೆಲ್ ಬೆಲೆ

ನವದೆಹಲಿ (ಪಿಟಿಐ): ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಸೋಮವಾರ ಹೆಚ್ಚಳ ಆಗಿದ್ದು ರಾಜಸ್ಥಾನದಲ್ಲಿ ಲೀಟರ್ ಡೀಸೆಲ್ ಬೆಲೆ ₹ 100ರ ಸನಿಹ ಬಂದಿದೆ.

ಪೆಟ್ರೋಲ್ ಬೆಲೆ 28 ಪೈಸೆ, ಡೀಸೆಲ್ ಬೆಲೆ 27 ಪೈಸೆ ಹೆಚ್ಚಾಗಿದೆ. ಕರ್ನಾಟಕ, ರಾಜಸ್ಥಾನ, ಮಧ್ಯಪ್ರದೇಶ, ಮಹಾರಾಷ್ಟ್ರ, ಆಂಧ್ರಪ್ರದೇಶ, ತೆಲಂಗಾಣ ಮತ್ತು ಲಡಾಖ್‌ನಲ್ಲಿ ಪೆಟ್ರೋಲ್ ದರವು ಈಗಾಗಲೇ ₹ 100ರ ಗಡಿಯನ್ನು ದಾಟಿದೆ.

ರಾಜಸ್ಥಾನದ ಶ್ರೀಗಂಗಾನಗರ ಜಿಲ್ಲೆಯಲ್ಲಿ ಲೀಟರ್ ಪೆಟ್ರೋಲ್ ದರ ₹ 106.39 ಆಗಿದೆ. ಇದು ದೇಶದಲ್ಲಿಯೇ ಅತಿಹೆಚ್ಚು. ಇಲ್ಲಿ ಡೀಸೆಲ್ ದರ ಈಗ ₹ 99.24ಕ್ಕೆ ತಲುಪಿದೆ. ಬೆಂಗಳೂರಿನಲ್ಲಿ ಪೆಟ್ರೋಲ್ ಬೆಲೆ ₹ 98.55, ಡೀಸೆಲ್ ಬೆಲೆ ₹ 91.46 ಆಗಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಪ್ರತಿ ಬ್ಯಾರಲ್‌ಗೆ 72 ಅಮೆರಿಕನ್ ಡಾಲರ್‌ಗೆ ಸಮೀಪಿಸುತ್ತಿದೆ. ಇದು ಎರಡು ವರ್ಷಗಳ ಗರಿಷ್ಠ ಬೆಲೆ.

ಕುಶಾಕ್ ತಯಾರಿಕೆ ಆರಂಭ

ನವದೆಹಲಿ (ಪಿಟಿಐ): ಸ್ಕೋಡಾ ಆಟೊ ಇಂಡಿಯಾ ಕಂಪನಿಯು ಜುಲೈನಲ್ಲಿ ವಿತರಣೆ ಮಾಡಲಿರುವ ಎಸ್‌ಯುವಿ ಕುಶಾಕ್ (KUSHAQ) ತಯಾರಿಕೆಯನ್ನು ಆರಂಭಿಸಿರುವುದಾಗಿ ಸೋಮವಾರ ತಿಳಿಸಿದೆ.

ಕಂಪನಿಯ ‘ಇಂಡಿಯಾ 2.0’ ಯೋಜನೆಯ ಅಡಿ ಹೊರಬರುತ್ತಿರುವ ಮೊದಲ ಕಾರು ಇದ್ದಾಗಿದ್ದು, ಪುಣೆಯ ಚಾಕನ್‌ನಲ್ಲಿ ಇರುವ ಸ್ಕೋಡಾ ಆಟೊ ಫೋಕ್ಸ್‌ವ್ಯಾಗನ್ ಇಂಡಿಯಾ ಪ್ರೈವೇಟ್ ಲಿ. ಘಟಕದಲ್ಲಿ ತಯಾರಾಗುತ್ತಿದೆ. ಕುಶಾಕ್ ವಾಹನದ ಬೆಲೆಯನ್ನು ಕಂಪನಿಯು ತಿಳಿಸಬೇಕಿದೆ.

ಕಚ್ಚಾತೈಲದ ಬೆಲೆ ಹೆಚ್ಚಳದಿಂದ ಪೆಟ್ರೋಲ್ ಬೆಲೆ ಏರಿಕೆ: ಪ್ರಧಾನ್

ಅಹಮದಾಬಾದ್ (ಪಿಟಿಐ): ದೇಶದಲ್ಲಿ ಪೆಟ್ರೋಲ್, ಡೀಸೆಲ್ ದರ ಹೆಚ್ಚಳಕ್ಕೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲ ದರದಲ್ಲಿ ಆಗಿರುವ ಏರಿಕೆಯೇ ಕಾರಣ ಎಂದು ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ಧರ್ಮೇಂದ್ರ ಪ್ರಧಾನ್ ಹೇಳಿದ್ದಾರೆ.

ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಹೆಚ್ಚಾಗಿದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ದರವು ಪ್ರತಿ ಬ್ಯಾರಲ್‌ಗೆ 70 ಡಾಲರ್‌ಗಳನ್ನು ದಾಟಿರುವುದೇ ಇದಕ್ಕೆ ಮುಖ್ಯ ಕಾರಣ. ಭಾರತವು ತನ್ನ ಅಗತ್ಯದ ಶೇಕಡ 80ರಷ್ಟು ತೈಲವನ್ನು ಆಮದು ಮಾಡಿಕೊಳ್ಳುತ್ತಿದೆ. ಹೀಗಾಗಿ ದೇಶದ ಗ್ರಾಹಕರ ಮೇಲೆ ನಕಾರಾತ್ಮಕ ಪರಿಣಾಮ ಉಂಟಾಗುತ್ತಿದೆ ಎಂದು ಸಚಿವರು ಹೇಳಿದ್ದಾರೆ.

ಪೆಟ್ರೋಲ್, ಡೀಸೆಲ್ ದರದಲ್ಲಿ ಆಗುತ್ತಿರುವ ಏರಿಕೆಯ ಕುರಿತು ಸುದ್ದಿಗಾರರ ಪ್ರಶ್ನೆಗೆ ಅವರು ಈ ರೀತಿ ಪ್ರತಿಕ್ರಿಯೆ ನೀಡಿದ್ದಾರೆ. ಇಂಡಿಯನ್ ಆಯಿಲ್ ಕಾರ್ಪೊರೇಷನ್ (ಐಒಸಿ) ಕಂಪನಿಯು ವಡೋದರಾದಲ್ಲಿ ತೈಲ ಸಂಸ್ಕರಣಾಗಾರದ ಸಾಮರ್ಥ್ಯ ಹೆಚ್ಚಿಸಲು ಮುಂದಾಗಿದೆ. ಈ ಸಂಬಂಧ ಗುಜರಾತ್ ಸರ್ಕಾರ ಮತ್ತು ಕಂಪನಿಯ ಮಧ್ಯೆ ಸೋಮವಾರ ಗಾಂಧಿನಗರದಲ್ಲಿ ಒಪ್ಪಂದ ಏರ್ಪಟ್ಟಿದ್ದು, ಈ ಸಂದರ್ಭದಲ್ಲಿ ಪ್ರಧಾನ್ ಉಪಸ್ಥಿತರಿದ್ದರು. ಪೆಟ್ರೋಲ್, ಡೀಸೆಲ್ ಅನ್ನು ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯಾಪ್ತಿಗೆ ತರಲು ಅವರು ಸಹಮತ ವ್ಯಕ್ತಪಡಿಸಿದ್ದಾರೆ. ‘ಈ ಉತ್ಪನ್ನಗಳ ಬೆಲೆಯು ಜಾಗತಿಕ ಮಾರುಕಟ್ಟೆಯ ನಿಯಂತ್ರಣಕ್ಕೆ ಒಳಪಟ್ಟಿವೆ. ತೈಲವನ್ನು ಜಿಎಸ್‌ಟಿ ವ್ಯಾಪ್ತಿಗೆ ತರಬೇಕು ಎಂಬುದು ನನ್ನ ಅಭಿಪ್ರಾಯ’ ಎಂದು ಹೇಳಿದ್ದಾರೆ.

ಧರ್ಮೇಂದ್ರ ಪ್ರಧಾನ್

ಪಾಕಿಸ್ತಾನದಲ್ಲಿ ರೈಲು ಅಪಘಾತ: 50 ಮಂದಿ ಸಾವು

ಕರಾಚಿ, ಪಾಕಿಸ್ತಾನ (ಪಿಟಿಐ): ಪಾಕಿಸ್ತಾನದ ದಕ್ಷಿಣ ಸಿಂಧ್ ಪ್ರಾಂತ್ಯದಲ್ಲಿ ಸೋಮವಾರ ಬೆಳಿಗ್ಗೆ ಎರಡು ಪ್ರಯಾಣಿಕ ರೈಲುಗಳು ಡಿಕ್ಕಿಯಾಗಿ ಸುಮಾರು 50 ಮಂದಿ ಪ್ರಯಾಣಿಕರು ಮೃತಪಟ್ಟು, 70 ಮಂದಿ ಪ್ರಯಾಣಿಕರು ಗಾಯಗೊಂಡಿರುವ ಘಟನೆ ನಡೆದಿದೆ.

ಈ ಎರಡು ರೈಲುಗಳಲ್ಲಿ ಸುಮಾರು ಒಂದು ಸಾವಿರಕ್ಕೂ ಹೆಚ್ಚು ಮಂದಿ ಪ್ರಯಾಣಿಸುತ್ತಿದ್ದರು. ಸೇನೆ ಮತ್ತು ಅರೆಸೇನಾ ಪಡೆಗಳು ರಕ್ಷಣಾ ಕಾರ್ಯಾಚರಣೆ ಕೈಗೆತ್ತಿಕೊಂಡಿವೆ. ಕರಾಚಿಯಿಂದ ಸರ್‌ಗೊಧಾಕ್ಕೆ ಹೋಗುತ್ತಿದ್ದ ಮಿಲ್ಲತ್ ಎಕ್ಸ್‌ಪ್ರೆಸ್ ರೈಲು ಹಳಿ ತಪ್ಪಿ ಬೋಗಿಗಳು ಪಕ್ಕದ ಹಳಿಗೆ ಉರುಳಿಬಿದ್ದಿದ್ದು, ರಾವಲ್ಪಿಂಡಿಯಿಂದ ಕರಾಚಿಗೆ ಬರುತ್ತಿದ್ದ ಸರ್ ಸೈಯದ್ ಎಕ್ಸ್‌ಪ್ರೆಸ್ ರೈಲು ಇದಕ್ಕೆ ಡಿಕ್ಕಿ ಹೊಡೆದಿದೆ. ಘೋಟ್ಕಿ ಜಿಲ್ಲೆ ವ್ಯಾಪ್ತಿಯ ಧಾರ್ಕಿ ನಗರದ ಬಳಿ ಈ ಅಪಘಾತ ಸಂಭವಿಸಿದೆ ಎಂದು ಪಾಕಿಸ್ತಾನದ ರೈಲ್ವೆ ವಕ್ತಾರರು ಹೇಳಿದ್ದಾರೆ.

ಐ.ಟಿ. ವಿವರ ಸಲ್ಲಿಕೆಗೆ ಹೊಸ ಪೋರ್ಟಲ್ ಆರಂಭ

ನವದೆಹಲಿ (ಪಿಟಿಐ): ಹೊಸ ಆಯ್ಕೆಗಳನ್ನು ಹೊಂದಿರುವ, ಆದಾಯ ತೆರಿಗೆ ವಿವರಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಲು ಅವಕಾಶ ಕಲ್ಪಿಸುವ ಇ–ಪೋರ್ಟಲ್‌ಗೆ ಸೋಮವಾರ ಚಾಲನೆ ನೀಡಲಾಯಿತು.

ಹೊಸ ಪೋರ್ಟಲ್‌ನ ವಿಳಾಸ: http://incometax.gov.in. ಇದು ಈವರೆಗೆ ಬಳಕೆಯಲ್ಲಿ ಇದ್ದ http://incometaxindiaefiling.gov.inಗೆ ಬದಲಾಗಿ ಚಾಲ್ತಿಗೆ ಬಂದಿದೆ.

ಹೊಸ ಪೋರ್ಟಲ್ ಸ್ಥಿರವಾಗಿ ಕಾರ್ಯನಿರ್ವಹಿಸುವಂತೆ ಆಗಲು, ಆದಾಯ ತೆರಿಗೆ ಪಾವತಿದಾರರಿಗೆ ಎಲ್ಲ ಸೌಲಭ್ಯಗಳನ್ನು ಬಳಸಿಕೊಳ್ಳುವಂತಾಗಲು ತುಸು ಸಮಯ ಬೇಕಾಗಬಹುದು ಎಂದು ಅಧಿಕಾರಿಗಳು ಹೇಳಿದ್ದಾರೆ. ಹೊಸ ಪೋರ್ಟಲ್, ಆದಾಯ ತೆರಿಗೆ ವಿವರ ಸಲ್ಲಿಸುವುದನ್ನು ಸುಲಭಗೊಳಿಸುವಂತೆ ಇದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಆನ್‌ಲೈನ್ ತೆರಿಗೆ ಪಾವತಿ ವ್ಯವಸ್ಥೆ ಹಾಗೂ ಮೊಬೈಲ್ ಆ್ಯಪ್‌ಅನ್ನು ಈ ತಿಂಗಳ 18ರಂದು ಬಳಕೆಗೆ ಮುಕ್ತವಾಗಿಸಲಾಗುವುದು ಎಂದು ನೇರ ತೆರಿಗೆಗಳ ಕೇಂದ್ರ ಮಂಡಳಿ (ಸಿಬಿಡಿಟಿ) ಹೇಳಿದೆ.

ಪಾರ್ಲೆ ಗೋಧಿ ಹಿಟ್ಟು

ನವದೆಹಲಿ (ಪಿಟಿಐ): ಬಿಸ್ಕತ್ತು ತಯಾರಿಕಾ ಕಂಪನಿ ಪಾರ್ಲೆ, ಗೋಧಿ ಹಿಟ್ಟು ಮಾರುಕಟ್ಟೆ ಪ್ರವೇಶಿಸಿದೆ. ‘ಪಾರ್ಲೆ–ಜಿ ಚಕ್ಕಿ ಆಟ್ಟಾ’ ಹೆಸರಿನಲ್ಲಿ ಗೋಧಿ ಹಿಟ್ಟನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ.

‘ಈ ಉತ್ಪನ್ನದ ಬಿಡುಗಡೆ ಮೂಲಕ ಪಾರ್ಲೆ ಕಂಪನಿಯು ಉತ್ಪನ್ನಗಳ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳುತ್ತಿದೆ. ಬ್ರ್ಯಾಂಡೆಡ್ ಗೋಧಿಹಿಟ್ಟಿಗೆ ಮಾರುಕಟ್ಟೆಯಲ್ಲಿ ಹೆಚ್ಚಿನ ಬೇಡಿಕೆ ಇದೆ. ಸಾಂಕ್ರಾಮಿಕ ಹರಡಿದ ನಂತರದಲ್ಲಿ ಇದಕ್ಕೆ ಬೇಡಿಕೆ ಜಾಸ್ತಿ ಆಗಿದೆ’ ಎಂದು ಪಾರ್ಲೆ ಕಂಪನಿಯ ಹಿರಿಯ ಅಧಿಕಾರಿ ಮಯಾಂಕ್ ಶಾ ಹೇಳಿದ್ದಾರೆ.

ಮುಂಬೈ ಧಾರಣೆ

ಶೇಂಗಾ

7-6-2021

ಜಾವಾ 70/80(ಹೊಸ)	10050-10100
ಜಾವಾ 80/90(ಹೊಸ)	9250-9300
ದಪ್ಪ ಮಧ್ಯಪ್ರದೇಶ(ಹೊಸ)	10400-10500
ದಪ್ಪ ಗುಜರಾತ್(ಹೊಸ)	9600-9700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1480 (1470)
ಒಂದು ವಾರದ ಡೆಲಿವರಿ	1475 (1465)
ಸೋಯಾ ಕಚ್ಚಾ	1395 (1385)
ಪಾಮ್ ವಾರದ ಡೆಲಿವರಿ	1253 (1243)
ಸೂರ್ಯಕಾಂತಿ ಎಣ್ಣೆ ಕಚ್ಚಾ	1460 (1480)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
48,700 (48,600)
ಬೆಳ್ಳಿ ಕೆ.ಜಿ 70,900 (71,500)

ಆವರಣದಲ್ಲಿ ಶನಿವಾರದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	700-800
ನಡುಗೋಲು	850-900
ರಾಶಿ	950-1000
ರಾಶಿ ಉತ್ತಮ	1000-1050
ಜರಡಿ	1150-1200
ಹೆರಕಿದ್ದು	1500-1600
ಹಸಿರು ಸಾಧಾರಣ	900-1000
ಹಸಿರು ಉತ್ತಮ	1100-1200
ಹಸಿರು ಅತಿ ಉತ್ತಮ	1400-1500
ಕಾಳು ಮೆಣಸು	350-400
ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	23500-40000
ಹಳತು	42500-50000
ಕಾರ್ಕಳ	
ಹೊಸತು	36000-40000
ಹಳತು	40000-50000
ಕುಂದಾಪುರ	
ಹಳೆಚಾಲಿ	40000-49000
ಹೊಸಚಾಲಿ	35000-40000
ಪುತ್ತೂರು	
ಹೊಸತು	28000-40000
ಸಿದ್ದಾಪುರ	
ಬಿಳಿಗೋಟು	25219-31129
ಚಾಲಿ	34099-36639
ಕೋಕ	20619-28619
ಕೆಂಪುಗೋಟು	26699-31399
ರಾಶಿ	36089-40499
ತಟ್ಟಿಬೆಟ್ಟೆ	29699-37029
ಯಲ್ಲಾಪುರ	
ಬಿಳಿಗೋಟು	27620-31040
ಚಾಲಿ	31761-36660
ರಾಶಿ	40060-41880
ತಟ್ಟಿಬೆಟ್ಟೆ	30090-30660
ರಾಮನಗರ ರೇಷ್ಮೆ	
ಮಿಶ್ರತಳಿ	283-401
ದ್ವಿತಳಿ	279-512

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	11100	10700	10800	161.65 ಸೆಂಟ್ಸ್
ಎಸಿ	4675	4300	4175	
ಆರ್‌ಪಿ	5250	5250	5225	ಲಂಡನ್
ಆರ್‌ಸಿ	3125	3100	3110	1612 ಡಾಲರ್ಸ್